

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 2 ಸೋಮವಾರ 2023

ಸಂಪುಟ: 43 | ಸಂಚಿಕೆ: 256 | ಪುಟಗಳು: 12


ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಹೊಸ ವರ್ಷದಂದು ಪ್ರವಾಸಿ ತಾಣ, ದೇವಾಲಯಗಳಲ್ಲಿ ಜನ ಸಾಗರ





ಮೈಸೂರು, ಜ.1(ಎಂಟಿವೈ)– ಎರಡು ವರ್ಷದ ಬಳಿಕ ಸಂಗೀತ ಹಾಗೂ ಪಾನಗೋಷ್ಠಿಯೊಂದಿಗೆ ರಾತ್ರಿಯಿಡಿ ಸಂಭ್ರಮದಿಂದ ಹೊಸ ವರ್ಷವನ್ನು ಸ್ವಾಗತಿಸಿದ ಮೈಸೂರಿಗರು ಭಾನುವಾರ ಮುಂಜಾನೆಯಿಂದಲೇ ದೇವಾಲಯಗಳ ಮೊರೆ ಹೋಗಿ ಭಕ್ತಿ ಪ್ರದರ್ಶಿಸಿದರಲ್ಲದೆ, ಒಳಿತಿಗಾಗಿ ಪ್ರಾರ್ಥಿಸಿದರು. ಭಕ್ತರು ಹಾಗೂ ಪ್ರವಾಸಿಗರ ಆಗಮನದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ಸೇರಿದಂತೆ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ಭಕ್ತರ ದಂಡು ಕಿಕ್ಕಿರಿದು ತುಂಬಿ ತುಳುಕಿತು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಹೊಸ ವರ್ಷದ ಸಂಭ್ರಮಕ್ಕೆ ಮಂಕು ಕವಿದಿತ್ತು. ಆದರೆ, ಕೊರೊನಾ ಸೋಂಕಿನ ಹಾವಳಿ ನಿಯಂತ್ರಣಕ್ಕೆ ಬಂದು ಜನಜೀವನ ಸಹಸ ಸ್ಥಿತಿಗೆ ಮರಳಿರುವುದರಿಂದ ಈ ಬಾರಿ ಹೊಸ ವರ್ಷವನ್ನು ಸಡಗರ ಸಂಭ್ರಮದಿಂದ ಸ್ವಾಗತಿಸಿದರು. ಎಂದಿನಂತೆ ರಾತ್ರೀಯಿಡಿ ಮೋಜು–ಮಸ್ತಿಯೊಂದಿಗೆ ಹೊಸ ವರ್ಷವನ್ನು ಆಚರಿಸಿದ ನಗರದ ಜನತೆ ಹಾಗೂ ಪ್ರವಾಸಿಗರು ಹೊಸ ವರ್ಷದ ಮೊದಲ ದಿನ ದೇವಾಲಯಗಳಿಗೆ ಬೇಟಿ ನೀಡಿ ದೇವರ ದರ್ಶನ ಪಡೆಯುವುದರೊಂದಿಗೆ ವಿಶೇಷ ಪೂಜೆ ಸಲ್ಲಿಸುವ ವಾಡಿಕೆ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಮೈಸೂರಿನ ವಿವಿಧೆಡೆ ಇರುವ ಬಹುತೇಕ ಎಲ್ಲಾ ದೇವಾಲಯಗಳಲ್ಲಿಯೂ ಭಕ್ತರ ದಂಡು ಕಂಡು ಬಂದಿತು.

ಚಾಮುಂಡಿಬೆಟ್ಟ: ಮೈಸೂರು ಅರಮನೆಯ ಆವರಣದಲ್ಲಿ ಕಳೆದ ರಾತ್ರಿ ಆಯೋಜಿಸಿದ್ದ ಪೊಲೀಸ್ ಬ್ಯಾಂಡ್ ವಾದನ ಹಾಗೂ ಬಾಣಬಿರುಸುಗಳ ಪ್ರದರ್ಶನ ವೀಕ್ಷಿಸಿ ಸಂಭ್ರಮಿಸಿದ್ದ ಅಪಾರ ಸಂಖ್ಯೆ ಮೈಸೂರಿಗರು, ಇಂದು ಬೆಳಗ್ಗಿನಿಂದಲೇ ಕುಟುಂಬದ ಸದಸ್ಯರೊಂದಿಗೆ ಚಾಮುಂಡಿಬೆಟ್ಟದತ್ತ ದಾವಿಸತೊಡಗಿದರು. ಏಕಕಾಲದಲ್ಲಿ ಮೈಸೂರಿನ ನಿವಾಸಿಗಳು ಹಾಗೂ ವಿವಿಧೆಡೆಗಳಿಂದ ಪ್ರವಾಸಿಗರು ಆಗಮಿಸಿದ್ದರಿಂದ ಚಾಮುಂಡಿಬೆಟ್ಟದಲ್ಲಿ ಜನಜಂಗುಳಿಯೊಂದಿಗೆ ವಾಹನ ದಟ್ಟಣೆ ಹೆಚ್ಚಾಗಿತ್ತು. ಹೊಸ ವರ್ಷದ ಮೊದಲ ದಿನ ಬೆಟ್ಟಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಬೆಟ್ಟದಲ್ಲಿ ಬೆಳಗ್ಗಿನಿಂದ ಸಂಜೆವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಬಂದ ಭಕ್ತರು ನಾಡ ದೇವಿಯ ದರ್ಶನ ಪಡೆದರು.

▶ 10ನೇ ಪುಟಕ್ಕೆ





ಹೊಸ ವರ್ಷದ ಅಂಗವಾಗಿ ಮೈಸೂರಿನ ಯೋಗನರಸಿಂಹ ದೇವಸ್ಥಾನದಲ್ಲಿ ದೇವರ ದರ್ಶನಕ್ಕಾಗಿ ಸಾಲುಗಟ್ಟಿ ನಿಂತಿದ್ದ ಭಕ್ತ ಸಮೂಹವನ್ನು ಕಾಣಬಹುದು.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ 25 ರೂ. ಹೆಚ್ಚಳ

ನವದೆಹಲಿ, ಜ.1– ಹೊಸ ವರ್ಷ ದಿನ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ವಾಣಿಜ್ಯ ಬಳಕೆ LPG ಸಿಲಿಂಡರ್‌ನ ಬೆಲೆ ಪ್ರತಿ ಸಿಲಿಂಡರ್‌ಗೆ 25 ರೂಪಾಯಿ ಹೆಚ್ಚಾಗಿದೆ. ಗೃಹಬಳಕೆಯ LPG ಸಿಲಿಂಡರ್‌ಗಳ ದರದಲ್ಲಿ ಯಾವುದೇ ಹೆಚ್ಚಳವಿಲ್ಲ.


ಈ ಹೆಚ್ಚಳದೊಂದಿಗೆ ದೆಹಲಿಯಲ್ಲಿ ಇಂದಿನಿಂದ ಜಾರಿಗೆ ಬರುವಂತೆ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 1,769 ರೂಪಾಯಿಯಾಗಿದೆ. ಹೊಸ ವರ್ಷದ ಆರಂಭದಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಹೆಚ್ಚಳವಾಗಿರುವುದರಿಂದ ಹೊಟೇಲ್, ಕ್ಯಾಂಟೀನ್, ರೆಸ್ಟೋರೆಂಟ್, ಸ್ಟಾರ್ ಹೊಟೇಲ್‌ಗಳಲ್ಲಿ ಆಹಾರ ಬೆಲೆ ಹೆಚ್ಚಳವಾದರೆ ಅಚ್ಚರಿಯಿಲ್ಲ.

SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 5500
8884304444

S.B GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5400
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ
ಕೂಡಲೇ ಸಂಪರ್ಕಿಸಿ.
9964522225

ಸಿದ್ದೇಶ್ವರ ಶ್ರೀಗಳ ಆರೋಗ್ಯ ಸ್ಥಿತಿ ಗಂಭೀರ

ಕಳವಳ ವ್ಯಕ್ತಪಡಿಸಿದ ಸಿಎಂ ಬೊಮ್ಮಾಯಿ, ಪ್ರಧಾನಿ ಮೋದಿ



ವಿಜಯಪುರ,ಜ.1–ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರ ಆರೋಗ್ಯ ಪರಿಸ್ಥಿತಿ ಗಂಭೀರವಾಗಿದೆ ಎಂದು ಭಾನುವಾರ ತಿಳಿದುಬಂದಿದೆ.

ಕಳೆದ ಒಂದು ವಾರಕ್ಕಿಂತಲೂ ಹೆಚ್ಚು ದಿನದಿಂದ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿರುವ ಸ್ವಾಮೀಜಿಗಳ ದರ್ಶನಕ್ಕಾಗಿ ನಿತ್ಯ ಸಾವಿರಾರು ಭಕ್ತರು, ಜನಪ್ರತಿನಿಧಿಗಳು, ಸಚಿವರು, ಶಾಸಕರುಗಳು ಆಶ್ರಮಕ್ಕೆ ಭೇಟಿ ನೀಡುತ್ತಿದ್ದಾರೆ.

ಶ್ರೀಗಳ ಅನಾರೋಗ್ಯ ವಿಚಾರಕ್ಕೆ ಸಂಬಂಧಿಸಿದಂತೆ ನಗರದ ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ್ ಮೆಡಿಕಲ್ ಕಾಲೇಜ್ ಹಾಗೂ ಹಾಸ್ಪಿಟಲ್ ವೈದ್ಯರ ತಂಡ ಶ್ರೀಗಳಿಗೆ ಚಿಕಿತ್ಸೆ ನೀಡುತ್ತಿದೆ. ಯುರೋಲಾಜಿಸ್ಟ್ ಡಾ.ಎಸ್.ಬಿ.ಪಾಟೀಲ್, ಬಿ.ಎಂ. ಪಾಟೀಲ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲರಾದ ಡಾ. ಅರವಿಂದ ಪಾಟೀಲ್, ಡಾ.ಮಲ್ಲಣ್ಣ ಮೂಲಿಮನಿ ಎಂಡಿ ಅವರ ನೇತೃತ್ವದಲ್ಲಿ ಶ್ರೀಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ನಡುವೆ ಶ್ರೀಗಳ ಅನಾರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು

▶ 10ನೇ ಪುಟಕ್ಕೆ

ಅನಾರೋಗ್ಯದ ನಡುವೆಯೂ ಪುಸ್ತಕ ಬಿಡುಗಡೆ ಮಾಡಿದ ಸಿದ್ದೇಶ್ವರ ಸ್ವಾಮೀಜಿ

ವಿಜಯಪುರ, ಜ.1– ತಮ್ಮ 'ಜ್ಞಾನ ಯೋಗ ಸಂಪುಟ' ಪುಸ್ತಕವನ್ನು ಸಿದ್ದೇಶ್ವರ ಸ್ವಾಮೀಜಿಯವರು ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ಬಿಡುಗಡೆ ಮಾಡಿದರು. ತಮ್ಮ ಗುರುಗಳಾದ ಮಲ್ಲಿಕಾರ್ಜುನಶ್ರೀ ಕುರಿತಾಗಿ ಸಿದ್ದೇಶ್ವರ ಸ್ವಾಮೀಜಿ ಬರೆದಿರುವ ಪುಸ್ತಕ ಇದಾಗಿದ್ದು, ಹಾಸಿಗೆ ಮೇಲೆ ಮಲಗಿಕೊಂಡು ತಮ್ಮ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ವೇಳೆ ಸುತ್ತೂರು ಮಠದ ಶ್ರೀಗಳು, ಗದುಗಿನ ಶಿವಾನಂದ ಮಠದ ಸದಾಶಿವಾನಂದ ಸ್ವಾಮೀಜಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಿದ್ದೇಶ್ವರ ಸ್ವಾಮೀಜಿಗಳ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ಹೇಳಿದ್ದಾರೆ. ಆದರೂ ಸಹ ಕೆಲ ವದಂತಿಗಳು ಹರಿದಾಡುತ್ತಿವೆ. ಈ ಹಿನ್ನೆಲೆಯಲ್ಲಿ ಸಿದ್ದೇಶ್ವರ ನೋಡಿ ದರ್ಶನ ಪಡೆಯಲು ವಿಜಯಪುರದ ಜ್ಞಾನಯೋಗಾಶ್ರಮದತ್ತ ಭಕ್ತರ ದಂಡು ಧಾವಿಸಿ ಬರುತ್ತಿದೆ. ಉತ್ತರಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬಂದಿರುವ ಭಕ್ತರು ಯೋಗಾಶ್ರಮದ ಗೇಟ್ ಮುಂದೆ ಜಮಾವಣೆಯಾಗಿದ್ದು, ಶ್ರೀಗಳ ದರ್ಶನಕ್ಕಾಗಿ ಕಾಯುತ್ತಿದ್ದಾರೆ. ಇದರಿಂದ ಸಿದ್ದೇಶ್ವರ ಸ್ವಾಮೀಜಿಗಳ ದರ್ಶನಕ್ಕಾಗಿ ಎಲ್‌ಇಡಿ ಪರದೆ ಅಳವಡಿಕೆ ಮಾಡಲಾಗಿದೆ.

ಕೇಂದ್ರ ಸಚಿವ ಸಂಪುಟ ವಿಸ್ತರಣೆ, ಬಿಜೆಪಿ ಉಸ್ತುವಾರಿಗಳ ಬದಲಾವಣೆ?

ನವದೆಹಲಿ, ಜ.1– ಮುಂಬರುವ 2024ರ ಲೋಕಸಭೆ ಚುನಾವಣೆ ಹಾಗೂ ಈ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಸಿದ್ಧಗೊಳ್ಳುತ್ತಿರುವ ಬಿಜೆಪಿ, ಪಕ್ಷ ಮರು ಸಂಘಟನೆಗೆ ಮುಂದಾಗಿದೆ. ಪ್ರಮುಖ ಉಸ್ತುವಾರಿಗಳ ಬದಲಾವಣೆ, ಕೇಂದ್ರಸಚಿವ ಸಂಪುಟ ವಿಸ್ತರಣೆಗೂ ಆಲೋಚಿಸುತ್ತಿದೆ.

ರಾಜಸ್ಥಾನ, ಛತ್ತೀಸ್‌ಗಢ, ಮಧ್ಯಪ್ರದೇಶ, ಕರ್ನಾಟಕ, ತೆಲಂಗಾಣ, ತ್ರಿಪುರಾ, ಮೇಘಾಲಯ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಜಮ್ಮು ಮತ್ತು ಕಾಶ್ಮೀರ ಸೇರಿದಂತೆ 10 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ರೂಪುರೇಷೆ ಸಿದ್ಧಪಡಿಸುತ್ತಿದೆ ಎಂದು ಮೂಲಗಳು ಹೇಳಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಹೈಕಮಾಂಡ್ ಯುವಕರತ್ತ ಹೆಚ್ಚು ಗಮನ ಹರಿಸುತ್ತಿದೆ. ಕೇಂದ್ರ ಸಚಿವ ಸಂಪುಟ ಮತ್ತು ಸಂಘಟನೆಯಲ್ಲಿ ಎರಡರಲ್ಲೂ ಯುವಕರಿಗೆ ಹೆಚ್ಚು ಆದ್ಯತೆ ನೀಡುತ್ತಿದೆ.



ಪ್ರಮುಖ ರಾಜ್ಯಗಳು ಮತ್ತು ಚುನಾವಣೆ ನಡೆಯಲಿರುವ ರಾಜ್ಯಗಳ ನಾಯಕರ ಮೇಲೆ ಹೆಚ್ಚು ಗಮ ನಹರಿಸಲು ನಿರ್ಧರಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅಧ್ಯಕ್ಷ ಅವಧಿ ಜನವರಿಯಲ್ಲಿ ಅಂತ್ಯಗೊಳ್ಳಲಿದೆ.

ಹೀಗಾಗಿ ಈ ತಿಂಗಳು ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯಲಿದೆ. ನಡ್ಡಾ ಅವರ ಅವದಿಯನ್ನು ವಿಸ್ತರಿಸುವ ಅಧಿಕೃತ ಘೋಷಣೆಯೂ ಇದೇ ತಿಂಗಳು ಹೊರಬೀಳುವ ನಿರೀಕ್ಷೆಯಿದೆ.

ಬಿಜೆಪಿ ಮೂಲಗಳ ಪ್ರಕಾರ, ನಡ್ಡಾ ಅವರ ಅವಧಿಯನ್ನು ವಿಸ್ತರಿಸಿದರೂ ಕೂಡ ಪದಾಧಿಕಾರಿಗಳು ಮತ್ತು ರಾಜ್ಯ ಉಸ್ತುವಾರಿಗಳು ಮತ್ತು ಸಹ ಉಸ್ತುವಾರಿ ಗಳಲ್ಲಿ ಪ್ರಮುಖ ಬದಲಾವಣೆಯಾಗುವ ಸಾಧ್ಯತೆಯಿದೆ.

ಮಕರ ಸಂಕ್ರಾಂತಿ ನಂತರ ಮೋದಿ ಅವರು ತಮ್ಮ ಸಚಿವ ಸಂಪುಟವನ್ನು ಪುನಾರಚನೆ ಮಾಡುವ ಸಾಧ್ಯತೆ ಇದೆ. ಈ ಹಿಂದಿನಂತೆ ಹೊಸ ಮತ್ತು ಯುವ ಸಂಸದರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬಹುದು ಎಂದು ಮೂಲಗಳು ತಿಳಿಸಿವೆ. ಸಂಸತ್ತಿನ ಬಜೆಟ್ ಅಧಿವೇಶನ ಇನ್ನೂ ನಿರ್ಧಾರವಾಗಿಲ್ಲ. ಜನವರಿ 30ರ ವೇಳೆಗೆ ಅಧಿವೇಶನ ಪ್ರಾರಂಭವಾಗುವ ನಿರೀಕ್ಷೆಯಿದ್ದು, ಅದಕ್ಕೂ ಮೊದಲೇ ಸಂಪುಟ ವಿಸ್ತರಣೆಯಾಗುವ ಸಾಧ್ಯತೆಯಿದೆ.

ಅರವಿಂದ ಲಿಂಬಾವಳಿ ಹೆಸರು ಬರೆದಿಟ್ಟು ತಲೆಗೆ ಗುಂಡು ಹಾರಿಸಿಕೊಂಡು ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು, ಜ.1– ಬಿಜೆಪಿ ಶಾಸಕ ಅರವಿಂದ ಲಿಂಬಾಳಿ ಹೆಸರು ಬರೆದಿಟ್ಟು ಕಾರಿನಲ್ಲೇ ತಲೆಗೆಗುಂಡು ಹಾರಿಸಿಕೊಂಡು ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ದಕ್ಷಿಣ ತಾಲೂಕಿನ ನೆಟ್ಟಿಗೆರೆ ಗ್ರಾಮದ ಬಳಿ ನಡೆದಿದೆ. ಹೆಚ್‌ಎಸ್‌ಆರ್ ಲೇಔಟ್ ನಿವಾಸಿ ಪ್ರದೀಪ್ (47) ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ. ಡೆತ್‌ನೋಟ್‌ನಲ್ಲಿ ಮಹದೇವಪುರ ಕ್ಷೇತ್ರದ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಸೇರಿದಂತೆ ಒಟ್ಟು 6 ಪ್ರಭಾವಿ ರಾಜಕಾರಣಿಗಳ

▶ 10ನೇ ಪುಟಕ್ಕೆ

ನೋಟು ಅಮಾನ್ಯೀಕರಣ: ಇಂದು ಸುಪ್ರೀಂಕೋರ್ಟ್ ತೀರ್ಪು

ನವದೆಹಲಿ, ಜ.1– ರೂ. 500 ಹಾಗೂ ರೂ. 1,000 ಮುಖಬೆಲೆಯ ನೋಟುಗಳನ್ನು ಅಮಾನ್ಯೀಕರಣ ಮಾಡಿದ್ದ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಕಟಿಸಲಿದೆ.

ನ್ಯಾಯಮೂರ್ತಿ ಎಸ್.ಎ.ನಜೀರ್ ನೇತೃತ್ವದಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠವು ತೀರ್ಪು ಪ್ರಕಟಿಸಲಿದೆ. ನಜೀರ್ ಅವರು ಜ.4ರಂದು ನಿವೃತ್ತರಾಗಲಿದ್ದು, ಸುಪ್ರೀಂ ಕೋರ್ಟ್‌ನ ಸೋಮವಾರದ ವೇಳಾಪಟ್ಟಿಯ ಪ್ರಕಾರ ಈ ವಿಷಯದಲ್ಲಿ ಎರಡು ಪ್ರತ್ಯೇಕ ತೀರ್ಪುಗಳನ್ನು ಪ್ರಕಟಿಸಲಿದ್ದಾರೆ.

ಇಂದಿನಿಂದ ಮನೆ ಬಾಡಿಗೆ ಮೇಲೆ ಜಿಎಸ್‌ಟಿ ಇಲ್ಲ

ನವದೆಹಲಿ, ಜ.1– ಮನೆ ಬಾಡಿಗೆ ಮೇಲೆ ಶೇ.18 ಸರಕು ಮತ್ತು ಸೇವಾ ತೆರಿಗೆ ವಿಧಿಸುತ್ತಿದ್ದ ನಿಯಮವನ್ನು ಇಂದಿನಿಂದ ಕೈಬಿಡಲಾಗಿದೆ. ಬಾಡಿಗೆದಾರನಿಗೆ ಕೇವಲ ವಸತಿ ಉದ್ದೇಶಕ್ಕೆ ಮನೆ ನೀಡಿದ್ದರೆ ಅದಕ್ಕೆ ಮನೆ ಮಾಲೀಕ ಜಿಎಸ್‌ಟಿ ಕಟ್ಟಬೇಕಿಲ್ಲ ಎಂದರು. ಕೇಂದ್ರೀಯ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ ಹೇಳಿದೆ. ಆದರೆ ಬಾಡಿಗೆ ತೆಗೆದುಕೊಂಡು ವಾಣಿಜ್ಯ ಉದ್ದೇಶಕ್ಕೆ ಬಳಸಿದರೆ ಶೇ.18ರಷ್ಟು ಜಿಎಸ್‌ಟಿ ಪಾವತಿಸಬೇಕಾಗುತ್ತದೆ. ಡಿಸೆಂಬರ್17 ರಂದು ನಡೆದ ಜಿಎಸ್‌ಟಿ ಕೌನ್ಸಿಲ್‌ಸಭೆಯ ಶಿಫಾರಾಸುಗಳು ಜ.1 ರಿಂದ ಜಾರಿಗೆ ಬರುತ್ತಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ

'ಯುವ ಮಿತ್ರ' ಯೋಜನೆ ಜಾರಿ

● ಗುಂಡ್ಲುಪೇಟೆ ತಾಲೂಕಿನ ಎಲ್ಲಾ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಫಾರಿ ಭಾಗ್ಯ ● ವಿದ್ಯಾರ್ಥಿಗಳಿಗಾಗಿ ಎರಡು ಹೊಸ ಬಸ್ ಖರೀದಿ ● ವನ್ಯಸಂಪತ್ತಿನ ರಕ್ಷಣೆಗಾಗಿ ವಿದ್ಯಾರ್ಥಿಗಳಿಂದ ಜಾಗೃತಿ ಮೂಡಿಸಲು ಮುಂದಾದ ಅರಣ್ಯ ಇಲಾಖೆ



ಬಂಡೀಪುರದಲ್ಲಿ ನೂತನವಾಗಿ ಜಾರಿಗೊಳಿಸಲು ಉದ್ದೇಶಿಸಿರುವ 'ಬಂಡೀಪುರ ಯುವ ಮಿತ್ರ' ಕಾರ್ಯಕ್ರಮದ ನೂತನ ಬಸ್.

■ ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜ.1– ಕಾಡ್ಗಿಚ್ಚು ಸೇರಿದಂತೆ ವಿವಿಧ ಸವಾಲುಗಳಿಂದ ನಲುಗಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವನ್ಯ ಸಂಪತ್ತಿನ ಸಂರಕ್ಷಣೆಗಾಗಿ ಇದೀಗ ವಿದ್ಯಾರ್ಥಿಗಳ ಮೂಲಕ ಜನಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಅರಣ್ಯ ಇಲಾಖೆ ಮುಂದಾಗಿದ್ದು, ವರ್ಷವಿಡಿ 'ಬಂಡೀಪುರ ಯುವ ಮಿತ್ರ' ಯೋಜನೆಯ ಮೂಲಕ ಅರಣ್ಯ ಪ್ರದೇಶ ವ್ಯಾಪ್ತಿಯ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸಫಾರಿ ಕೈಗೊಳ್ಳುವ ಕಾರ್ಯಕ್ರಮ ರೂಪಿಸಿದೆ. 50ನೇ ವರ್ಷದ ಸಂಭ್ರಮಾಚರಣೆಯ ಹೊಸ್ತಿಲಿನಲ್ಲಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕಳೆದ ಒಂದೂವರೆ ದಶಕಗಳಿಂದ ಕಾಡ್ಗಿಚ್ಚಿನಂತಹ ಮಾನವ ನಿರ್ಮಿತ ಕೃತ್ಯಕ್ಕೆ ಒಳಗಾಗಿ ನಲುಗಿದೆ. ಅರಣ್ಯ ಇಲಾಖೆ ಬಂಡೀಪುರ ಅಭಯಾರಣ್ಯವನ್ನು ಸಂರಕ್ಷಿಸಲು ಎಷ್ಟೇ ಕ್ರಮ ಕೈಗೊಂಡರೂ ವಿವಿಧೆಡೆ ಮಾನವನ ಹಸ್ತಕ್ಷೇಪದಿಂದ ಆಗುವ ಕೃತ್ಯಗಳಿಂದ ಅಮೂಲ್ಯ ವನ್ಯಸಂಪತ್ತು ನಲುಗುವಂತಾಗಿದೆ. ಈ ನಿಟ್ಟಿನಲ್ಲಿ ಬಂಡೀಪುರ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಗುಂಡ್ಲುಪೇಟೆ ತಾಲೂಕು ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಕೆಲ ಗ್ರಾಮಗಳಲ್ಲಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಂಡಿದೆ.

ಬಂಡೀಪುರದಲ್ಲಿ ಇದೇ ಮೊದಲ ಬಾರಿಗೆ ಜ.2 ಮತ್ತು 3ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ 22ನೇ ಸಭೆ ಬಂಡೀಪುರದಲ್ಲಿ ನಡೆಯುತ್ತಿದ್ದು, ಈ ಸಭೆಯಲ್ಲಿ ಕೇಂದ್ರದ ಅರಣ್ಯ ಸಚಿವ ಭೂಪೇಂದ್ರ ಯಾದವ್ ಹಾಗೂ ಎನ್‌ಟಿಸಿಎ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಜ.3 ರಂದು ಬೆಳಗ್ಗೆ 10ಕ್ಕೆ ಕೇಂದ್ರ ಸಚಿವ ಭೂಪೇಂದ್ರ ಯಾದವ್ 'ಬಂಡೀಪುರ ಯುವ ಮಿತ್ರ' ಯೋಜನೆ ಹಾಗೂ ನೂತನ ಸಫಾರಿ ಬಸ್‌ಗೆ ಚಾಲನೆ ನೀಡಲಿದ್ದಾರೆ. ಬಳಿಕ ಬುಡಕಟ್ಟು ಸಮುದಾಯ ಹಾಗೂ ಅರಣ್ಯ ಪರಿಸರ ಅಭಿವೃದ್ಧಿ ಸಮಿತಿಯ ಸದಸ್ಯರು ತಯಾರಿಸಿರುವ ಲಂಟಾನ ಕಳೆ ಗಿಡದಿಂದ ತಯಾರಿಸಿರುವ 'ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆ'ಯನ್ನು ಉದ್ಘಾಟಿಸಲಿದ್ದಾರೆ.



'ಬಂಡೀಪುರ ಯುವ ಮಿತ್ರ': ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 'ಬಂಡೀಪುರ ಯುವ ಮಿತ್ರ' ಎಂಬ ವಿನೂತನ ಕಾರ್ಯಕ್ರಮವನ್ನು ಜ.3ರಿಂದ ಜಾರಿಗೊಳಿಸುತ್ತಿದ್ದು, ಇದಕ್ಕಾಗಿ ಎರಡು ಹೊಸ ಸಫಾರಿ ಬಸ್ ಖರೀದಿಸಲಾಗಿದೆ. ಎರಡೂ ತಾಲೂಕುಗಳ ವ್ಯಾಪ್ತಿಯ ಬಂಡೀಪುರ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡತಿರುವ ಗ್ರಾಮಗಳಲ್ಲಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮದಡಿಯಲ್ಲಿ ಅರಣ್ಯ ಪ್ರದೇಶಕ್ಕೆ ಕರೆತಂದು ಸಫಾರಿ ಮಾಡಿಸಲಾಗುತ್ತದೆ. ಅಲ್ಲದೆ, ಬಂಡೀಪುರ ಅರಣ್ಯ ಎದುರಿಸುತ್ತಿರುವ ಸವಾಲುಗಳು, ಮಾನವನಿಂದ ಆಗುವ ಕೃತ್ಯಗಳಿಂದ ವನ್ಯಸಂಪತ್ತಿಗೆ ಆಗುತ್ತಿರುವ ನಷ್ಟ, ಮುಂಬರುವ ಪೀಳಿಗೆಗೆ ಅರಣ್ಯ ಸಂಪತ್ತಿನ ಸಂರಕ್ಷಣೆ ಸಾರ್ವಜನಿಕರ ಸಹಕಾರದ ಬಗ್ಗೆ ಮನವರಿಕೆ ಮಾಡಿಕೊಡುವ ಮೂಲಕ ತಮ್ಮ ಮನೆ ಹಾಗೂ ಗ್ರಾಮಗಳಲ್ಲಿ ಮಕ್ಕಳಿಂದಲೇ ತಿಳುವಳಿಕೆ ಕೊಡಿಸುವ ಮಹತ್ತರ ಉದ್ದೇಶದಿಂದ ಯುವ ಮಿತ್ರ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ವಾರಕ್ಕೆ 5 ದಿನ ಮಾತ್ರ ಈ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ಸಫಾರಿಗೆ ಕರೆದೊಯ್ಯಲಾಗುತ್ತದೆ. ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿದಿನ 60 ಮಕ್ಕಳನ್ನು ಸಫಾರಿಗೆ ಉಚಿತವಾಗಿ ಕರೆದೊಯ್ಯಲಾಗುತ್ತದೆ. ಸಫಾರಿ ಬಳಿಕ ಮಕ್ಕಳಿಗೆ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಸಂವಾದದ

▶ 10ನೇ ಪುಟಕ್ಕೆ

ಹೆಚ್.ಡಿ.ಕೋಟೆ ಬಳಿ ಕಾಡಾನೆ ದಾಳಿಗೆ ವಾಚರ್ ಬಲಿ



ಮೈಸೂರು,ಜ.1(ಎಂಟಿವೈ)– ಹೊಸ ವರ್ಷದ ಮೊದಲ ದಿನವೇ ಕಾಡಾನೆ ದಾಳಿಗೆ ಅರಣ್ಯ ಇಲಾಖೆಯ ವಾಚರ್(ದಿನಗೂಲಿ ನೌಕರ) ಬಲಿಯಾಗಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಮೇಟಿಕುಪ್ಪೆ ವಲಯದ ಮರಚಯ್ಯನಹಳ್ಳದ ಬಳಿ ನಡೆದಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಮೇಟಿಕುಪ್ಪೆ ವಲಯದಿಂದ ಕಾಡಂಚಿನ ಗ್ರಾಮಗಳಿಗೆ ನುಗ್ಗುತ್ತಿದ್ದ ಕಾಡಾನೆಯನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆಯಲ್ಲಿ ತೊಡಗಿದ್ದ ಮೇಟಿಕುಪ್ಪೆ ವನ್ಯಜೀವಿ ವಲಯದ ಕಳ್ಳಬೇಟೆ ತಡೆ ಶಿಬಿರದಲ್ಲಿ ದಿನಗೂಲಿ ನೌಕರರಾಗಿ(ವಾಚರ್) ಕೆಲಸ ಮಾಡುತ್ತಿದ್ದ ಎನ್. ಮಹದೇವಸ್ವಾಮಿ(35) ಎಂಬುವವರೇ ಕಾಡಾನೆ ದಾಳಿಗೆ ಬಲಿಯಾದವರಾಗಿದ್ದಾರೆ. ವಾಚರ್ ಎನ್.ಮಹದೇವಸ್ವಾಮಿ ಅವರು ಇತರೆ ಸಿಬ್ಬಂದಿಗಳೊಂದಿಗೆ ಮರಚಯ್ಯನಹಳ್ಳ ಗಸ್ತು ಪ್ರದೇಶದಲ್ಲಿ ಕಾಡಂಚಿನ ಗ್ರಾಮಕ್ಕೆ ನುಗ್ಗಿದ್ದ ಕಾಡಾನೆಯನ್ನು ಕಾಡಿಗೆ ಓಡಿಸಲು ಹೋಗಿದ್ದಾಗ ಕಾಡಾನೆ ದಾಳಿ ನಡೆಸಿದೆ.

ಜನರು ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ತೊಡಗಿದ್ದ ಸಂದರ್ಭದಲ್ಲಿಯೇ ಈ ದುರ್ಘಟನೆ ನಡೆದಿದೆ. ಕತ್ತಲೆ ಆವರಿಸಿದ್ದ ವೇಳೆ ಕಾಡಾನೆ ಎರಗಿ ಬಂದ ಹಿನ್ನೆಲೆಯಲ್ಲಿ ತಪ್ಪಿಸಿಕೊಳ್ಳಲು ಯತ್ನಿಸಿದರೂ

▶ 10ನೇ ಪುಟಕ್ಕೆ

ಇಂದು ವೈಕುಂಠ ಏಕಾದಶಿ



ಮೈಸೂರು, ಜ.1–ಮೈಸೂರಿನ ಜಯನಗರದಲ್ಲಿರುವ ಶ್ರೀರಾಮ ಮಂದಿರದಲ್ಲಿ ಸೋಮವಾರ(ಜ.2) ವೈಕುಂಠ ಏಕಾದಶಿಯನ್ನು ಆಚರಿಸಲಾಗುತ್ತಿದೆ. ಅಂದು ಮುಂಜಾನೆ 5.30 ರಿಂದ ರಾತ್ರಿ 9.30ರವರೆಗೆ ಧಾರ್ಮಿಕ ವಿಧಿ–ವಿಧಾನಗಳ ಮೂಲಕ ವಿಶೇಷ ಪೂಜೆಯನ್ನು ನೆರವೇರಿಸುವುದರೊಂದಿಗೆ 'ಸ್ವರ್ಗದ ಬಾಗಿಲು ದರ್ಶನ' ಕೂಡ ಏರ್ಪಡಿಸಲಾಗಿದೆ ಎಂದು ಶ್ರೀರಾಮ ಮಂದಿರದ ಆಡಳಿತ ಮಂಡಲಿ ತಿಳಿಸಿದೆ.

ಹೊಸ ವರ್ಷದ ಸಂಭ್ರಮ: ಜನತೆಗೆ ಪ್ರಧಾನಿ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಶುಭಾಶಯ






ನವದೆಹಲಿ, ಜ.1– ದೇಶದಾದ್ಯಂತ ಹೊಸ ವರ್ಷದ ಸಂಭ್ರಮ ಮನೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಗಣ್ಯರು ದೇಶದ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 2023ರ ವರ್ಷವು ನಮ್ಮ ಜೀವನದಲ್ಲಿ ಹೊಸ ಸ್ಫೂರ್ತಿ, ಗುರಿ ಮತ್ತು ಸಾಧನೆಯನ್ನು ತರಲಿ. ರಾಷ್ಟ್ರದ ಏಕತೆ, ಸಮಗ್ರತೆ ಮತ್ತು ಅಂತರ್ಗತ ಅಭಿವೃದ್ಧಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳಲು ಸಂಕಲ್ಪ ಮಾಡೋಣ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿಯವರು ಟ್ವೀಟ್ ಮಾಡಿ 2023ರ ವರ್ಷ ನಿಮ್ಮ ಪಾಲಿಗೆ ಭರವಸೆ, ಸಂತೋಷ ಮತ್ತು ಬಹಳಷ್ಟು ಯಶಸ್ಸಿನಿಂದ ಕೂಡಿರಲಿ. ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸಿಗುವಂತಾಗಲಿ ಎಂದು ಆಶಿಸುತ್ತೇನೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಟ್ವೀಟ್ ಮಾಡಿ, 2023ರಲ್ಲಿ ಪ್ರತಿ ಬೀದಿ, ಪ್ರತಿ ಹಳ್ಳಿ, ಪ್ರತಿ ನಗರದಲ್ಲಿ ಪ್ರೀತಿಯನ್ನು ಹಂಚುವ ಅಂಗಡಿ ತೆರೆಯಲಿದೆ ಎಂದು ಆಶಿಸುತ್ತೇನೆ ಎಂದು ಹೇಳಿದ್ದಾರೆ.

ಮೀಸಲಾತಿ ನೀಡಲು ಸಂವಿಧಾನಾತ್ಮಕವಾಗಿ ಯಾವುದೇ ತೊಡಕಿಲ್ಲ: ಸಿಎಂ ಬೊಮ್ಮಾಯಿ



ಹುಬ್ಬಳ್ಳಿ, ಜ.1– ಮೀಸಲಾತಿ ನೀಡಲು ಸಂವಿಧಾನಾತ್ಮಕವಾಗಿ ಯಾವುದೇ ತೊಡಕಿಲ್ಲ, ಹಿಂದುಳಿದ ಆಯೋಗದ ಅಂತಿಮ ವರದಿಯಿಂದ ಎಲ್ಲವೂ ಸ್ಪಷ್ಟವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಭಾನುವಾರ ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಿಂಗಾಯತ, ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ನೀಡಲು ಸಂವಿಧಾನಾತ್ಮಕವಾಗಿ ಯಾವುದೇ ತೊಡಕಿಲ್ಲ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಮಧ್ಯಂತರ ವರದಿ ಸಲ್ಲಿಸಿದೆ. ಆಯೋಗದ ಅಂತಿಮ ವರದಿಯಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ. ಮೀಸಲಾತಿ ವಿಚಾರದಲ್ಲಿ ನಮ್ಮ ಸರ್ಕಾರದ ಉದ್ದೇಶ ಹೇಳಿದ್ದೇವೆ. ಅಂತಿಮ ವರದಿಯಲ್ಲಿ ಅಂಕಿ ಅಂಶಗಳ ಬಗ್ಗೆ ಮಾಹಿತಿ ನೀಡುತ್ತೇವೆ. ಮೀಸಲಾತಿ ಜಾರಿ ವಿಚಾರದಲ್ಲಿ ಸಂಬಂಧಪಟ್ಟವರ ಜತೆ ಚರ್ಚಿಸುತ್ತೇವೆ ಎಂದು ಹೇಳಿದರು. ಹಿಂದುಳಿದ ವರ್ಗದವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆ. ಕೆಲ ವರ್ಗದವರಿಗೆ ಶಿಕ್ಷಣ, ಉದ್ಯೋಗದಲ್ಲಿ ಹಿನ್ನಡೆಯಾಗಿರುವುದು ನಿಜ. ಅವರಿಗೆ ನ್ಯಾಯ ಕೊಡುವ ನಿಟ್ಟಿನಲ್ಲಿ ಮೀಸಲಾತಿ ಹೆಚ್ಚಳ ಮಾಡಲಾಗಿದೆ. ಬೇಕಾದರೆ ಸ್ಪಷ್ಟೀಕರಣ ಕೊಡುತ್ತೇವೆ, ಯಾರಿಗೂ ಅನ್ಯಾಯ ಮಾಡಲ್ಲ. ವಿರೋಧ ಪಕ್ಷದವರು ತಾವು ಅಧಿಕಾರದಲ್ಲಿದ್ದಾಗ ಬೇಡಿಕೆ ಈಡೇರಿಸಲಿಲ್ಲ. ಈಗ ನಾವು ಜಾರಿ ಮಾಡುತ್ತಿರುವುದರಿಂದ ಅವರಿಗೆ ಸಮಸ್ಯೆಯಾಗುತ್ತಿದೆ ಎಂದು ತಿಳಿಸಿದರು.

ಇನ್ನು 15 ದಿನಗಳಲ್ಲಿ ಪಕ್ಷದ ಪ್ರಣಾಳಿಕೆ ರಿಲೀಸ್



ಬೆಂಗಳೂರು: ಯಾವತ್ತಿದ್ದರೂ ಅಧಿಕಾರಕ್ಕೆ ಬರಬೇಕು, ಸೇವೆ ಮಾಡಬೇಕು ಅನ್ನೋ ವಿಶ್ವಾಸದಲ್ಲೇ ನಾನೊಂದು ದೊಡ್ಡ ಹೆಜ್ಜೆ ಇಟ್ಟಿದ್ದೇನೆ. ಇನ್ನೂ 15 ದಿನಗಳಲ್ಲಿ ನನ್ನ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡುತ್ತೇನೆ ಎಂದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಜನಾರ್ಧನ ರೆಡ್ಡಿ ಹೇಳಿದ್ದಾರೆ. ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಎನ್‌ಪಿಎಸ್ (ನೂತನ ಪಿಂಚಣಿ ಯೋಜನೆ) ವಿರೋಧಿಸಿ ನಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಅವರು ಮಾತನಾಡಿದ್ದಾರೆ.

ಎಲ್ಲರೂ ಹೊಸ ವರ್ಷದ ಸಂಭ್ರಮ ಮಾಡುತ್ತಿದ್ದರೆ, ನೀವು ನಿಮ್ಮ ಕುಟುಂಬದ ಭವಿಷ್ಯಕ್ಕಾಗಿ ಹೋರಾಟ ಮಾಡುತ್ತಿದ್ದೀರಿ ಎನ್ನುವುದನ್ನು ತಿಳಿದೇ ನಾನಿಲ್ಲಿಗೆ ಬಂದಿದ್ದೇನೆ. ಸರ್ಕಾರಿ ನೌಕರರ ಪರಿಸ್ಥಿತಿ ನನಗೂ ಗೊತ್ತು. ನನ್ನ ತಂದೆ ಕೂಡ ಪೊಲೀಸ್ ಇಲಾಖೆಯಲ್ಲಿದ್ದು ನಿವೃತ್ತರಾಗಿದ್ದರು ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರ ಮನಸ್ಸು ಮಾಡಿದ್ರೆ ಯಾವುದೂ ದೊಡ್ಡ ವಿಚಾರ ಅಲ್ಲ. ತಮ್ಮೆಲ್ಲರ ಆಶೀರ್ವಾದದಿಂದ ನಾನೊಂದು ದೊಡ್ಡ ಹೆಜ್ಜೆ ಇಟ್ಟಿದ್ದೇನೆ. ನಿಮ್ಮ ಹಾಗೆಯೇ ನಾನು ಕೂಡ ಹಿಂದೆ ಸರಿಯಲ್ಲ. ಯಾವತ್ತಿದ್ದರೂ ಅಧಿಕಾರಕ್ಕೆ ಬರಬೇಕು, ಸೇವೆ ಮಾಡಬೇಕು ಅನ್ನೋ ವಿಶ್ವಾಸದಲ್ಲೇ ಹೆಜ್ಜೆ ಇಟ್ಟಿದ್ದೇನೆ. 15 ದಿನದಲ್ಲಿ ನನ್ನ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡುತ್ತೇನೆ. ಪ್ರಣಾಳಿಕೆಯಲ್ಲಿ ನಿವೃತ್ತ ನೌಕರರ ವಿಚಾರವನ್ನೂ ಇಟ್ಟಿದ್ದೇನೆ. ಸರ್ಕಾರ ನಿಮ್ಮ ಹೋರಾಟಕ್ಕೆ ತಲೆ ಬಾಗಲೇಬೇಕು. ಯಾವುದೇ ಕಾರಣಕ್ಕೂ ಹಿಂದೆ ಸರಿಯಬೇಡಿ ಎಂದು ಕರೆ ನೀಡಿದ್ದಾರೆ.

2022ರಲ್ಲಿ ಮಹಿಳೆಯರ ವಿರುದ್ಧ 31,000 ಅಪರಾಧ ಪ್ರಕರಣಗಳು ದಾಖಲು: ರಾಷ್ಟ್ರೀಯ ಮಹಿಳಾ ಆಯೋಗ

ನವದೆಹಲಿ: 2022ರಲ್ಲಿ ಮಹಿಳೆಯರ ವಿರುದ್ಧ ನಡೆದ ಅಪರಾಧಗಳಿಗೆ ಸಂಬಂಧಿಸಿದಂತೆ ಸುಮಾರು 31,000 ದೂರುಗಳನ್ನು ಸ್ವೀಕರಿಸಲಾಗಿದ್ದು, ಇದು 2014 ರಿಂದೀಚೆಗೆ ಅತಿ ಹೆಚ್ಚು ಎಂದು ರಾಷ್ಟ್ರೀಯ ಮಹಿಳಾ ಆಯೋಗ (ಎನ್ಸಿಡಬ್ಲ್ಯು) ತಿಳಿಸಿದೆ.

ಎನ್ಸಿಡಬ್ಲ್ಯು, 2021 ರಲ್ಲಿ 30,864 ದೂರುಗಳನ್ನು ಸ್ವೀಕರಿಸಿದ್ದರೆ, 2022 ರಲ್ಲಿ 30,957 ದೂರುಗಳನ್ನು ಸ್ವೀಕರಿಸಿದೆ. ಕಳೆದ ವರ್ಷ ದಾಖಲಾಗಿರುವ 30,957 ದೂರುಗಳ ಪೈಕಿ, ಗರಿಷ್ಠ 9,710 ಪ್ರಕರಣಗಳು ಮಹಿಳೆಯ ಘನತೆಯಿಂದ ಬದುಕುವ ಹಕ್ಕಿಗೆ ಭಾವನಾತ್ಮಕವಾಗಿ ಧಕ್ಕೆಗೆ ಸಂಬಂಧಿಸಿದೆ. ನಂತರ ಗೃಹ ಹಿಂಸೆಗೆ ಸಂಬಂಧಿಸಿದ 6,970 ಮತ್ತು ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದವು 4,600 ಪ್ರಕರಣಗಳು ದಾಖಲಾಗಿವೆ ಎಂಬ ಮಾಹಿತಿ ಸುದ್ದಿಸಂಸ್ಥೆ ಪಿಟಿಐಗೆ ಲಭ್ಯವಾಗಿದೆ. ಶೇ 54.5ರಷ್ಟು (16,872) ದೂರುಗಳು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಉತ್ತರ ಪ್ರದೇಶದಿಂದ ವರದಿಯಾಗಿವೆ. ದೆಹಲಿಯಲ್ಲಿ 3,004 ದೂರುಗಳು ದಾಖಲಾಗಿದ್ದು, ಮಹಾರಾಷ್ಟ್ರ (1,381), ಬಿಹಾರ (1,368) ಮತ್ತು ಹರಿಯಾಣ (1,362) ನಂತರದ ಸ್ಥಾನದಲ್ಲಿವೆ.

ಅಂಕಿಅಂಶಗಳ ಪ್ರಕಾರ, ಘನತೆಯಿಂದ ಬದುಕುವ ಹಕ್ಕು ಮತ್ತು ಕೌಟುಂಬಿಕ ಹಿಂಸಾಚಾರಕ್ಕೆ ಸಂಬಂಧಿಸಿದ ಹೆಚ್ಚಿನ ದೂರುಗಳು ಉತ್ತರ ಪ್ರದೇಶದಿಂದ ಬಂದಿವೆ. ಆಯೋಗವು 2014ರಲ್ಲಿ 33,906 ದೂರುಗಳನ್ನು ಸ್ವೀಕರಿಸಿತ್ತು. ಅಲ್ಲಿಂದೀಚೆಗೆ 2022ರಲ್ಲಿ ಸ್ವೀಕರಿಸಿದ ಪ್ರಕರಣಗಳು ಅಧಿಕ. ಮಹಿಳೆಯರ ಮೇಲಿನ ದೌರ್ಜನ್ಯ ಅಥವಾ ಕಿರುಕುಳದ ಅಪರಾಧಕ್ಕೆ ಸಂಬಂಧಿಸಿದಂತೆ 2,523 ದೂರುಗಳು, 1,701 ಅತ್ಯಾಚಾರ ಮತ್ತು ಅತ್ಯಾಚಾರ ಯತ್ನಕ್ಕೆ ಸಂಬಂಧಿಸಿವೆ. 1,623 ದೂರುಗಳು ಮಹಿಳೆಯರ ವಿರುದ್ಧ ಪೊಲೀಸ್ ನಿರಾಸಕ್ತಿ ಮತ್ತು 924 ದೂರುಗಳು ಸೈಬರ್ ಅಪರಾಧಗಳಿಗೆ ಸಂಬಂಧಿಸಿವೆ.

ನಿಧನ



ಡಾ. ಶಂಕರಲಿಂಗೇಗೌಡ

ಮೈಸೂರು, ಜ.1–ನಿವೃತ್ತ ವೈದ್ಯಾಧಿಕಾರಿಗಳು ಮತ್ತು ಮೈಸೂರಿನ ಸಿದ್ಧಾರ್ಥ ನಗರದ ನಿವಾಸಿಗಳೂ ಆದ ಡಾ. ಶಂಕರಲಿಂಗೇಗೌಡ (87)ರು ಡಿ.28ರಂದು ನಿಧನರಾದರು.

ಸುಮಾರು 35 ವರ್ಷಗಳ ಕಾಲ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು, 28 ವರ್ಷಗಳ ಕಾಲ ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದರು.

ದಿವಂಗತರು ಪತ್ನಿ ಹೆಚ್.ಟಿ.ಶಾರದಮ್ಮ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಮ್ಮದ್ ಮನ್ಸೂರ್



ಮೈಸೂರು, ಜ.1–ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ಮಹಮ್ಮದ್ ಮನ್ಸೂರ್(58) ಇಂದು ಮುಂಜಾನೆ ನಿಧನರಾದರು. ಮೃತರು ಪತ್ನಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಮೈಸೂರು ಕಾರಾಗೃಹದ ಹಿಂದೆ ಪುಲಿಕೇಶಿ ರಸ್ತೆಯಲ್ಲಿ ಮುಸ್ಲಿಂ ರುದ್ರಭೂಮಿಯಲ್ಲಿ ಇಂದು ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

10 ದಿನದಲ್ಲಿ ಅರಮನೆಗೆ 2.68 ಲಕ್ಷ ಮಂದಿ ಭೇಟಿ





ಮೈಸೂರು, ಜ.1(ಎಸ್‌ಬಿಡಿ)–ಮೈಸೂರಿನ ಅಂಬಾವಿಲಾಸ ಅರಮನೆಗೆ ಕಳೆದ 10 ದಿನಗಳಲ್ಲಿ 2.68 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. ಡಿ.22ರಂದು 17,249, ಡಿ.23ರಂದು 17,401, ಡಿ.24ರಂದು 25,943, ಡಿ.25 ರಂದು 31,943, ಡಿ.26ರಂದು 28,027, ಡಿ.27ರಂದು 28,623, ಡಿ.28ರಂದು 30,585, ಡಿ.29 ರಂದು 29,907, ಡಿ.30 ರಂದು 31,816 ಹಾಗೂ ಡಿ.31 ರಂದು 26,852 ಮಂದಿ ಸೇರಿ 10 ದಿನದಲ್ಲಿ ಒಟ್ಟು 2,68,346 ಮಂದಿ ಅರಮನೆ ವೀಕ್ಷಿಸಿದ್ದಾರೆ. ಇವರಲ್ಲಿ 1,44,802 ವಯಸ್ಕರು, 711 ವಿದೇಶಿಗರು, 96,818 ವಿದ್ಯಾರ್ಥಿಗಳು ಹಾಗೂ 26,015 ಇದ್ದರು ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ ತಿಳಿಸಿದ್ದಾರೆ.

ಕೊರೊನಾ ಪರಿಸ್ಥಿತಿ: ಪ್ರಧಾನಮಂತ್ರಿ ಸಚಿವಾಲಯ ಪರಾಮರ್ಶೆ



ನವದೆಹಲಿ, ಜ.1– ದೇಶದಲ್ಲಿನ ಕೋವಿಡ್–19 ಪರಿಸ್ಥಿತಿಯನ್ನು ಪರಿಶೀಲಿಸಲು ಆರೋಗ್ಯ ಅಧಿಕಾರಿಗಳು ಮತ್ತು ತಜ್ಞರೊಂದಿಗೆ ಪ್ರಧಾನ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಪಿ.ಕೆ.ಮಿಶ್ರಾ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ನಿನ್ನೆ ಉನ್ನತ ಮಟ್ಟದ ಸಭೆಯನ್ನು ನಡೆಸಿತು. ಸಾಂಕ್ರಾಮಿಕ ರೋಗಕ್ಕೆ ಯಾವ ರೀತಿ ಸಿದ್ಧತೆ ನಡೆಸಬೇಕು ಮತ್ತು ಪರಿಣಾಮಕಾರಿ ನಿರ್ವಹಣೆಯನ್ನು ನೋಡಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಈ ಹಿಂದೆ ನೀಡಿದ್ದ ನಿರ್ದೇಶನಗಳನ್ನು ಅನುಸರಿಸಲಾಗಿದೆಯೇ ಎಂದು ಸಭೆಯಲ್ಲಿ ಪರಿಶೀಲಿಸಲಾಯಿತು.

ಚೀನಾ ಮತ್ತು ಇತರ ಪೂರ್ವ ಏಷ್ಯಾದ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಉಲ್ಬಣದ ಹಿನ್ನೆಲೆಯಲ್ಲಿ, ಪ್ರಧಾನಿ ಕಳೆದ ವಾರ ಉನ್ನತ ಮಟ್ಟದ ಸಭೆಯನ್ನು ನಡೆಸಿದ್ದರು. ಇದರಲ್ಲಿ ಅವರು ಜಾಗರೂಕತೆ ಮತ್ತು ಕಣ್ಗಾವಲು ಹೆಚ್ಚಿಸಲು, ಕೋವಿಡ್ ಪರೀಕ್ಷೆ ಮತ್ತು ಜೀನೋಮ್ ಅನುಕ್ರಮವನ್ನು ಹೆಚ್ಚಿಸಲು ನಿರ್ದೇಶಿಸಿದರು.

ಡಿಸೆಂಬರ್‌ನಲ್ಲಿ ಸಂಗ್ರಹಿಸಲಾದ ಸುಮಾರು 500 ಮಾದರಿಗಳ ಜೀನೋಮ್ ಅನುಕ್ರಮವನ್ನು ದೇಶಾದ್ಯಂತ INSACOG ಲ್ಯಾಬ್‌ಗಳಲ್ಲಿ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಭೆಯಲ್ಲಿ, ಚೀನಾದಲ್ಲಿ ಉಲ್ಬಣಗೊಳ್ಳುತ್ತಿರುವ

ಬಿಎಫ್.7 ಹೊಸ ರೂಪಾಂತರಿ ಪತ್ತೆ ಮೇಲೆ ಗಮನ

BF.7 ಕೊರೋನಾ ರೂಪಾಂತರಿ ಸೇರಿದಂತೆ ಹೊಸ ರೂಪಾಂತರಿಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ, ಪ್ರಧಾನ ಮಂತ್ರಿಯವರ ನಿರ್ದೇಶನಗಳ ಪ್ರಕಾರ ಸಂಪೂರ್ಣ ಜೀನೋಮ್ ಸೀಕ್ವೆನ್ಸಿಂಗ್‌ನ್ನು ಬಲಪಡಿಸುವುದು ಮತ್ತು ದೇಶಾದ್ಯಂತ ಹೆಚ್ಚು ಗಮನಾರ್ಹ ಸಂಖ್ಯೆಯ ಮಾದರಿಗಳನ್ನು INSACOG ನೆಟ್ವರ್ಕ್‌ಗೆ ಕಳುಹಿಸಲಾಗಿದೆ ಎಂದು ತಿಳಿಸಲಾಯಿತು.

1,716 ಅಂತಾರಾಷ್ಟ್ರೀಯ ವಿಮಾನಗಳನ್ನು ಪರೀಕ್ಷಿಸಲಾಗಿದೆ. ಕೋವಿಡ್–19 ಪರೀಕ್ಷೆಗಾಗಿ 5,666 ಮಾದರಿಗಳನ್ನು ಸಂಗ್ರಹಿಸಲಾಗಿದೆ. ದೇಶಾದ್ಯಂತ ವಿಮಾನ ನಿಲ್ದಾಣಗಳಲ್ಲಿ ಕೊರೋನಾ ಪರೀಕ್ಷೆಗಳನ್ನು ಶೇಕಡಾ ಎರಡರಷ್ಟು ಯಾದೃಚ್ಛಿಕ ಪರೀಕ್ಷೆಯಲ್ಲಿ ಸುಮಾರು 53 ಅಂತಾರಾಷ್ಟ್ರೀಯ ಪ್ರಯಾಣಿಕರು ಕೋವಿಡ್–19 ಪರೀಕ್ಷೆ ನಡೆಸಿದರು.

ಚೀನಾ, ಜಪಾನ್, ದಕ್ಷಿಣ ಕೊರಿಯಾ, ಸಿಂಗಾಪುರ್, ಬ್ರೆಜಿಲ್ ಸೇರಿದಂತೆ ಕೆಲವು ದೇಶಗಳಲ್ಲಿ ಕೋವಿಡ್ ಉಲ್ಬಣಗೊಳ್ಳುವುದರೊಂದಿಗೆ ಸಾಂಕ್ರಾಮಿಕ ರೋಗದ ವಿಕಸನಗೊಳ್ಳುತ್ತಿರುವ ಜಾಗತಿಕ ಸನ್ನಿವೇಶದ ಬಗ್ಗೆ ಮಿಶ್ರಾ ಅವರಿಗೆ ತಿಳಿಸಲಾಗಿದೆ.

ಚೀನಾ, ಥೈಲ್ಯಾಂಡ್, ಜಪಾನ್, ಸಿಂಗಾಪುರ್, ಹಾಂಗ್ ಕಾಂಗ್ ಮತ್ತು ದಕ್ಷಿಣ ಕೊರಿಯಾದ ಪ್ರಯಾಣಿಕರಿಗೆ ಜನವರಿ 1 ರಿಂದ ಆರ್ಟಿ–ಪಿಸಿಆರ್ ವರದಿಯ ಅಗತ್ಯವಿದೆ ಎಂದು ಭಾರತ ಈಗಾಗಲೇ ಘೋಷಿಸಿದೆ. ಅವರು ಏರ್ ಸುವಿಧಾದಲ್ಲಿ ಕೋವಿಡ್ ನೆಗೆಟಿವ್ ವರದಿಯನ್ನು ಅಪ್ಲೋಡ್ ಮಾಡಬೇಕು. ಪ್ರಯಾಣಕ್ಕೆ ತೆರಳುವ 72 ಗಂಟೆ ಮೊದಲು ಕೊರೊನಾ ಪರೀಕ್ಷೆ ನಡೆಸಬೇಕೆಂದು ತಿಳಿಸಲಾಗಿದೆ.

ಸಭೆಯಲ್ಲಿ, ಕೋವಿಡ್–ಸೂಕ್ತ ನಡವಳಿಕೆಯ ಬಗ್ಗೆ ಜಾಗೃತಿಯನ್ನು ಹೆಚ್ಚಿಸುವುದು, ಕಣ್ಗಾವಲು ಬಲಪಡಿಸುವುದು, ದೇಶಾದ್ಯಂತ ಪರೀಕ್ಷೆಯನ್ನು ಹೆಚ್ಚಿಸುವುದು ಮತ್ತು ಕೊರೊನಾ ವೈರಸ್ ಮುನ್ನೆಚ್ಚರಿಕೆಯ ಪ್ರಮಾಣಗಳನ್ನು ಪಡೆದುಕೊಳ್ಳಬೇಕೆಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಧಾನ ಮಂತ್ರಿಯವರ ನಿರ್ದೇಶನದ ಪ್ರಕಾರ, ಡಿಸೆಂಬರ್ 27ರಂದು ಎಲ್ಲಾ ಆರೋಗ್ಯ ಸೌಲಭ್ಯಗಳಲ್ಲಿ ಅಣಕು ಡ್ರಿಲ್ ಗಳನ್ನು ನಡೆಸಲಾಗಿದೆ.

ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಆಮ್ಲಜನಕ ಸ್ಥಾವರಗಳು, ವೆಂಟಿಲೇಟರ್‌ಗಳು, ಲಾಜಿಸ್ಟಿಕ್ಸ್ ಮತ್ತು ಮಾನವ ಸಂಪನ್ಮೂಲಗಳ ಮೇಲೆ ನಿರ್ದಿಷ್ಟವಾಗಿ ಗಮನಹರಿಸುವುದರೊಂದಿಗೆ ಕೋವಿಡ್–ಮೀಸಲಾದ ಸೌಲಭ್ಯಗಳ ಕಾರ್ಯಾಚರಣೆಯ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ.

ಕೋವಿಡ್ ಭೀತಿ: ಹೈರಿಸ್ಕ್ ದೇಶಗಳಿಂದ ಬಂದವರಿಗೆ 7 ದಿನಗಳ ಕ್ವಾರಂಟೈನ್ ಕಡ್ಡಾಯ

ರಾಜ್ಯ ಸರ್ಕಾರದಿಂದ ಹೊಸ ಮಾರ್ಗಸೂಚಿ ಬಿಡುಗಡೆ

ಬೆಂಗಳೂರು, ಜ.1– ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಮಹಾಮಾರಿ ಕೊರೊನಾ ವೈರಸ್ ಸೋಂಕು ಆರ್ಭಟಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ವಿದೇಶಗಳಿಂದ ರಾಜ್ಯಕ್ಕೆ ಬರುವವರ ಮೇಲೆ ಸರ್ಕಾರ ನಿಗಾ ಮುಂದುವರೆಸಿದೆ. ಇದರಂತೆ ಹೈರಿಸ್ಕ್ ರಾಷ್ಟ್ರಗಳಿಂದ ಬರುವ ರೋಗಲಕ್ಷಣಗಳು ಇಲ್ಲದವರೂ ಕೂಡ ಇನ್ನು ಮುಂದೆ 7 ದಿನಗಳ ಕಾಲ ಹೋಂ ಕ್ವಾರಂಟೈನ್‌ನಲ್ಲಿರುವುದನ್ನು ಕಡ್ಡಾಯಗೊಳಿಸಿದೆ.

ಚೀನಾ, ಹಾಂಕಾಂಗ್, ಜಪಾನ್, ದಕ್ಷಿಣ ಕೊರಿಯಾ, ಸಿಂಗಾಪುರ, ಥಾಯ್ಲೆಂಡ್ ನಿಂದ ಬರುವವರಿಗಾಗಿ ಶನಿವಾರ ಪರಿಷ್ಕೃತ ಮಾರ್ಗಸೂಚಿಯನ್ನು ರಾಜ್ಯ ಆರೋಗ್ಯ ಇಲಾಖೆ ಮಾರ್ಗಸೂಚಿ ಪ್ರಕಟಿಸಿದೆ. ಮಾರ್ಗಸೂಚಿಯಲ್ಲಿ, ಹೈರಿಸ್ಕ್ ಇರುವ ರಾಷ್ಟ್ರಗಳಿಂದ ಬರುವವರು ಆರ್‌ಟಿ–ಪಿಸಿಆರ್ ನೆಗೆಟಿವ್ ಪ್ರಮಾಣಪತ್ರ ನೀಡಿದರೆ ಮಾತ್ರ ವಿಮಾನ ನಿಲ್ದಾಣದಿಂದ ಹೊರ ಹೋಗಲು ಅವಕಾಶ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

ಈ ರಾಷ್ಟ್ರಗಳಿಂಗ ಬರುವವರು 72 ಗಂಟೆಗಳಿಗಿಂತ ಹಳೆಯದಲ್ಲದ ಆರ್‌ಟಿ–ಪಿಸಿಆರ್ ನೆಗೆಟಿವ್ ಪ್ರಮಾಣಪತ್ರ ನೀಡಿದರೆ ಅವರಿಗೆ ವಿಮಾನ ನಿಲ್ದಾಣದಿಂದ ಹೊರಹೋಗಲು ಅವಕಾಶ ನೀಡಬಹುದಾಗಿದೆ. ಇವರಲ್ಲಿ ರೋಗ ಲಕ್ಷಣ ಕಂಡು ಬಂದರೆ ಅಥವಾ ಪರೀಕ್ಷೆ ವೇಳೆ ಸೋಂಕು ದೃಢಪಟ್ಟಿದ್ದೇ ಆದರೆ, ಕೂಡಲೇ ಆಸ್ಪತ್ರೆಗೆ ದಾಖಲಿಸಬೇಕು. ಅವರ ಸಿಟಿ ವ್ಯಾಲ್ಯೂ ಶೇ.25ಕ್ಕಿಂತ ಕಡಿಮೆ ಇದ್ದರೆ ವಂಶವಾಹಿ ಪರೀಕ್ಷೆಗೆ ಒಳಪಡಿಸಬೇಕು. ಆಸ್ಪತ್ರೆಗೆ ದಾಖಲಿಸುವಾಗ ಬೆಂಗಳೂರಿನಲ್ಲಿ ಬೌರಿಂಗ್ ಅಥವಾ ಮಂಗಳೂರಿನಲ್ಲಿ ವೆನ್‌ಲಾಕ್ ಆಸ್ಪತ್ರೆಗೆ ದಾಖಲು ಮಾಡಬೇಕು. ರೋಗ ಲಕ್ಷಣಗಳಿಲ್ಲದವರು 7 ದಿನಗಳ ಕಾಲ ಹೋಂ ಕ್ವಾರಂಟೈನ್ ಗೊಳಗಾಗಬೇಕು ಎಂದು ಸೂಚಿಸಿದೆ.

ವಾಸವಿ ಶಾಂತಿಧಾಮದಲ್ಲಿ ವಚನ ಸಂಗೀತೋತ್ಸವ



ಮೈಸೂರು, ಜ.1(ಜಿಎ)– ಮಾನಸಿಕ ನೆಮ್ಮದಿ ಜೊತೆಗೆ ಪರಿಪೂರ್ಣ ವ್ಯಕ್ತಿತ್ವ ರೂಢಿಸಿಕೊಳ್ಳಲು ಸಾಹಿತ್ಯ ಮತ್ತು ಸಂಗೀತ ಸಹಕಾರಿಯಾಗಲಿದೆ ಎಂದು ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಮೈಸೂರಿನ ಆಲನಹಳ್ಳಿಯಲ್ಲಿರುವ ವಾಸವಿ ಶಾಂತಿಧಾಮದಲ್ಲಿ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ ವಚನ ಸಂಗೀತೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಚನ ಸಾಹಿತ್ಯದಲ್ಲಿ ಶರಣರು ಬದುಕಿಗೆ ಮಾರ್ಗದರ್ಶನವಾಗುವ ಹಲವು ವಿಚಾರಗಳನ್ನು ತಿಳಿಸಿಕೊಟ್ಟಿದ್ದಾರೆ. ಅವುಗಳನ್ನು ಪಾಲಿಸಬೇಕು ಎಂದರು. ಈ ವೇಳೆ ವಿದುಷಿ ಸವಿತಾ, ಸುಮಂಗಲಾ ಸಹೋದರಿಯರು ವಚನ ಗಾಯನ ನಡೆಸಿಕೊಟ್ಟರು. ಪಕ್ಕವಾದ್ಯದಲ್ಲಿ ಭೀಮಶಂಕರ ಬಿದನೂರು, ಷಣ್ಮುಖ ಸಜ್ಜು ಸಾಥ್ ನೀಡಿದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಧಾತ್ರಿ ಸಮಾರಾಧನಾ ಸಮಿತಿ ಅಧ್ಯಕ್ಷ ಎಂ.ಎಸ್.ನಾಗರಾಜ ಗುಪ್ತ, ಕನ್ಯಕಾ ಪರಮೇಶ್ವರಿ ಕೋ–ಆಪ್ ಬ್ಯಾಂಕ್ ಅಧ್ಯಕ್ಷ ಎಚ್.ಎಂ.ಸಂದೀಪ್, ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಗೌರವ ಕಾರ್ಯದರ್ಶಿ ಬಿ.ವಿ.ಶ್ರೀನಿವಾಸ ಗುಪ್ತ, ಅಕ್ಕಮಹಾದೇವಿ ಉಪಸ್ಥಿತರಿದ್ದರು.

SCP, TSP ಅನುದಾನವನ್ನು ಶೇ.100ರಷ್ಟು ಸದ್ಬಳಕೆ ಮಾಡಬೇಕು: ಡಿಸಿ ಡಾ.ರಾಜೇಂದ್ರ

ಮೈಸೂರು, ಜ.1– ವಿವಿಧ ಇಲಾಖೆಗಳಿಗೆ ಬಿಡುಗಡೆಯಾಗಿರುವ SCP, TSP ಅನುದಾನವನ್ನು ಶೇ.100 ರಷ್ಟು ಸದ್ಬಳಕೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ SCP,TSP ಜಿಲ್ಲಾ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ವಿವಿಧ ಇಲಾಖೆಗಳಿಗೆ ಸಂಬಂಧಿಸಿದ SCP/TSP ಅನುದಾನವನ್ನು ಆಯಾಯ ಆರ್ಥಿಕ ವರ್ಷದಲ್ಲಿಯೇ ಬಳಕೆ ಮಾಡಬೇಕು. ಸರ್ಕಾರದ ಅನುದಾನ ಬರುವ ಮೊದಲೇ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡಿರಬೇಕು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಇತರೆ ಇಲಾಖೆಯವರು SCP/TSP ಅನುದಾನವನ್ನು ಹಾಗೂ ಕಾಮಗಾರಿಗಳನ್ನು ಪರಿಶೀಲಿಸಬೇಕು.

ಅನುದಾನ ಬಳಕೆ ಮಾಡದೇ ವ್ಯರ್ಥವಾದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅಲೋಕೇಶನ್ ಆಗಿರುವ ಅನುದಾನ ಶೇ.100 ಬರುತ್ತದೆ. ಆದ್ದರಿಂದ ಕ್ರಿಯಾ ಯೋಜನೆ ರೂಪಿಸಿಕೊಂಡು, ವರ್ಕ್ ಆರ್ಡರ್ ನೀಡುವ ಹಂತದಲ್ಲಿ ಇಟ್ಟುಕೊಂಡಿರಬೇಕು ಎಂದರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚು ಇದ್ದು, SCP/TSP ಕಾಮಗಾರಿಗಳಲ್ಲಿ ಅಸೆಟ್ ಕ್ರಿಯೇಟ್ ಆಗುವಂತಹ ಕಾಮಗಾರಿಗಳನ್ನು ಕೈಗೊಳ್ಳಿ, ಅರ್ಹರಿಗೆ ಮಾತ್ರ ಸೌಲಭ್ಯಗಳನ್ನು ತಲುಪಿಸಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಾಲತಿ ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.1.2023 ಸೋಮವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

- **ಶ್ರೀ ರಾಮ ಮಂದಿರ :** ವೈಕುಂಠ ಏಕಾದಶಿ, ಧಾರ್ಮಿಕ ವಿಧಿ–ವಿಧಾನಗಳ ಮೂಲಕ ಪೂಜೆ ಮತ್ತು ಸ್ವರ್ಗದ ಬಾಗಿಲು ದರ್ಶನ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ, ಬೆಳಗ್ಗೆ 5.30 ರಿಂದ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಐಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ ಆವರಣ, ಸಂಜೆ 6 ಗಂಟೆಗೆ.
- **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀ ಕೇಷ್ಣಮೂರ್ತಿಪುರಂ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.
- **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲಾ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.
- **ಶ್ರೀ ಆಂಡಾಳ್ ಮಂದಿರಂ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಆಂಡಾಳ್ ಮಂದಿರಂ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.
- **ಭೀಮ ಜ್ಯೋತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ :** ಕ್ಯಾಲೆಂಡರ್ ಬಿಡುಗಡೆ–2023 ಮತ್ತು ಅಭಿನಂದನಾ ಸಮಾರಂಭ, ಸ್ಥಳ: ಸಮುದಾಯ ಭವನ, ಬುದ್ಧನಗರ (ನಲ್ಲೂರ್ ಶೆಡ್), ಸಿಲ್ಕ್ ಫ್ಯಾಕ್ಟರಿ ಎದುರು, ಮಾನಂದವಾಡಿ ರಸ್ತೆ, ಸಂಜೆ 4.30ಕ್ಕೆ.
- **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ವಿಶ್ವ ಮಧ್ವ ಮಹಾ ಪರಿಷತ್, ಉತ್ತರಾದಿ ಮಠ :** ವೈಕುಂಠ ಏಕಾದಶಿ ದರ್ಶನ, ವಿಷ್ಣು ಸಹಸ್ರನಾಮ ಪಾರಾಯಣ, ಅರ್ಚನೆ, ಭಜನೆ, ಪಂಡಿತರಿಂದ ಉಪನ್ಯಾಸ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀರಾಂಪುರ, ಬೆಳಗ್ಗೆ 6 ಗಂಟೆಯಿಂದ.
- **ಸ್ವರಾಲಯ ಸಂಗೀತ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಸ್ವರಾಲಯ ಸಾಂಸ್ಕೃತಿಕ ಹಬ್ಬ–2023, ಸ್ಥಳ: ಗಾನಭಾರತಿ (ವೀಣೆ ಶೇಷಣ್ಣ ಭವನ), ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಜಿ.ಎಸ್. ಗಣೇಶ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ– ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ದೀಪಿಕಾ ಪಾಂಡುರಂಗಿ, ಬಿ. ಶ್ರೀರಾಂ ಭಟ್, ಸಿ. ವಿಶ್ವನಾಥ್, ವ್ಯಾಖ್ಯಾನ– ಡಾ.ಜ್ಯೋತಿಶಂಕರ್, 9.00 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮಗಳು, 10.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ – ಶಶಿಧರ್ ಕೋಟೆ, ಮಂಜುಳಾ ಗುರುರಾಜ್, 12.45 ನಮ್ಮ ಆರೋಗ್ಯ: ಚಳಿಗಾಲದಲ್ಲಿ ಕಂಡುಬರುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಕುರಿತು ಡಾ.ಕೆ. ನಾಗೇಂದ್ರ ಪ್ರಸಾದ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ – ಜಿ. ಪುಷ್ಪಲತಾ, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್.

ಸಂಜೆ: 4.00 ಮಹಿಳಾರಂಗ: ಕಾಂಗರೂ ಕೇರ್ ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ ಡಾಕ್ಟರ್ ಸಮಯ: ವಿಷಯ – 40 ವಯಸ್ಸಿನ ಆಸುಪಾಸಿನ ಮಹಿಳೆಯರಲ್ಲಿ ಕಂಡುಬರುವ ಮುಟ್ಟಿನ, ತೊಂದರೆಗಳು ಮತ್ತು ಚಿಕಿತ್ಸೆ, ಭಾಗವಹಿಸುವವರು ಡಾ. ಲೀಲಾವತಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ – ಪಾರಂಪರಿಕ ಉಳುಮೆ ಹಾಗೂ ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಎ.ಎಸ್. ಪುರುಷೋತ್ತಮ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್.ಸಿ.ಹೇಮಕುಮಾರ್. **ರಾತ್ರಿ:** ಹಳ್ಳಿಹಾಡು: ಭಾಗವಹಿಸುವವರು ಬನ್ನೂರು ಹೋಬಳಿ ಮಾದಿಗಳ್ಳಿಯ ಗೌರಮ್ಮ ಮತ್ತು ಸಂಗಡಿಗರು, ಪ್ರಸ್ತುತಿ – ಅಬ್ದುಲ್ ರಶೀದ್.

ಮೈಸೂರು ಮಹಾನಗರ ಪಾಲಿಕೆಯ ಮುಂದಿನ ಕೌನ್ಸಿಲ್ ಸಭೆಯಲ್ಲಿ

ಹೆಬ್ಬಾಳ್‌ನ ವೃತ್ತವೊಂದಕ್ಕೆ ಜಕಣಾಚಾರಿ ಹೆಸರು ನಾಮಕರಣ

● ವಿಶ್ವಕರ್ಮ ಸಮುದಾಯಕ್ಕೆ ಪ್ರೋತ್ಸಾಹಧನ ● ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಮೇಯರ್ ಶಿವಕುಮಾರ್ ಘೋಷಣೆ

ಮೈಸೂರು,ಜ.1(ಪಿಎಂ)– ಮೈಸೂರು ಮಹಾನಗರ ಪಾಲಿಕೆಯ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಗೊಳಿಸಲಾಗುವುದು ಎಂದು ಮೇಯರ್ ಶಿವಕುಮಾರ್ ಘೋಷಿಸಿದರು.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ವಿಶ್ವಕರ್ಮ ಶ್ರೀ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಮರಶಿಲ್ಪಿ ಜಕಣಾಚಾರಿ ಅವರ ಶಿಲ್ಪಕಲೆ ಇಡೀ ಜಗತ್ತಿನ ಗಮನ ಸೆಳೆದಿದೆ. ಅಂತಹ ಮಹನೀಯರ ಸ್ಮರಿಸುವ ಕಾರ್ಯಕ್ರಮ ಒಳ್ಳೆಯ ಸಂಗತಿ. ಕಾಯಕ ಸಮಾಜ ಇಲ್ಲದೇ ಇಡೀ ಸಮಾಜ ಚಲನಶೀಲವಾಗಿರಲು ಸಾಧ್ಯವಿಲ್ಲ ಎಂದರು.

ಹೊಯ್ಸಳ ಅರಸು ವಿಷ್ಣುವರ್ಧನನಿಗಿಂತ ಜಕಣಾಚಾರಿಯವರ ಸ್ಮರಣೆ ಸಮಾಜದಲ್ಲಿ ಹೆಚ್ಚಿರುವುದನ್ನು ನೋಡಬಹುದು. ಅಂದರೆ ರಾಜಗಿಂತಲೂ ಶಿಲ್ಪಿಗೆ ಸಮಾಜವು ಹೆಚ್ಚಿನ ಗೌರವ ಸಮರ್ಪಿಸುತ್ತಿದೆ. ಬೇಲೂರಿನ ಚೆನ್ನಕೇಶವನಿಗೆ ಪ್ರಾಮುಖ್ಯತೆ ದೊರೆಯಬೇಕಾದರೆ ಜಕಣಾಚಾರಿಯವರ ಶಿಲ್ಪಕಲೆ ಕಾರಣ ಎಂದರು.

ಮಹಾನ್ ಶಿಲ್ಪಿ ಜಕಣಾಚಾರಿಯವರ ಸ್ಮರಣೆ, ಕೇವಲ ಇಷ್ಟಕ್ಕೆ ಸೀಮಿತಗೊಳ್ಳಬಾರದು. ಮುಂದಿನ ದಿನಗಳಲ್ಲಿ ವಿಶ್ವಕರ್ಮ ಸಮುದಾಯವನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಹಲವು ಯೋಜನೆಗಳೊಂದಿಗೆ ಈ ಸ್ಮರಣೆ ಕಾರ್ಯಕ್ರಮ ಆಚರಣೆಯಾಗಬೇಕು. ನಾನು ಸಹ ಹಿಂದುಳಿದ ಸಮುದಾಯದಿಂದ ಬಂದಿದ್ದು, ಮುಂದಿನ ದಿನಗಳಲ್ಲಿ ವಿಶ್ವಕರ್ಮ ಸಮುದಾಯದ ಶ್ರೇಯೋಭಿವೃದ್ಧಿಗೆ ಪೂರಕವಾಗಿ ಕೆಲಸ ಕಾರ್ಯಗಳನ್ನು ಮಾಡುತ್ತೇನೆಂದು ಭರವಸೆ ನೀಡಿದರು.

ವೃತ್ತಕ್ಕೆ ಹೆಸರು ನಾಮಕರಣ: ಹೆಬ್ಬಾಳಿನ ವೃತ್ತವೊಂದಕ್ಕೆ ಜಕಣಾಚಾರಿಯವರ ಹೆಸರು ನಾಮಕರಣ ಮಾಡುವ ಸಂಬಂಧ ಈಗಾಗಲೇ ನಿರ್ಧಾರ ಕೈಗೊಳ್ಳಲಾಗಿದೆ. ಮುಂದಿನ ಕೌನ್ಸಿಲ್ ಸಭೆಯಲ್ಲಿ ಈ ಸಂಬಂಧ ಅನುಮೋದನೆ ಪಡೆಯಲಾಗುವುದು ಎಂದು ಮೇಯರ್ ತಿಳಿಸಿದರು.

ಮುಖ್ಯಭಾಷಣ ಮಾಡಿದ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ವೀರಣ್ಣ ಎಂ.ಅರ್ಕಸಾಲಿ ಮಾತನಾಡಿ, ಯಾವುದೇ ರಾಜ್ಯ ಅಥವಾ ಪ್ರದೇಶದ ವೈಭವ ತಿಳಿಯಬೇಕಾದರೆ ಅಲ್ಲಿನ ಶಿಲ್ಪಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನಿಸಬೇಕು. ಈ ನಿಟ್ಟಿನಲ್ಲಿ ಭಾರತದ ಶಿಲ್ಪಕಲೆಗೆ ಕರ್ನಾಟಕ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ. ಆ ಮೂಲಕ ವಿಶ್ವಕ್ಕೆ ಗುರುಸ್ಥಾನದಲ್ಲಿ ಇದೆ ಎನ್ನಬಹುದು. ಇದಕ್ಕೆ ಜಕಣಾಚಾರಿಯವರು ನೀಡಿದ ಅಪಾರ ಕೊಡುಗೆ ಕಾರಣ. ರಾಜ್ಯದ ಹಲವು ಗ್ರಾಮಗಳು, ಪಟ್ಟಣಗಳಲ್ಲಿ ಜಕಣಾಚಾರಿಯವರು ಕೆತ್ತಿದ ದೇವಾಲಯಗಳು ಕರ್ನಾಟಕದ ವೈಭವ ಎತ್ತಿಹಿಡಿಯುತ್ತಿವೆ ಎಂದು ತಿಳಿಸಿದರು.

ಬೃಹದಾಕಾರದ ಪ್ರತಿಮೆ ನಿರ್ಮಿಸಿ: ಸಹಸ್ರಾರು ದೇವಾಲಯಗಳನ್ನು ತಮ್ಮ ಶಿಲ್ಪಕಲಾ ಕೌಶಲ್ಯದ ಮೂಲಕ ಜಕಣಾಚಾರಿಯವರು ಕೊಡ ಮಾಡಿದ್ದಾರೆ. ಬೇಲೂರು–ಹಳೇಬೀಡು ದೇವಾಲಯಗಳ ಮುಂದೆ ಬೃಹದಾಕಾರದ ಜಕಣಾಚಾರಿಯವರ ಕಂಚಿನ ಪ್ರತಿಮೆ ನಿರ್ಮಾಣ ಮಾಡಬೇಕು. ಆ ಮೂಲಕ ಈ ದೇವಾಲಯಗಳ ರೂವಾರಿ ಯಾರೆಂದು ತಿಳಿಸುವ ಕೆಲಸವಾಗಬೇಕು. ಇಡೀ ವಿಶ್ವಕ್ಕೆ ಕೀರ್ತಿ ಕಳಶಪ್ರಾಯವಾಗಿರುವ ಬೇಲೂರು ದೇವಾಲಯವು ಅಭೂತಪೂರ್ವ ಶಿಲ್ಪಕಲಾ ಕೌಶಲ್ಯ ಹೊಂದಿದೆ. ಆಧುನಿಕ ಜಗತ್ತು ಯಾವ ರೀತಿ ಜೀವನ ಶೈಲಿಯಲ್ಲಿರುತ್ತದೆ ಎಂದು ಅಂದೇ ಶಿಲಾಬಾಲಕಿಯರ ಮೂಲಕ ವ್ಯಕ್ತಪಡಿಸಲಾಗಿದೆ. ಶಿಲಾಬಾಲೆಯರ ಕೇಶ ಶೃಂಗಾರ, ಧರಿಸಿರುವ ಆಭರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವರ ದೂರದೃಷ್ಟಿ ಅರಿವಿಗೆ ಬರಲಿದೆ. ಅಂತಹ ಕೆತ್ತನೆ ಮಾಡಲಾಗಿದೆ ಎಂದು ವೀರಣ್ಣ ಎಂ.ಅರ್ಕಸಾಲಿ ವಿವರಿಸಿದರು.

ಇದಕ್ಕೂ ಮುನ್ನ ಜಕಣಾಚಾರಿಯವರ ಫೋಟೋಗೆ ಪುಷ್ಪ ನಮನ ಸಲ್ಲಿಸಲಾಯಿತು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಅಪರ ಜಿಲ್ಲಾಧಿಕಾರಿ ಡಾ. ಮಂಜುನಾಥಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸಮುದಾಯದ ಮುಖಂಡರಾದ ಕೆಂಪರಾಜು, ಪುಟ್ಟಸೋಮಚಾರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವಕರ್ಮ ಶ್ರೀ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಜಕಣಾಚಾರಿಯವರ ಫೋಟೋಗೆ ಪುಷ್ಪ ನಮನ ಸಲ್ಲಿಸಲಾಯಿತು.

ಜಕಣಾಚಾರಿ ಕಾಲ್ಪನಿಕ ವ್ಯಕ್ತಿ ಎಂಬ ವಾದ ಸರಿಯಲ್ಲ...

ಜಕಣಾಚಾರಿ ಕಾಲ್ಪನಿಕ ವ್ಯಕ್ತಿ ಎಂಬ ವಾದವಿದ್ದು, ಇದು ಸರಿಯಲ್ಲ. ಅವರ ಕಾಲದಲ್ಲಿ ಯಾವುದೇ ಶಿಲ್ಪಿಗಳು ತಮ್ಮ ಕೆತ್ತನೆ ಹೆಸರು ಬರೆದುಕೊಳ್ಳುತ್ತಿರಲಿಲ್ಲ. ಜಕಣಾಚಾರಿಯವರ ಕುರಿತು ಹೆಚ್ಚಿನ ಸಂಶೋಧನೆಗಳನ್ನು ನಡೆಸುವ ಮೂಲಕ ಅವರ ಅಸ್ತಿತ್ವ 100ಕ್ಕೆ 100ರಷ್ಟು ಸತ್ಯ ಎಂದು ಸಾಬೀತು ಮಾಡಬೇಕಿದೆ. ಅವರ ಸಂಸ್ಮರಣಾ ದಿನಾಚರಣೆಯಂದು ಕನಿಷ್ಠ ಐವರು ಶಿಲ್ಪಿಗಳನ್ನು ಗೌರವಿಸುವ ಕೆಲಸವಾಗಬೇಕು. ಶಿಲ್ಪಿಗಳ ಕೆತ್ತನೆ ಕಾರ್ಯಕ್ಕೆ ಸುರಕ್ಷತೆ ಒದಗಿಸಲು ಸರ್ಕಾರ ಯೋಜನೆ ರೂಪಿಸಬೇಕು. ಶಿಲ್ಪಿಗಳಿಗೆ ಗುರುತಿನ ಚೀಟಿ ವ್ಯವಸ್ಥೆ ಕಲ್ಪಿಸಿ, ಕಲ್ಲು ಮತ್ತು ಬೆಳ್ಳಿ ಬಂಗಾರ ಖರೀದಿ ಪ್ರಕ್ರಿಯೆ ಸರಳೀಕರಣಗೊಳಿಸಬೇಕು.

-ವೀರಣ್ಣ ಎಂ.ಅರ್ಕಸಾಲಿ

ಅಮರಶಿಲ್ಪಿ ಜಕಣಾಚಾರಿ ಹೆಸರಿನಲ್ಲಿ ದೊಡ್ಡ ಮಟ್ಟದಲ್ಲಿ ಶಿಲ್ಪಕಲೆ ಉತ್ಸವ ಆಚರಿಸಬೇಕು

ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ

ಮೈಸೂರು,ಜ.1(ಪಿಎಂ)– ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಹೆಸರಿನಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಷ್ಟೇ ದೊಡ್ಡ ಮಟ್ಟದಲ್ಲಿ ಶಿಲ್ಪಕಲೆ ಉತ್ಸವ ಆಚರಿಸಬೇಕು ಎಂದು ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ ಅಭಿಪ್ರಾಯಪಟ್ಟರು.

ವಿಶ್ವಕರ್ಮ ಶ್ರೀ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯವನ್ನು ಶಿಲ್ಪಕಲೆಯ ತವರೂರು ಎನ್ನುತ್ತೇವೆ. ಹಾಗಾಗಿ ಶಿಲ್ಪಕಲೆಯ ಉತ್ಸವ ಇಲ್ಲಿ ಆಗಬೇಕು. ವಿಶ್ವಕರ್ಮ ಸಮುದಾಯ ಇಲ್ಲವಾಗಿದ್ದರೆ ಇಂದು ಸನಾತನ ಧರ್ಮಕ್ಕೆ ದೈವ ಸ್ವರೂಪ ದೊರೆಯುತ್ತಿರಲಿಲ್ಲ ಎಂದರು.

ಭಾರತ ಭವ್ಯ ಪರಂಪರೆಯ ದೇಶವೆಂದು ಇಡೀ ವಿಶ್ವದಲ್ಲಿ ಮಾನ್ಯತೆ ಗಳಿಸಿದ್ದರೆ ಅದರ ಮೊದಲ ಸಿಂಹಪಾಲು ವಿಶ್ವಕರ್ಮ ಸಮಾಜದ ಶಿಲ್ಪಕಲೆಗೆ ಸಲ್ಲಬೇಕು. ಅದರ ಹೆಗ್ಗುರುತು ಕರ್ನಾಟಕದ ಶಿಲ್ಪಕಲೆಯಲ್ಲಿದ್ದು, ಇಡೀ ಕರ್ನಾಟಕವನ್ನೇ ಶಿಲ್ಪಕಲೆಯಾಗಿ ನಿರ್ಮಿಸಿದ ಕೀರ್ತಿ ಜಕಣಾಚಾರಿಯವರಿಗೆ ಸಲ್ಲುತ್ತದೆ. ಈ ದೃಷ್ಟಿಯಲ್ಲೇ ನಾಡಗೀತೆಯಲ್ಲಿ ಕುವೆಂಪುರವರು ಡಂಕಣ–ಜಕಣರನ್ನು ಸ್ಮರಿಸಿದ್ದಾರೆ ಎಂದು ಹೇಳಿದರು.

ಸಾಧನೆಗಿಂತ ಜಾತಿ ದೊಡ್ಡದು: ಸರ್ವಜ್ಞನ ತ್ರಿಪದಿ ಮನುಷ್ಯನ ಆದರ್ಶ ಬದುಕಿನ ಪಾಠ ಹೇಳುತ್ತವೆ. ಭಾರತ ಅಷ್ಟೇ ಅಲ್ಲ, ವಿಶ್ವಕ್ಕೆ ಬೇಕಾದ ಬದುಕಿಗೆ ಪಾಠ ಅಲ್ಲಿದೆ. ಅಂತಹ ಸರ್ವಜ್ಞರನ್ನು ನಾವು ವಿಶ್ವಮಟ್ಟದಲ್ಲಿ ಗುರುತಿಸಬೇಕಿತ್ತು. ಆದರೆ ಅವರು ಕುಂಬಾರರು ಎಂಬ ಕಾರಣಕ್ಕೆ ಕೇವಲ ತ್ರಿಪದಿಯಲ್ಲಷ್ಟೇ ಉಳಿಸಲಾಗಿದೆ. ಅವರಂತೆಯೇ ಜಕಣಾಚಾರಿಯವರ ವಿಚಾರದಲ್ಲೂ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಶ್ವಕರ್ಮ ಸಮಾಜಕ್ಕೆ ಒಂದು ಶತಮಾನದ ಹಿಂದೆ ಅಕ್ಷರ ಜ್ಞಾನ ದೊರೆತಿದ್ದರೆ ಇಂದು ಐಎಎಸ್, ಐಪಿಎಸ್ ಅಧಿಕಾರಿಗಳು ಈ ಸಮಾಜದಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಶಿಲ್ಪಕಲೆ, ಕೇಶಾಲಂಕಾರ, ಮಣ್ಣಿನ ಕಲೆಗೆ ಮೊದಲಾದವುಗಳಿಗೆ ಪದವಿ, ಪಿಹೆಚ್‌ಡಿಯ ತತ್ಸಮಾನದ ಮಾನ್ಯತೆ ನೀಡಬೇಕು. ಯಾವುದೇ ಸಮಾಜ ಚಲನಶೀಲವಾಗಿರಲು ಕಾಯಕ ಸಮಾಜಗಳ ಕುಲಕಸುಬುಗಳು ಮಹತ್ವದ ಪಾತ್ರ ವಹಿಸಲಿವೆ ಎಂದು ತಿಳಿಸಿದರು.

ಅಂದಿನ ಅನುಭವ ಮಂಟಪದಲ್ಲಿ ಹಿಂದುಳಿದ ಸಮಾಜದ ಶರಣರಿಗೆ ಸ್ಥಾನ ದೊರೆತಿತ್ತು. ಇಂದಿನ ಅನುಭವ ಮಂಟಪವಾದ ವಿಧಾನಸೌಧದಲ್ಲಿ ನಮ್ಮ ಸಂಖ್ಯೆಗೆ ಅನುಗುಣವಾಗಿ ಎಲ್ಲಿದೇ ಸ್ಥಾನ? ಎಲ್ಲಿದೆ ಸಾಮಾಜಿಕ ನ್ಯಾಯ? ಎಂಬ ಪ್ರಶ್ನೆ ಕಾಡುತ್ತಿದೆ ಎಂದರು.

ಜಾತಿ ನಿಗಮಗಳಿಂದ ಅನಾನುಕೂಲ: ಜಾತಿ ಹೆಸರಿನಲ್ಲಿ ಪ್ರತ್ಯೇಕ ನಿಗಮಗಳು ಆಗಿರುವುದು ಅನುಕೂಲಕ್ಕಿಂತಲೂ ಹೆಚ್ಚಾಗಿ ಅನಾನುಕೂಲ ಉಂಟು ಮಾಡಿವೆ. ದೇವರಾಜ ಅರಸು ನಿಗಮ ಒಂದು ತುಂಬಿದ ಕುಟುಂಬ ಇದ್ದಂತೆ. ಇದರಲ್ಲಿ ಇದ್ದಾಗ ಎಲ್ಲವೂ ಹಿಂದುಳಿದ ವರ್ಗಗಳಿಗೆ ದೊರೆಯುತ್ತಿತ್ತು. ಆದರೆ ಪ್ರತ್ಯೇಕ ನಿಗಮಗಳಲ್ಲಿ ಸಮರ್ಪಕ ಸೌಲಭ್ಯ ದೊರೆಯದಾಗಿದೆ. ಹಾಗಾಗಿ ಎಲ್ಲವನ್ನು ದೇವರಾಜ ಅರಸು ನಿಗಮಕ್ಕೆ ವಿಲೀನಗೊಳಿಸಿ ಎಂದು ಬೇಡಿಕೆ ಮುಂದಿಡುವುದೇ ಸೂಕ್ತ. 500ರಿಂದ ಸಾವಿರ ಕೋಟಿ ರೂ.ವರೆಗೆ ದೇವರಾಜ ಅರಸು ನಿಗಮಕ್ಕೆ ಅನುದಾನ ಬರುತ್ತದೆ ಎಂದರಲ್ಲದೆ, ವಿಶ್ವಕರ್ಮ ಸಮುದಾಯದ ಕೌಶಲ್ಯತೆಗೆ ಪಾಲಿಕೆ ಬಜೆಟ್‌ನಲ್ಲಿ ವಿಶೇಷ ಧನ ನೀಡಲು ಮೇಯರ್ ಅವರಲ್ಲಿ ಮನವಿ ಮಾಡಿದರು.



ಮೈಸೂರು ವಿಶ್ವವಿದ್ಯಾಲಯದ ಕಾನೂನು ಶಿಕ್ಷಣ ಮಂಡಳಿಯ ನೂತನ ನಿರ್ದೇಶಕ ಡಾ. ಎಸ್. ಶ್ರೀಕಂಠಸ್ವಾಮಿ ಅವರನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿನಂದಿಸಿದರು. ವಿವಿ ಹಂಗಾಮಿ ಕುಲಪತಿ ಪ್ರೊ. ಹೆಚ್.ರಾಜಶೇಖರ್, ಕುಲಸಚಿವೆ ವಿ.ಆರ್.ಶೈಲಜಾ, ಪರೀಕ್ಷಾಂಗ ಕುಲಸಚಿವ ಜ್ಞಾನಪ್ರಕಾಶ್ ಇನ್ನಿತರರಿದ್ದಾರೆ.

ಧನ್ಯಾಸಿಯಲ್ಲಿ ಸಂಗೀತದ ಜುಗಲ್ ಬಂದಿ



ಮೈಸೂರು, ಜ.1(ಜಿಎ)– ರಾಜ್ಯ ಸಂಗೀತ ವಿದ್ವಾನ್ ಎಸ್.ಮಹದೇವಪ್ಪ ಅವರ 5ನೇ ವರ್ಷದ ಸ್ಮರಣಾರ್ಥ ಜೆಎಸ್‌ಎಸ್ ಸಂಗೀತಾ ಸಭಾ ವತಿಯಿಂದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಧನ್ಯಾಸಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.


ಯು.ರಾಜೇಶ್ ಮತ್ತು ಡಾ.ಎಂ. ಮೈಸೂರು ಮಂಜುನಾಥ್ ಅವರ ಮ್ಯಾಂಡೋಲಿನ್ ಹಾಗೂ ಪಿಟೀಲು ಜುಗಲ್ ಬಂದಿ ಎಲ್ಲರ ಗಮನ ಸೆಳೆಯಿತು. ಇವರಿಗೆ ಬೆಂಗಳೂರಿನ ವಿ.ಪ್ರವೀಣ್ ಮೃದಂಗ, ಪ್ರವೀಣ್ ನಾರಾಯಣ್ ತಬಲ ಹಾಗೂ ಸ್ವಾಮಿ ನಾಥನ್ ಸೆಲ್ವ ಗಣೇಶ್ ಖಂಜಿರಾ ವಾದ್ಯಗಳು ಸಾಥ್ ನೀಡಿದರು. ಈ ವೇಳೆ ಎಚ್‌ಸಿಜಿ ಛೇರ್‌ಮನ್ ಡಾ. ಅಜಯ್ ಕುಮಾರ್ ಮತ್ತು ಪ್ರೊ. ರಂಗನಾಥನ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಅಜಾದಿ ಕಾ ಅಮೃತ್ ಮಹೋತ್ಸವ ಯೋಗಾಥಾನ್‌ಗೆ ಲಕ್ಷ ಯೋಗಪಟುಗಳು

ಮೈಸೂರು, ಜ.1– 2022–23 ನೇ ಸಾಲಿನ ಅಜಾದಿ ಕಾ ಅಮೃತ್ ಮಹೋತ್ಸವ ಯೋಗಥಾನ್ ಕಾರ್ಯಕ್ರಮವನ್ನು ಜ.15 ರಂದು ಹಮ್ಮಿಕೊಂಡಿದ್ದು, ಮೈಸೂರು ಯೋಗಕೇಂದ್ರವಾಗಿರುವುದರಿಂದ ಒಂದು ಲಕ್ಷ ಯೋಗಪಟುಗಳನ್ನು ಯೋಗಥಾನ್‌ಗೆ ಸೇರಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ ಅಂಗವಾಗಿ ಯೋಗಾಥಾನ್ ಕಾರ್ಯಕ್ರಮ ಆಯೋಜಿಸುವ ಕುರಿತು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ. ಈ ಬಾರಿ ಒಂದು ಲಕ್ಷ ಅಭ್ಯರ್ಥಿಗಳು ಭಾವಹಿಸುವಂತೆ ಮಾಡಬೇಕು. ಇದಕ್ಕೆ ಸಂಬಂಧಿತವಾಗಿ ಜಿಲ್ಲೆಗೆ ಸಂಬಂಧಿತ ಸರ್ಕಾರಿ, ಸರ್ಕಾರೇತರ ಸಂಸ್ಥೆಯಲ್ಲಿ ಇರುವ ವಿದ್ಯಾರ್ಥಿಗಳನ್ನು, ಜಿಲ್ಲೆಯಲ್ಲಿ ಇರುವ ಸರ್ಕಾರಿ ಹಾಸ್ಟೆಲ್ ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಹಾಜರಾಗುವಂತೆ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಬರುವಂತಹ ಯೋಗಪಟುಗಳ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಪಡೆದುಕೊಳ್ಳಿ. ಬರುವಂತಹ ಎಲ್ಲರಿಗೂ ಮಹಾನಗರ ಪಾಲಿಕೆ ವತಿಯಿಂದ ಕುಡಿಯುವ ನೀರು, ಶೌಚಾಲಯ, ಮತ್ತು ಶುಚಿತ್ವದ ವ್ಯವಸ್ಥೆಯನ್ನು ಮಾಡಲಾಗುವುದು. ಹೆಚ್ಚಿನ ಸುರಕ್ಷತಾ ಕ್ರಮಕ್ಕಾಗಿ ಆಂಬುಲೆನ್ಸ್ ವ್ಯವಸ್ಥೆ ಮತ್ತು ಯೋಗಕಾರ್ಯಕ್ರಮಕ್ಕೆ ಬರುವ ಅಭ್ಯರ್ಥಿಗಳಿಗೆ ಯೋಗ ಶಿಕ್ಷಕರನ್ನು ಆಯೋಜಿಸಬೇಕು ಎಂದು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಿದರು. ಸಭೆಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪ್ರೇಮ್ ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ ನಡೆದ ಹೊಸ ವರ್ಷಾಚರಣೆ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸ್ನೇಹಿತರೊಡಗೂಡಿ ನೃತ್ಯ ಮಾಡಿದರು.

ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರ ಬಡಾವಣೆ ರಸ್ತೆಯುದ್ದಕ್ಕೂ ಕಸದ ರಾಶಿ

ಕಣ್ಮುಚ್ಚಿ ಕುಳಿತಿರುವ ಅಧಿಕಾರಿಗಳು



ಮೈಸೂರು, ಜ.1(ಎಸ್‌ಬಿಡಿ)– ಎಲ್ಲೆಂದರಲ್ಲಿ ಕಸ ಬಿಸಾಡುವ ಕೊಳಕು ಮನಸ್ಥಿತಿಯ ಜನರಿಂದ ಸ್ವಚ್ಛ ನಗರಿ ಮೈಸೂರು ನಲುಗುತ್ತಿದೆ.

ತಮ್ಮ ಮನೆಯ ಕಸವನ್ನು ಸಾರ್ವಜನಿಕ ಸ್ಥಳಕ್ಕೆ ಬಿಸಾಡಿ ಕೈತೊಳೆದುಕೊಳ್ಳುವ ಮನೋಭಾವ ಬದಲಾಗುವವರೆಗೂ ಮೈಸೂರು ನಿಜವಾಗಿ ಸ್ವಚ್ಛ ನಗರ ಎನಿಸಿಕೊಳ್ಳಲಾಗದು. ಸೂರ್ಯೋದಯವಾಗುತ್ತಿದ್ದಂತೆ ಮನೆ ಬಳಿಯೇ ಬಂದು ಕಸ ಸಂಗ್ರಹಿಸುವುದರ ಜೊತೆಗೆ ರಸ್ತೆಯ ಮೂಲೆ, ಚರಂಡಿ ಬಳಿ ರಾಶಿ ಹಾಕುವ ತ್ಯಾಜ್ಯವನ್ನು ಪೌರ ಕಾರ್ಮಿಕರು ತೆರವುಗೊಳಿಸಿ ನಗರವನ್ನು ಸ್ವಚ್ಛ ಮಾಡುತ್ತಾರೆ. ಆದರೆ ನಂತರವೂ ಎಲ್ಲೆಂದರಲ್ಲಿ ಕಸ ಎಸೆಯುವುದರಿಂದ ಅಶುಚಿತ್ವ ತಾಂಡವವಾಡುತ್ತದೆ.

ಇದಕ್ಕೆ ಚಾಮುಂಡಿಬೆಟ್ಟ ತಪ್ಪಲಿನ ಲಲಿತಾದ್ರಿಪುರ ಬಡಾವಣೆ ರಸ್ತೆ ಜ್ವಲಂತ ಸಾಕ್ಷಿ. ಜೆಎಸ್‌ಎಸ್ ಆಯುರ್ವೇಧ ಕಾಲೇಜು ಮಾರ್ಗವಾಗಿ ಲಲಿತಾದ್ರಿಪುರ ಬಡಾವಣೆ ಹಾಗೂ ನಿರ್ಮಲಾ ಆಸ್ಪತ್ರೆ ಸಂಪರ್ಕಿಸುವ ರಸ್ತೆ ಕಸದಿಂದ ಆವೃತವಾಗಿದೆ. ರಸ್ತೆಯುದ್ದಕ್ಕೂ ಇಕ್ಕೆಲಗಳಲ್ಲಿ ಬಿದ್ದಿರುವ ತ್ಯಾಜ್ಯ, ನಾಗರಿಕತೆಯನ್ನು ಅಣಕಿಸುವಂತಿದೆ. ಕನಿಷ್ಟ ಪರಿಜ್ಞಾನವಿಲ್ಲದ ನಡವಳಿಕೆ ಇಲ್ಲಿ ಅನಾವರಣವಾಗಿದೆ ಪರಿಸರದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದವರ ದುಷ್ಕೃತ್ಯ ಕಣ್ಣಿಗೆ ಕಟ್ಟುತ್ತದೆ.

ಹರಿದಿರುವ ಪ್ಲಾಸ್ಟಿಕ್, ಕವರ್‌ನಲ್ಲಿ ಕಟ್ಟಿರುವ ತ್ಯಾಜ್ಯ, ಹಳೆಯ ಬಟ್ಟೆ, ತರಕಾರಿ ತ್ಯಾಜ್ಯ, ಉಳಿದ ಆಹಾರ, ಮುರಿದಿರುವ ಪ್ಲಾಸ್ಟಿಕ್ ಡಬ್ಬಿಗಳು, ಒಡೆದಿರುವ ಗಾಜಿನ ವಸ್ತುಗಳು, ಮದ್ಯದ ಬಾಟಲಿಗಳು, ಹೀಗೆ ಮನೆಯಲ್ಲಿದ್ದ ಅನುಪಯುಕ್ತ ವಸ್ತುಗಳೆಲ್ಲಾ ಈ ರಸ್ತೆಯಲ್ಲಿ ಬಿದ್ದು ಒದ್ದಾಡುತ್ತಿವೆ. ಗಾಳಿ ಜೋರಾದರೆ ತ್ಯಾಜ್ಯ ರಸ್ತೆಯಲ್ಲೆಲ್ಲಾ ಹರಡುತ್ತವೆ. ಪ್ಲಾಸ್ಟಿಕ್ ಕವರ್‌ಗಳು ತೂರುವುದರಿಂದ ಅಕ್ಕಪಕ್ಕದ ಪರಿಸರಕ್ಕೂ ಮಾರಕವಾಗಿದೆ. ಹೋಟೆಲ್ ಮತ್ತಿತರರ ವಾಣಿಜ್ಯ ಮಳಿಗೆಗಳ ಅಪಾರ ಪ್ರಮಾಣದ ತ್ಯಾಜ್ಯ ಹಾಗೂ ಕಟ್ಟಡ ತ್ಯಾಜ್ಯವನ್ನೂ ಇಲ್ಲಿ ತಂದು ಸುರಿಯಲಾಗಿದೆ. ಈ ರಸ್ತೆಯ ದುಸ್ಥಿತಿ ಕಂಡರೆ ಯಾರೇ ಆದರೂ ಒಂದು ಕ್ಷಣ ಅವಕ್ಕಾಗುತ್ತಾರೆ.

ಉತ್ತಮವಾದ ರಸ್ತೆಯಲ್ಲಿ ತ್ಯಾಜ್ಯ ಬಿಸಾಡುವವರು ಹೇಗೆ ನಾಗರೀಕ ರಾಗುತ್ತಾರೆ. ರಸ್ತೆಯುದ್ದಕ್ಕೂ ಕಸದ ರಾಶಿಯನ್ನು ನೋಡಿದರೆ ಖಂಡಿತವಾಗಿ ಮನಸ್ಸಿಗೆ ನೋವಾಗುತ್ತದೆ. ರಸ್ತೆ ಮಾಡಿರುವುದು ಜನರ ಉಪಯೋಗಕ್ಕೆ ಅಲ್ಲವೇ. ನಮ್ಮ ಸುತ್ತ ಮುತ್ತಲ ಪರಿಸರದ ಸ್ವಚ್ಛತೆ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಲ್ಲವೇ. ಬೇಜವಾಬ್ದಾರಿ ಜನ ಮಾಡಿರುವ ಕೃತ್ಯವನ್ನು ವ್ಯವಸ್ಥೆಯೂ ನಿರ್ಲಕ್ಷಿಸಿದೆ. ರಸ್ತೆಗೆ ಹರಡಿರುವ ತ್ಯಾಜ್ಯ ತೆರವು ಮಾಡಿ, ಮತ್ತೆ ಕಸ ಹಾಕುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡುತ್ತಿಲ್ಲ ಎಂದು ಹಿರಿಯರಾದ ನಾಗೇಶ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ.



ಸಂಗೀತದ ಮೂಲಕ ಹೊಸ ವರ್ಷಕ್ಕೆ ಸ್ವಾಗತ

ಡಾ.ರಾಜ್, ವಿಷ್ಣು, ಅಂಬಿ ಅಭಿನಯದ ಗೀತೆಗಳ ಗಾನಸುಧೆ



ಮೈಸೂರು, ಜ.1(ಜಿಎ)– ಕನ್ನಡ, ಹಿಂದಿ ಮತ್ತು ತೆಲುಗು ಚಲನಚಿತ್ರ ಗೀತೆಗಳ ಮೂಲಕ ಗಾಯಕರು ಹೊಸ ವರ್ಷವನ್ನು ಸ್ವಾಗತಿಸಿದರು. ಭೂಮಿಕಾ ಅಸೋಸಿಯೇಟ್ಸ್ ಹಾಗೂ ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗದ ಜಂಟಿ ಆಶ್ರಯದಲ್ಲಿ ಹೊಸ ವರ್ಷದ ಸಂಭ್ರಮದ ಪ್ರಯುಕ್ತ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಿದ್ದ ಗಾನಮಂಜರಿ ಕಾರ್ಯಕ್ರಮದಲ್ಲಿ ಗಾಯಕರು ರಂಜಿಸಿದರು.

ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್ ಚಲನಚಿತ್ರ ಗೀತೆಗಳು ಸೇರಿದಂತೆ ಹಿಂದಿ ಮತ್ತು ತೆಲುಗಿನ ಪ್ರಸಿದ್ಧ ಚಿತ್ರ ಗೀತೆಗಳನ್ನು ಸಂಗೀತ ನಿರ್ದೇಶಕ ಎ.ಎಸ್.ಪ್ರಸನ್ನಕುಮಾರ್ ನೇತೃತ್ವದಲ್ಲಿ ಗಾಯಕರಾದ ಶ್ರೀನಾಥ್ ಭಾರದ್ವಾಜ್, ಡಾ.ಎ.ಡಿ.ಶ್ರೀನಿವಾಸ್, ಸಿ.ವಿಶ್ವನಾಥ್, ರಾಘವೇಂದ್ರ ರತ್ನಾಕರ್, ರಾಮಚಂದ್ರ, ನೀತು ನಿನಾದ್, ಹಂಸಿನಿ ಕುಮಾರ್, ದಿವ್ಯಾ ಮತ್ತು ನಯನ ನಾಗರಾಜ್ ಪ್ರಸ್ತುತಪಡಿಸಿದರು.

ಇವರಿಗೆ ವಾದ್ಯವೃಂದದಲ್ಲಿ ಎ.ಎಸ್.ಪ್ರಸನ್ನಕುಮಾರ್, ವೀರೇಶ್, ರಘುನಾಥ್, ನೀತು ನಿನಾದ್, ವಿನ್ಸೆಂಟ್, ಟೈಟಸ್, ಕೌಶಿಕ್, ಕುಮಾರ್ ಮತ್ತು ಸುದರ್ಶನ್ ಸಾಥ್ ನೀಡಿದರೆ, ಮೈಸೂರು ಆನಂದ್ ಅವರು ತಮ್ಮ ಹಾಸ್ಯದ ಚಟಾಕಿಯಿಂದ ನಗೆಯ ಹೊನಲು ಹರಿಸಿದರು.

ಕಾರ್ಯಕ್ರಮದಲ್ಲಿ ಮೇಲುಕೋಟೆಯ ಶ್ರೀವಂಗೀಪುರ ನಂಬಿಮಠದ ಪೀಠಾಧಿಪತಿ ಇಳೈ ಆಳ್ವಾರ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಬಳಗದ ಅಧ್ಯಕ್ಷ ಕೆ.ಎಸ್.ಸುರೇಶ್, ಮುಖಂಡ ವಾಸುದೇವ ಇದ್ದರು.

ಮದರಸಗಳ ಆಧುನೀಕರಣಕ್ಕೆ ಅನುದಾನ ನೀಡಲು ಅರ್ಜಿ ಅಹ್ವಾನ

ಮೈಸೂರು, ಜ.1– 2022–2023 ನೇ ಸಾಲಿಗೆ ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಮದರಸಗಳಿಗೆ ಆಧುನೀಕರಣ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಅನುದಾನ ಬಿಡುಗಡೆ ಮಾಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಮೈಸೂರು ಮತ್ತು ಬೆಂಗಳೂರು ರಸ್ತೆಯಲ್ಲಿರುವ ಮೌಲನಾ ಆಜಾದ್ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ–9741868917 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಇತಿಹಾಸ ಗೊತ್ತಿಲ್ಲದವರಿಂದ ಇತಿಹಾಸ ತಿರುಚುವ ಪ್ರಯತ್ನ

ಬಹುಭಾಷಾ ನಟ ಪ್ರಕಾಶ್ ರಾಜ್ ಆರೋಪ



ಮೈಸೂರು, ಜ.1(ಎಂಕೆ)– ಇತಿಹಾಸವೇ ಗೊತ್ತಿಲ್ಲದವರು ಪ್ರಸ್ತುತ ಹಾಗೂ ಭವಿಷ್ಯ ಏನೆಂಬುದು ತಿಳಿಯದೆ ಇತಿಹಾಸವನ್ನೇ ತಿರುಚೋ ಪ್ರಯತ್ನ ಮಾಡುತ್ತಿದ್ದಾರೆ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಆರೋಪಿಸಿದರು.

ಮೈಸೂರಿನ ಅಶೋಕಪುರಂ ಸಮೀಪದ ಜಯನಗರ ರೈಲ್ವೆ ಗೇಟ್ ಹತ್ತಿರ ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಹಾಗೂ ದಲಿತರ ಸ್ವಾಭಿಮಾನ ಜಾಗೃತಿ ದಿನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸವೇ ಇಲ್ಲದವರು ಇತಿಹಾಸ ತಿರುಚುತ್ತಾ ನಮಗೂ ಒಂದು ಇತಿಹಾಸವಿದೆ ಎನ್ನುವ ಪ್ರಯತ್ನ ಮಾಡುತ್ತಿದ್ದಾರೆ. ಭೀಮಾ ಕೋರೆಗಾಂವ್ ವಿಜಯೋತ್ಸವ ನಮ್ಮ ಸ್ವಾಭಿಮಾನದ ಸಂಕೇತ. ವಿಜಯೋತ್ಸವ ಆಚರಿಸಿದವರನ್ನು ಜೈಲಿಗೆ ಕಳುಹಿಸುವ ಮೂಲಕ ಕೋರೆಗಾಂವ್ ಇತಿಹಾಸ ತಿರುಚುವ, ಮರೆ ಮಾಡುವ ಪ್ರಯತ್ನ ಮಾಡಿದ್ದಾರೆ ಎಂದು ಕಿಡಿಕಾರಿದರು.

ಸೆಲ್ಫಿ ಜಾತಿ: ಇತಿಹಾಸ ಇಲ್ಲದವರು ಸೆಲ್‌ಫೋನ್‌ಗಳಲ್ಲಿ ಸೆಲ್ಫಿ ತೆಗೆದುಕೊಳ್ಳುವ ಜಾತಿಯವರು. ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತ ದೇಶಕ್ಕೆ, ಒಂದು ಸಮಾಜಕ್ಕೆ, ಮೌಲ್ಯಗಳಿರುವ ಮನುಕುಲಕ್ಕೆ ಮಾರಕ ಎಂದು ಯಾರನ್ನು ಗಡಿಪಾರು ಮಾಡಿದ್ದರೋ ಅವರು, ನಮ್ಮ–ನಿಮ್ಮೆಲ್ಲರ ತೆರಿಗೆ ದುಡ್ಡಿನಿಂದ ಪಟೇಲರ ಪ್ರತಿಮೆ ನಿರ್ಮಿಸಿ ಅದರ ಮುಂದೆ ಸೆಲ್ಫಿ ತೆಗೆದುಕೊಳ್ಳುವವರಾಗಿದ್ದಾರೆ ಎಂದು ವ್ಯಂಗ್ಯವಾಡಿದರು.

ಸುಳ್ಳಿಗೆ ಆಯಸ್ಕಾಂತದ ಶಕ್ತಿಯಿದೆ ಎನ್ನುತ್ತಾ ಸುಳ್ಳನ್ನೇ ಸತ್ಯವೆಂದು ಸಾವಿರ ಭಾರೀ ಹೇಳಿ ನಂಬಿಸುವ ಪ್ರಯತ್ನ ಮಾಡುತ್ತಾರೆ. ಇವರ ಕಾಗೆ–ಗೂಬೆ ಕಥೆಗಳು ನಮಗೂ ಗೊತ್ತಿದೆ. ಗುಬ್ಬಚ್ಚಿ ಮೇಲೆ ಕುಳಿತು ಸಾವರ್ಕರ್ ಬಂದರಂತೆ. ಗೋ ಮೂತ್ರ ಬಹಳ ಶ್ರೇಷ್ಠವಂತೆ. ಆದರೆ ಜೈ ಭೀಮ್ ಚೈತನ್ಯಗಳು ಇವರ ಕಾಗೆ–ಗೂಬೆ ಸುಳ್ಳು ಕಥೆಗಳನ್ನು ಸತ್ಯವನ್ನಾಗಿಸಲು ಬಿಡುವುದಿಲ್ಲ. ಜೈ ಭೀಮ್ ಅಸ್ಮಿತೆಯುಳ್ಳವರನ್ನು ದಾರಿ ತಪ್ಪಿಸಲು ಸಾಧ್ಯವೂ ಇಲ್ಲ ಎಂದರು.

ಪ್ರಪಂಚದಲ್ಲಿಯೇ ಬಲಪಂಥೀಯರು ಆಗಾಗ ಬರುತ್ತಾರೆ. ಅವರಿಗೆ ಇತಿಹಾಸವಿಲ್ಲದಿರುವುದರಿಂದ ಭವಿಷ್ಯವೂ ಇಲ್ಲ. ಇತಿಹಾವಿರುವುದು ಅದ್ಭುತ ಚಿಂತನೆಗಳಿಗೆ, ಸತ್ಯಕ್ಕೆ ಹೊರತು ಸುಳ್ಳಿಗಲ್ಲ. ಅವರಿಂದ ನಮಗೆ ಹೊರಗೆ ಕಾಣಿಸಿಕೊಳ್ಳುವ ಗಾಯಗಳಿಗಿಂತ ಆಳವಾದ ಗಾಯಗಳು ಬಿದ್ದಿವೆ. ಆದರೂ ಅದನ್ನು ಸಹಿಸಿಕೊಳ್ಳುವ ಚೈತನ್ಯ ಶಕ್ತಿ ನಮಗಿದೆ. ನನಗೆ ಕೆಲವರು, ನೀನೊಬ್ಬ ನಟ ನಿನಗ್ಯಾಕಪ್ಪ ಈ ಉಸಾಬರಿ ಎನ್ನುತ್ತಾರೆ. ಆದರೆ ಕೇಳಲಿ ಎಂದು ನಾನು ಹಾಡುವುದಿಲ್ಲ ಹಾಡುವುದು ಅನಿವಾರ್ಯ ಕರ್ಮ ನನಗೆ. ನಾನು ಕಳೆದುಕೊಳ್ಳುವ ಶ್ರೀಮಂತ. ಬಚ್ಚಿಟ್ಟುಕೊಳ್ಳುವ ದರಿದ್ರ ನನಗೆ ಬಂದಿಲ್ಲ. ಯಾಕೆಂದರೆ ನನ್ನ ಶ್ರೀಮಂತಿಕೆ ಅಂಬೇಡ್ಕರ್, ಕುವೆಂಪು, ತೇಜಸ್ವಿ ಎನ್ನುತ್ತಾ ವಿರೋಧಿಸುವವರಿಗೆ ಮಾತಿನಲ್ಲೇ ಚಾಟಿ ಬೀಸಿದರು.

ನಮ್ಮ ದೇಹದಲ್ಲಿಯೇ ಸಮಾನತೆಯ ಅರಿವಿದೆ. ಕೆಂಪು ರಕ್ತದಿಂದ ಸಮಾನತೆಯ ಪಾಠ ಕಲಿಯದವರು ದೇಶಕ್ಕೆ ಏನು ಕೊಡುಗೆ ನೀಡುತ್ತಾರೆ. ಅವರಿಂದ ಸಮಾನತೆಯ ಸಮ–ಸಮಾಜ ನಿರ್ಮಾಣ ಸಾಧ್ಯವಿಲ್ಲ. ಅವರಿಗೆ ಸಮಾನತೆ ಎಂಬುದು ಅರ್ಥವಾಗುವುದಿಲ್ಲ.

-ಪ್ರಕಾಶ್ ರಾಜ್, ಬಹುಭಾಷಾ ನಟ

ಶಾಲಾ ಪಠ್ಯ–ಪುಸ್ತಕದಲ್ಲಿಲ್ಲ: ಸಾಹಿತಿ ಪ್ರೊ.ಓ.ಎಲ್. ನಾಗಭೂಷಣಸ್ವಾಮಿ ಮಾತನಾಡಿ, ಮಹಾತ್ಮ ಗಾಂಧಿಯವರ ಉಪ್ಪಿನ ಸತ್ಯಾಗ್ರಹಕ್ಕೂ ಮುಂಚೆಯೇ ಅಂಬೇಡ್ಕರ್ ನೇತೃತ್ವದಲ್ಲಿ ನಡೆದ ಚೌದಾರ್ ಕೆರೆ ನೀರು ಸತ್ಯಾಗ್ರಹ ಹಾಗೂ ಭೀಮಾ ಕೋರೆಗಾಂವ್‌ನಂತಹ ಪ್ರಮುಖ ಘಟನೆ ಶಾಲಾ ಪಠ್ಯ ಪುಸ್ತಕದಲ್ಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಭಗವಾನ್ ಬುದ್ಧ ಹಾಗೂ ಅಂಬೇಡ್ಕರ್ ಕುರಿತ ಹಾಡುಗಳ ಗಾಯನ ಕಾರ್ಯಕ್ರಮ ನಡೆಯಿತು.

ಶ್ರೀ ಭೋದಿದತ್ತ ಬಂತೇಜಿ, ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್, ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಎಂ.ಸಿದ್ದರಾಜು, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಆರ್.ಸಿ.ಮಹೇಶ್, ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿಯ ಜಯರಾಜ್ ಹೆಗಡೆ, ನೆಲೆಹಿನ್ನೆಲೆ ಗೋಪಾಲ್, ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಶಾಲೆಯಲ್ಲಿ ಪಾಠ ಮಾಡುತ್ತಿದ್ದ ಮೇಷ್ಟ್ರು ಗುಂಡನನ್ನು ಕೇಳಿದರು.

ಮೇಷ್ಟ್ರು : ಕರಡಿಯು ಮೈತುಂಬ ಏಕೆ ಅಷ್ಟೊಂದು ಕೂದಲು ಬೆಳೆದಿರುತ್ತದೆ...?

ಗುಂಡ : ಕಾಡಿನಲ್ಲಿ ಕಟ್ಟಿಂಗ್ ಶಾಪ್ ಇರಲ್ವಲ್ಲಾ ಸಾರ್ ಅದಕ್ಕೆ...!

ಮೈಸೂರು ಮಿತ್ರ

ಸೋಮವಾರ, 2 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

"ನೀವು ಹೋಗುತ್ತಿರುವ ದಾರಿಯಲ್ಲಿ ಯಾವುದೇ ಅಡಚಣೆಗಳು ಎದುರಾಗದಿದ್ದಲ್ಲಿ, ನೀವು ಸರಿಯಾದ ದಾರಿಯಲ್ಲಿ ಹೋಗುತ್ತಿಲ್ಲ ಎಂದರ್ಥ"

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

ನಿಮ್ಮ ಪತ್ರಗಳು

ದೇವಸ್ಥಾನಕ್ಕೆ ಹೋಗಲು ನೆಮ್ಮದಿಯಿಲ್ಲ...

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿ ಸಮೀಪವಿರುವ ರಾಜರಾಜೇಶ್ವರಿ ನಗರದ ರಸ್ತೆಯ ದುಸ್ಥಿತಿ ಹೇಳತೀರದ್ದಾಗಿದ್ದು, ಬಡಾವಣೆ ನಿವಾಸಿಗಳು ಬವಣೆ ಪಡುವಂತಾಗಿದೆ. ಅದರಲ್ಲೂ ರಾಜ ರಾಜೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಪರಿಸ್ಥಿತಿ ನೋಡಿದರೆ, ದೇವಸ್ಥಾನಕ್ಕೆ ಹೋಗುವ ಭಕ್ತರಿಗೆ ನೆಮ್ಮದಿ ಇಲ್ಲದಂತಾಗಿದೆ.



ಸಾಮಾನ್ಯವಾಗಿ ಜನರು ಜೀವನದಲ್ಲಿ ನೊಂದು-ಬೆಂದು, ತಮ್ಮ ಸಂಕಷ್ಟವನ್ನು ನಿವಾರಿಸುವಂತೆ ದೇವರನ್ನು ಪ್ರಾರ್ಥಿಸಲು ತೆರಳುವುದುಂಟು. ಆದರೆ ಇಲ್ಲಿ ದೇವಸ್ಥಾನಕ್ಕೆ ಹೋಗುವ ರಸ್ತೆ ಡಾಂಬರು ಕಾಣದೆ ಎಷ್ಟೋ ವರ್ಷಗಳಾಗಿವೆ. ಕಲ್ಲು ಎದ್ದು ನಿಂತಿದ್ದು, ಇಲ್ಲಿ ವಾಹನ ಚಲಾಯಿಸಲು ಸರ್ಕಸ್ ಮಾಡಬೇಕಾದ ಕೆಟ್ಟ ಪರಿಸ್ಥಿತಿ ಇದೆ.

ದೇವಸ್ಥಾನದ ಸುತ್ತಮುತ್ತ ಇರುವ ಬಡಾವಣೆಯ ರಸ್ತೆಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಇಲ್ಲಿ ಹೇಳೋರು-ಕೇಳೋರು ಯಾರೂ ಇಲ್ಲ. ಸ್ಥಳೀಯ ಜನ ಪ್ರತಿನಿಧಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ.

ಸ್ಥಳೀಯ ನಿವಾಸಿಗಳ ಪ್ರಕಾರ ದೇವಸ್ಥಾನದ ರಸ್ತೆ ಡಾಂಬರೀಕರಣಕ್ಕೆ ಈಗಾಗಲೇ ಗುದ್ದಲಿ ಪೂಜೆ ಆಗಿ ತಿಂಗಳುಗಳೇ ಕಳೆದಿದ್ದರೂ ಕಾಮಗಾರಿ ಮಾತ್ರ ಆರಂಭ ವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳನ್ನು ಕೇಳಿದರೂ ಈಗ ಆಗುತ್ತೆ-ಆಗ ಆಗುತ್ತೆ ಎಂದು ಹೇಳುತ್ತಲೇ ಬರುತ್ತಿದ್ದಾರೆಯೇ ಹೊರತು ಯಾವುದೂ ಕಾರ್ಯಗತವಾಗಿಲ್ಲ.

ತಾಯಿ ರಾಜರಾಜೇಶ್ವರಿದೇವಿ ಸಂಬಂಧಪಟ್ಟವರಿಗೆ ತಕ್ಷಣ ಕಾಮಗಾರಿ ಆರಂಭಿಸುವ ಸದ್ಬುದ್ಧಿಯನ್ನು ಕರುಣಿಸಿ, ಭಕ್ತರಿಗೆ ಆಗುತ್ತಿರುವ ಅನಾನುಕೂಲವನ್ನು ತಪ್ಪಿಸುವಂತೆ ಈ ಮೂಲಕ ಪ್ರಾರ್ಥಿಸುತ್ತಿದ್ದೇವೆ. ಬೇರೆ ದಾರಿಯಿಲ್ಲ.

– ದೀಪಕ್ ವಶಿಷ್ಟ, ಶಾರದಾದೇವಿನಗರ, ಮೈಸೂರು

ಮೀಸಲಾತಿ ತಂದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸಲ್ಲಬೇಕು

ಮಾನ್ಯರೆ,

ಪ್ರಪಂಚಕ್ಕೇ ಮೀಸಲಾತಿಯ ಪರಿಕಲ್ಪನೆಯನ್ನು ತಂದು ಕೊಟ್ಟವರು ಮೈಸೂರಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್. ಅಂದು ಕೆ.ಹೆಚ್.ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಪಟ್ಟ ತಳ ಸಮುದಾಯದ ಜನರಿಗಾಗಿ ಮೀಸಲಾತಿಯನ್ನು ಜಾರಿಗೆ ತಂದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸಲ್ಲಬೇಕು.

ಆದರೆ ಇಂದು ಮೀಸಲಾತಿ ಎಂಬ ಪದಕ್ಕೆ ಅರ್ಥವೇ ಇಲ್ಲದಂತಾಗಿದೆ. ಕಾರಣ ಈಗ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಮೀಸಲಾತಿ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗದವರಿಗೆ ಶೇಕಡ 10ರಷ್ಟು (ಇಡಬ್ಲ್ಯುಎಸ್) ಮೀಸಲಾತಿಯನ್ನು ನೀಡಲು ಮುಂದಾಗಿದೆ. ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯವೂ ಸೇರಿದಂತೆ ಎಲ್ಲಾ ರೀತಿಯ ಸಮುದಾಯದವರು ಇದರ ಲಾಭ ಪಡೆಯುತ್ತಾರೆ.

ಈ ಶೇ. 10ರಷ್ಟು ಮೀಸಲಾತಿಯಲ್ಲಿ ಯಾವುದೇ ಕಾರಣಕ್ಕೂ ಒಂದು, ಎರಡು, ಸಮುದಾಯದವರಿಗೆ ವರ್ಗಾಯಿಸುವಂತಿಲ್ಲ. ಆದರೆ ನಮ್ಮ ರಾಜ್ಯ ಸರ್ಕಾರ ನಿನ್ನೆ ತೆಗೆದುಕೊಂಡ ನಿರ್ಣಯದಲ್ಲಿ ಶೇಕಡ 10ರಲ್ಲಿ ಶೇ.4 ರಷ್ಟನ್ನು ಲಿಂಗಾಯತ-ಪಂಚಮಸಾಲಿ ಸಮುದಾಯಕ್ಕೂ ಮತ್ತು ಶೇ.3 ರಷ್ಟನ್ನು ಒಕ್ಕಲಿಗ ಸಮುದಾಯಕ್ಕೆ ವರ್ಗಾವಣೆ ಮಾಡಿದೆ. ಆದರೆ ಇದು ಕಾನೂನು ಪ್ರಕಾರ ಅಸಾಧ್ಯ. ಈ ವಿಚಾರ ನಮ್ಮ ಕಾನೂನು ಸಚಿವರಿಗೆ ತಿಳಿದಿರಬೇಕಾಗಿತ್ತು.

ಪ್ರವರ್ಗ 3ಎನಲ್ಲಿದ್ದ ಒಕ್ಕಲಿಗ ಸಮುದಾಯವನ್ನು 2ಸಿಗೆ ಮತ್ತು ಪ್ರವರ್ಗ 3ಬಿಯಲ್ಲಿದ್ದ ಪಂಚಮಸಾಲಿ ಮತ್ತು ವೀರಶೈವ ಲಿಂಗಾಯತರನ್ನು 2ಡಿಗೆ ಬದಲಾವಣೆ ಮಾಡಿರುವುದನ್ನು ಬಿಟ್ಟರೆ ಬೇರೇನು ಮಾಡಿಲ್ಲ. ಇದು ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ. ಕೆಲವು ಮಾಧ್ಯಮಗಳು ಹೇಳಿರುವಂತೆ ಎರಡು ಪ್ರಬಲ ಸಮುದಾಯಕ್ಕೆ "ಮೀಸಲಾತಿ ಬಂಪರ್" ಎಂದು ಹೇಳಿವೆ. ಆದರೆ ಇದು ಸತ್ಯಕ್ಕೆ ದೂರವಾದುದ್ದು. ರಾಜ್ಯ ಸರ್ಕಾರದ ಹೊಸ ಮೀಸಲಾತಿಯಲ್ಲಿ ಒಕ್ಕಲಿಗರು ಮೊದಲಿದ್ದ ಶೇ. 4ರಲ್ಲೇ ಮುಂದು ವರೆಯುವುದರಿಂದ ತೀವ್ರ ಅನ್ಯಾಯವಾದಂತಾಗಿದೆ. ಈ ಬಗ್ಗೆ ಹೆಚ್ಚಿನ ಚರ್ಚೆಯಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ಕೃಷಿಕರ ಡಿಜಿಟಲೀಕರಣ ಸ್ವಾಗತಾರ್ಹ

ಮಾನ್ಯರೇ,

ರೈತರನ್ನು ಡಿಜಿಟಲೀಕರಣಗೊಳಿಸುವತ್ತ ರಾಜ್ಯದ ಕೃಷಿ ಇಲಾಖೆ ದಿಟ್ಟ ಹೆಜ್ಜೆ ಇಟ್ಟಿದ್ದು ಒಳ್ಳೆ ಬೆಳವಣಿಗೆಯಾಗಿದೆ. ರೈತರು ಸಂಪೂರ್ಣ ಡಿಜಿಟಲೀಕರಣ ಗೊಳ್ಳುತ್ತಿರುವುದು ದೇಶದಲ್ಲಿಯೇ ಮೊದಲು. ಮುಂದಿನ ವರ್ಷದ ಅಂತ್ಯದೊಳಗೆ ರೈತರು ಸಂಪೂರ್ಣ ಕಾಗದರಹಿತ ಹಾಗೂ ಪಾರದರ್ಶಕ ರೀತಿಯಲ್ಲಿ ಖರೀದಿ ಮತ್ತು ವಿತಾರಣಾ ಪ್ರಕ್ರಿಯೆ ಮಾಡುವುದನ್ನು ರಾಜ್ಯ ಸರಕಾರ ಕಡ್ಡಾಯ ಮಾಡಿದ್ದು ಸಹ ಸ್ವಾಗತಾರ್ಹ. ಈ ಡಿಜಿಟಲೀಕರಣದೊಂದಿಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅತಿ ಹೆಚ್ಚು ಯೋಜನೆಗಳ ಪ್ರಯೋಜನಗಳನ್ನು ರೈತರು ಆನ್‌ಲೈನ್‌ನಲ್ಲಿ ಪರಿಶೀಲಿಸಲು ಸಹಾಯ ಮಾಡುತ್ತದೆ. ರೈತರು ನಿರ್ದಿಷ್ಟ ರೈತ ಸಂಪರ್ಕ ಕೇಂದ್ರದಿಂದ ಬೀಜಗಳು ಅಥವಾ ರಸಗೊಬ್ಬರಗಳನ್ನು ಖರೀದಿಸಿದರೆ, ಈ ಉತ್ಪನ್ನಗಳಿಗೆ ಕ್ಯೂಆರ್ ಕೋಡ್ ಇರುತ್ತದೆ.

ಸ್ಕ್ಯಾನಿಂಗ್ ಮೂಲಕ, ಯಾವ ರೈತರು ಯಾವ ಮಾರಾಟಗಾರರಿಂದ ಖರೀದಿಸಿದ್ದಾರೆ ಮತ್ತು ಖರೀದಿದಾರರ ವಿವರಗಳನ್ನು ಇದು ಸ್ಪಷ್ಟಪಡಿಸುವದರಿಂದ ಯಾವುದೇ ರೀತಿಯ ಗೊಂದಲ ಸೃಜಿಸುವುದಿಲ್ಲ ಹಾಗೂ ಅಕಸ್ಮಾತ್ ವಿವಾದಗಳು ಸೃಷ್ಟಿಯಾದ ಸಂದರ್ಭದಲ್ಲಿ ಡಿಜಿಟಲೀಕರಣ ಅವುಗಳನ್ನು ನಿವಾರಣೆ ಮಾಡಲು ಸಹಾಯ ಮಾಡುತ್ತದೆ.

– ವಿಜಯಕುಮಾರ್ ಎಚ್.ಕೆ., ರಾಯಚೂರು




ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಮೊ : 94482 08746 / 97421 79000

ಚಿಂತನೆ

ಮಾನವೀಯತೆ ನೆಲೆಗಟ್ಟಿನ ಮೌಲ್ಯವೆಷ್ಟು?



ಮಾನವೀಯತೆ ಎಂಬುದು ಸದಾ ಕಾಲಕ್ಕೂ ಹಸಿರಾಗಿರುವಂತಹುದು. ಆದರೆ ಇತ್ತೀಚೆಗೆ ಇದು ಅಂತರ್ಯಕ್ಕಿಂತ ಬಾಹ್ಯ ಸ್ವರೂಪ ಅಥವಾ ಪ್ರಚಾರ ಪಡೆದುಕೊಳ್ಳುತ್ತಿರುವುದು ವಿಷಾದನೀಯ ಸಂಗತಿ ಎನಿಸುತ್ತದೆ. ನಾವು ಕಳೆದ ಕೋವಿಡ್ ಸಮಯದಲ್ಲಿ ಇದನ್ನು ಗಮನಿಸಿದ್ದೇವೆ. ಕೋವಿಡ್ ಸಮಯದಲ್ಲಿ ಲಾಕ್‌ಡೌನ್ ಆಗಿದ್ದಾಗ ಬಡಜನತೆ, ಅದೂ ಫುಟ್‌ಪಾತಿನಲ್ಲಿ ವಾಸಿಸುತ್ತಿದ್ದವರು ಬಹಳ ತೊಂದರೆಗೆ ಸಿಲುಕಿದರು. ಆಸ್ಪತ್ರೆಗಳಲ್ಲಿ ಒಳರೋಗಿಗಳಾಗಿ ಸೇರಿದವರನ್ನು ನೋಡಿಕೊಳ್ಳಲು ಬಂದ ಅತೀ ಬಡವರು, ಆಹಾರ ಸಿಗದೆ ಚಡಪಡಿಸಿದರು. ತುತ್ತು ಅನ್ನಕ್ಕಾಗಿ ಪಡಬಾರದ ಕಷ್ಟಪಟ್ಟರು. ಆ ಸಮಯದಲ್ಲಿ ಹಲವು ಸಂಘ ಸಂಸ್ಥೆಗಳು ಇಂತಹವರಿಗಾಗಿ ಪ್ರತಿದಿನ ಆಹಾರ ಸರಬರಾಜು ಮಾಡಿದವು. ತಾವೇ ಒಂದು ಕಡೆ ಆಹಾರ ತಯಾರಿಸಿ ಇಂತಹ ಬಡವರು ಇದ್ದಲ್ಲಿಗೆ ತೆರಳಿ ಆಹಾರ ನೀಡಿ ಮಾನವೀಯತೆ ಮೆರೆದರು. ಅವರಲ್ಲಿ ಬಹುಪಾಲು ಸಂಸ್ಥೆಗಳು ಯಾವುದೇ ಪ್ರಯೋಜನ, ಪ್ರಚಾರ ಬಯಸದೇ ಈ ಕೆಲಸ ಮಾಡಿದವು. ಇದಕ್ಕೆ ಅವರು ನೀಡಿದ ಕಾರಣ ಮಾನವೀಯತೆಯದ್ದೇ ಆಗಿತ್ತು. ಅದನ್ನು ಅವರು ತಮ್ಮ ಸಾಮಾಜಿಕ ಕರ್ತವ್ಯ ಎಂದು ಭಾವಿಸಿದರು. ಇನ್ನಷ್ಟು ಜನ ಹಾಗೂ ಸಂಘಸಂಸ್ಥೆಗಳು ತಾವು ಮಾಡಿದ ಕೆಲಸಕ್ಕೆ ಅತಿಯಾದ ಪ್ರಚಾರ ಬಯಸಿದವು. ಒಂದಷ್ಟು ಜನರನ್ನು ಸಾಲಿನಲ್ಲಿ ನಿಲ್ಲಿಸಿ, ಅವರಿಗೆ ಆಹಾರ ನೀಡುತ್ತಿರುವ ಬಗ್ಗೆ ಫೋಟೋ ತೆಗೆಸಿಕೊಂಡು ಪತ್ರಿಕೆಗಳಲ್ಲಿ ಪ್ರಚಾರವಾಗುವಂತೆ ನೋಡಿಕೊಂಡರು. ಅವರಿಗೆ ಬಡಜನರಿಗೆ ಆಹಾರ ನೀಡುವುದಕ್ಕಿಂತ ತಾವು ಇದರಲ್ಲಿ ಪ್ರಚಾರ ತೆಗೆದುಕೊಳ್ಳಬೇಕು ಎಂದು ಬಯಕೆಯೇ ಜಾಸ್ತಿ ಇತ್ತು. ಎಲ್ಲಿ ತಮ್ಮ ಫೋಟೋಗಳು ಪತ್ರಿಕೆಗಳಲ್ಲಿ ಬರುವುದಿಲ್ಲವೋ ಎಂಬ ಅನುಮಾನದಿಂದ ಫೋಟೋ ಪ್ರತಿಗಳನ್ನು ಮಾಡಿಸಿಕೊಂಡು ಪತ್ರಿಕಾ ಕಚೇರಿಗಳಿಗೆ ಅಲೆದು, ಸಂಪಾದಕರನ್ನು ಪೀಡಿಸಿ, ತಮ್ಮ ಫೋಟೋ ಪತ್ರಿಕೆಯಲ್ಲಿ ಬರುವಂತೆ ಮಾಡಿದರು. ಇವೆರಡನ್ನೂ ನಾವು ಅಂದು ಕಂಡಿದ್ದೇವೆ. ಅಂದರೆ ಬಡವರಿಗೆ ಸಹಾಯ ಮಾಡುವುದು ಎಂದರೆ ಪ್ರಚಾರಕ್ಕಾಗಿ ಎನ್ನುವಂತೆ ಕೆಲವರು ನಡೆದುಕೊಂಡರು.

ಇಂದು ರಾಜಕೀಯದಲ್ಲಿ ಉನ್ನತ ಹುದ್ದೆಗೆ ಏರಬೇಕೆಂಬ ಬಯಕೆಯಿಂದ ತಮ್ಮ ಹುಟ್ಟುಹಬ್ಬದ ಸಮಯದಲ್ಲಿ ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹಿರಾತು ನೀಡುವುದು, ಹುಟ್ಟುಹಬ್ಬದಂದು ಆಸ್ಪತ್ರೆಗಳಿಗೆ ತೆರಳಿ ಹಣ್ಣುಹಂಪಲು ನೀಡುವುದು ಹಾಗೂ ಅದು ಪತ್ರಿಕೆಯಲ್ಲಿ ಪ್ರಚಾರಕ್ಕೆ ಬರುವಂತೆ ಮಾಡುವುದನ್ನು ನಾವು ಕಾಣುತ್ತೇವೆ. ಪಕ್ಕದ ಮನೆಯವರಿಗೇ ಪರಿಚಯವಿಲ್ಲದವರಿಗೂ ಸ್ನೇಹಬಳಗ ಹುಟ್ಟಿಕೊಂಡಿರುತ್ತದೆ. ಅವರ ಹೆಸರಿನಲ್ಲಿ ಜಾಹಿರಾತು ಹಾಕಿಸಲಾಗುತ್ತದೆ. ಒಂದಷ್ಟು ಸ್ಥಳಗಳಲ್ಲಿ ದೊಡ್ಡದಾದ ಫ್ಲೆಕ್ಸ್‌ಗಳನ್ನು ಹಾಕಿ ತಾವು ಜನನಾಯಕರೆಂದು ಬಿಂಬಿಸಿಕೊಳ್ಳುವುದು ನಡೆಯುತ್ತದೆ. ಇದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಇವರು ಇಷ್ಟೊಂದು ಜನಪ್ರಿಯರೇ? ಜಾಹಿರಾತಿನಲ್ಲಿ ಇವರಿಗೆ ಶುಭ ಕೋರಿದ ನೂರಾರು ಜನರ ಫೋಟೋ ಕಂಡಾಗ, ಇಷ್ಟೊಂದು ಜನರ ಹಿತೈಷಿ ಇವರೇ? ಎಂಬ ಅನುಮಾನ ಮೂಡುತ್ತದೆ. ಅವರ ಹೆಸರಿನಲ್ಲಿ ಅಂದು ಅನಾಥಾಲಯ/ವೃದ್ಧಾಶ್ರಮಗಳಲ್ಲಿ ಊಟ ಹಾಕಿಸಲಾಗುತ್ತದೆ, ಆಸ್ಪತ್ರೆಗಳಿಗೆ ತೆರಳಿ ರೋಗಿಗಳಿಗೆ ಹಣ್ಣು ನೀಡಲಾಗುತ್ತದೆ. ಆದರೆ ಮರುದಿನ ಇವರ ಯಾವುದೂ ಸುದ್ಧಿ ಇರುವುದಿಲ್ಲ. ಬಡವರಿಗೆ, ರೋಗಿಗಳಿಗೆ ಒಂದು ದಿನದ ಊಟ ಹಾಕುವುದು, ಹಣ್ಣು ನೀಡುವುದು ನಿಜವಾಗಿಯೂ ಜನಸೇವೆಯೇ? ಮರುದಿನದಿಂದ ಇಂತಹ ರೋಗಿಗಳನ್ನು ಯಾರೂ ಕೇಳುವುದಿಲ್ಲವಲ್ಲಾ, ಇದು ಸರಿಯೇ? ಎಂಬ ಪ್ರಶ್ನೆ ಮೂಡುತ್ತದೆ. ಅಂತರ್ಯ ಕಂಡಾಗ ಇದೆಲ್ಲಾ ಪ್ರಚಾರಕ್ಕಾಗಿ ಎಂಬುದು ದೃಢವಾಗುತ್ತದೆ. ಇಲ್ಲಿ ಮಾನವೀಯತೆ ಕೇವಲ ತೋರ್ಪಡಿಕೆಗೆ, ಇಂತಹ ಸುದ್ಧಿ ಪತ್ರಿಕೆಗಳಲ್ಲಿ ಬಂದರೆ ಮುಂದೆ ತನ್ನ ರಾಜಕೀಯ ಭವಿಷ್ಯ ಉನ್ನತವಾಗಬಹುದು ಎಂಬ ಹುನ್ನಾರ ಇರುವಂತೆ ಕಂಡುಬರುತ್ತದೆ. ಮಾಡುವುದಾದರೆ ಯಾವುದೇ ಪ್ರಚಾರವಿಲ್ಲದೆ ಜನಸೇವೆ ಮಾಡಬೇಕು. ದುರ್ಬಲ ವರ್ಗದವರಿಗೆ ಬಿಟ್ಟಿ ಆಹಾರ ನೀಡುವುದಕ್ಕಿಂತ ಅವರು ಸ್ವಾವಲಂಬಿಗಳಾಗಿ ಜೀವನ ಮಾಡಲು ಅನುಕೂಲವಾಗುವಂತಹ ಕೆಲಸಗಳನ್ನು ಸೃಜಿಸಿ ಅವರು ನೆಮ್ಮದಿಯಿಂದ ಜೀವನ ಮಾಡುವಂತೆ ಮಾಡಿದರೆ, ಅದು ಮಾನವೀಯತೆ ಎನಿಸಿಕೊಳ್ಳುತ್ತದೆ.

ದೇವಸ್ಥಾನಗಳಿಗೆ ಟ್ಯೂಬ್‌ಲೈಟ್ ನೀಡಿ ಅದರ ಮೇಲೆ ತನ್ನ ಹಾಗೂ ಮನೆಯವರ ಹೆಸರು ಬರೆಸಿ, ಆ ದೀಪ ಬೆಳಗಿದರೂ ಕತ್ತಲಾಗುವಂತೆ ಮಾಡುವುದನ್ನು ಕಂಡಾಗ ಬೇಸರ ಬರುತ್ತದೆ. ಜನಸೇವೆಯೇ ಮುಖ್ಯವಾದರೆ ದೀಪ ನೀಡಿ ಸುಮ್ಮನಾಗಬೇಕು, ಆಗ ಸಹಜವಾಗಿ ಅದು ಹೊತ್ತಿಕೊಂಡಾಗ ಬೆಳಕು ಮೂಡೇಮೂಡುತ್ತದೆ. ಮಾನವೀಯತೆ ಎಂದರೆ ಇದೇ ಅಲ್ಲವೇ? ಆ ದೇವರ ಮುಂದೆಯೂ ನಮ್ಮ ಪ್ರಚಾರದ ಗೀಳು ಕಂಡುಬರುತ್ತದೆ. ನಮ್ಮ ಜನಪ್ರತಿನಿಧಿಗಳು ತಮಗೆ ಸರ್ಕಾರ ನೀಡುವ ನಿಧಿಯಿಂದ ಕೈಗೊಳ್ಳುವ ಕಾಮಗಾರಿಯ ಸ್ಥಳದಲ್ಲಿ ತಮ್ಮ ದೊಡ್ಡದಾದ ಚಿತ್ರಗಳನ್ನು ಹಾಕಿಸಿಕೊಳ್ಳುವುದೂ ಇದೇ ಜಾಯಮಾನಕ್ಕೆ ಸೇರಿದ್ದು. ಅದೇನು ಅವರು ಸಂಪಾದಿಸಿ ನೀಡಿದ ಹಣವಲ್ಲ. ಅದು ಸರ್ಕಾರದ ಹಣ, ಅಲ್ಲಿ ಅವರ ಭಾವಚಿತ್ರ ಹಾಕುವುದು ಎಷ್ಟು ಸರಿ? ಎನಿಸುತ್ತದೆ, ಅಲ್ಲವೇ?

> ದೇವಸ್ಥಾನಗಳಿಗೆ ಟ್ಯೂಬ್‌ಲೈಟ್ ನೀಡಿ ಅದರ ಮೇಲೆ ತನ್ನ ಹಾಗೂ ಮನೆಯವರ ಹೆಸರು ಬರೆಸಿ, ಆ ದೀಪ ಬೆಳಗಿದರೂ ಕತ್ತಲಾಗುವಂತೆ ಮಾಡುವುದನ್ನು ಕಂಡಾಗ ಬೇಸರ ಬರುತ್ತದೆ. ಜನಸೇವೆಯೇ ಮುಖ್ಯವಾದರೆ ದೀಪ ನೀಡಿ ಸುಮ್ಮನಾಗಬೇಕು, ಆಗ ಸಹಜವಾಗಿ ಅದು ಹೊತ್ತಿಕೊಂಡಾಗ ಬೆಳಕು ಮೂಡೇಮೂಡುತ್ತದೆ. ಮಾನವೀಯತೆ ಎಂದರೆ ಇದೇ ಅಲ್ಲವೇ? ಆ ದೇವರ ಮುಂದೆಯೂ ನಮ್ಮ ಪ್ರಚಾರದ ಗೀಳು ಕಂಡುಬರುತ್ತದೆ. ನಮ್ಮ ಜನಪ್ರತಿನಿಧಿಗಳು ತಮಗೆ ಸರ್ಕಾರ ನೀಡುವ ನಿಧಿಯಿಂದ ಕೈಗೊಳ್ಳುವ ಕಾಮಗಾರಿಯ ಸ್ಥಳದಲ್ಲಿ ತಮ್ಮ ದೊಡ್ಡದಾದ ಚಿತ್ರಗಳನ್ನು ಹಾಕಿಸಿ ಕೊಳ್ಳುವುದೂ ಇದೇ ಜಾಯಮಾನಕ್ಕೆ ಸೇರಿದ್ದು

ಈ ಸ್ವಭಾವ ಇಂದು ಮನೆಮನೆಗಳಲ್ಲೂ ಕಂಡುಬರುವಂತಾಗಿದೆ. ಮಕ್ಕಳು ವಯಸ್ಸಾದ ತಂದೆ ತಾಯಿಗಳನ್ನು ನೋಡಿಕೊಳ್ಳುವುದು ಅವರ ಕರ್ತವ್ಯವೇ ವಿನಃ, ಅದು ಪ್ರಚಾರದ ಸರಕಲ್ಲ. ಕೆಲವೊಂದು ಪ್ರಸಂಗಗಳಲ್ಲಿ ತನಗೆ ಮನಸ್ಸಿಲ್ಲದಿದ್ದರೂ, ಹೆಂಡತಿ ಮಕ್ಕಳ ಮುಲಾಜಿಗೆ ಒಳಗಾಗಿ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸುವ ಮಕ್ಕಳು, ಅವರನ್ನು ಮನೆಯಲ್ಲಿ ಉಳಿಸಿಕೊಳ್ಳುವ ಘಟ್ಟಿತನವನ್ನೇ ತೋರುವುದಿಲ್ಲ. ಮಕ್ಕಳು ಹೇಗಿರಬೇಕು? ಎಂಬುದಕ್ಕೆ ಒಂದು ಪ್ರಸಂಗವನ್ನು ಉದಾಹರಿಸಬಹುದು.

ಒಬ್ಬ ವ್ಯಕ್ತಿಗೆ ತನ್ನ ವೃದ್ಧ ತಾಯಿಯ ಬಗ್ಗೆ ಬಹಳ ಅಭಿಮಾನ. ಆದರೆ ಮಡದಿ ಮಕ್ಕಳು ಅವರನ್ನು ಇಷ್ಟಪಡುತ್ತಿರಲಿಲ್ಲ. ತಾಯಿ ಅನಾರೋಗ್ಯಕ್ಕೆ ಒಳಗಾಗಿದ್ದಳು. ಆಕೆಗೆ ಮಲಮೂತ್ರ ವಿಸರ್ಜನೆಯ ಬಗ್ಗೆಯೂ ನಿಯಂತ್ರಣವಿರಲಿಲ್ಲ. ಇದು ಹೆಂಡತಿಯ ಬೇಸರಕ್ಕೆ ಕಾರಣ. ಮಗ ತಾಯಿತಂದೆಗೆ ಹೇಳುತ್ತಿದ್ದ, ನನ್ನ ಸ್ನೇಹಿತರು ಬಂದಾಗ ಅಜ್ಜಿಯನ್ನು ಹೊರಗೆ ಬಿಡಬೇಡಿ ಎಂದು. ಮಗಳು ಅಜ್ಜಿಯದ್ದು ಗಬ್ಬು ನಾತ, ವಾಕರಿಕೆ ಬರುತ್ತದೆ ಎಂದು. ಇವರೆಲ್ಲರ ವಾದ ಆ ತಾಯಿಯನ್ನು ಮನೆಯಲ್ಲಿಟ್ಟುಕೊಳ್ಳದೇ ವೃದ್ಧಾಶ್ರಮಕ್ಕೆ ಸೇರಿಸಬೇಕು ಎಂಬುದಾಗಿತ್ತು. ತಂದೆ ಇದೆಲ್ಲವನ್ನೂ ಕೇಳಿಸಿಕೊಳ್ಳುತ್ತಾ, ಸಧ್ಯದಲ್ಲೇ ನನಗೆ ನಿವೃತ್ತಿಯಾಗುತ್ತದೆ. ನಂತರ ವೃದ್ಧಾಶ್ರಮಕ್ಕೆ ಸೇರಿಸುತ್ತೇನೆ ಎನ್ನುತ್ತಿದ್ದ. ನಿವೃತ್ತಿಯ ದಿನವೂ ಬಂದಿತು. ಮಡದಿ ಮಕ್ಕಳು ಆ ತಾಯಿಯನ್ನು ನಾಳೆಯೇ ವೃದ್ಧಾಶ್ರಮಕ್ಕೆ ಸೇರಿಸಬಿಡಬೇಕೆಂದು ಆಗ್ರಹಿಸಿದ್ದರು. ಅದರಂತೆ ನಿವೃತ್ತಿಯ ಮರುದಿನ ಅಮ್ಮನನ್ನು ಇಂದು ವೃದ್ಧಾಶ್ರಮಕ್ಕೆ ಸೇರಿಸುತ್ತೇನೆ ಎಂದು ಹೇಳಿದ. ಮನೆಯವರೆಲ್ಲರಿಗೂ ಸಂತೋಷ. ವಿಷಯ ತಾಯಿಯ ಕಿವಿಗೂ ಬಿದ್ದಿತು. ಆದರೆ ಆಕೆ ಅಸಹಾಯಕಿ. ಆ ವ್ಯಕ್ತಿ ಎಲ್ಲರನ್ನು ಕಾರಿನಲ್ಲಿ ಹೋಗಲು ಕರೆದ. ತಾನೇ ವಾಹನ ಚಾಲನೆ ಮಾಡುತ್ತೇನೆ ಎಂದ. ಎಲ್ಲರೂ ಕಾರಿನಲ್ಲಿ ಕುಳಿತರು. ಕಾರು ಒಂದಷ್ಟು ಸಮಯ ಚಲಿಸಿದ ನಂತರ ಒಂದು ಹೆಂಚಿನ ಮನೆಯ ಮುಂದೆ ನಿಂತಿತು. ಆ ಮನೆಯೊಳಗಿಂದ ಅವನ ಒಬ್ಬ ಗೆಳೆಯ ಬಂದು ಮನೆಯ ಕೀಗಳನ್ನು ನೀಡಿದ. ತಾಯಿಯನ್ನು ಕೆಳಗಿಳಿಸಿದ. ಹೆಂಡತಿ ಮಕ್ಕಳು ಇದು ವೃದ್ಧಾಶ್ರಮದಂತೆ ಇಲ್ಲವಲ್ಲಾ ಎಂದುಕೊಂಡರು. ಆ ವ್ಯಕ್ತಿ ತಾಯಿಯನ್ನು ಕರೆದುಕೊಂಡು ಒಳಗೆ ಬಂದ. ಇದೇನಿದು, ಇಲ್ಲಿ ಬೇರೆ ಯಾರೂ ಇಲ್ಲ, ಅತ್ತೆಯನ್ನು ನೋಡಿಕೊಳ್ಳುವವರು ಯಾರು? ಎಂದು ಹೆಂಡತಿ ಪ್ರಶ್ನಿಸಿದಳು. ಅದಕ್ಕೆ ಆ ವ್ಯಕ್ತಿ ಅವಳ ಮಗ ನಾನು ಜೀವಂತ ಇದ್ದೇನಲ್ಲಾ, ನಾನು ನೋಡಿಕೊಳ್ಳುತ್ತೇನೆ ಎಂದ. ತಾನು ಇನ್ನು ತಾಯಿಯೊಡನೆ ಇನ್ನು ಮುಂದೆ ಇದೇ ಮನೆಯಲ್ಲಿ ಇರುತ್ತೇನೆ ಎಂದ. ಆಗ ಹೆಂಡತಿ ಹಾಗಾದರೆ ನಮ್ಮ ಗತಿ? ಎಂದು ಪ್ರಶ್ನಿಸಿದಳು. ಆ ಮನೆಗೆ ಬೇಕಾದ ಖರ್ಚುವೆಚ್ಚ ನಾನೇ ಕೊಡುತ್ತೇನೆ, ಭಯಪಡುವ ಅಗತ್ಯವಿಲ್ಲ ಎಂದ. ಆ ಮನೆಯಲ್ಲಿ ನೀವಿಲ್ಲದಿದ್ದರೆ ಭಯವಾಗುತ್ತದೆ ಎಂದಾಗ ಆಳೆತ್ತರಕ್ಕೆ ಬೆಳೆದ ಮಗನಿದ್ದಾನಲ್ಲಾ ಎಂದ. ಆಗ ಅವರೆಲ್ಲರಿಗೂ ಆ ವ್ಯಕ್ತಿ ಇಲ್ಲದೆ ತಮ್ಮ ಜೀವನ ಕಷ್ಟ ಎನಿಸಿತು. ಆ ವೃದ್ಧ ತಾಯಿಯೂ ಮಗನ ನಡವಳಿಕೆ ಕಂಡು ಮೂಕವಿಸ್ಮಿತಳಾಗಿದ್ದಳು. ಅವರ ಮಗ ಇದನ್ನು ನಾನ್‌ಸೆನ್ಸ್ ಎಂದ. ಅದಕ್ಕೆ ತಂದೆ ನಿನ್ನ ಸ್ನೇಹಿತರು ಬಂದಾಗ ಅಮ್ಮನಿದ್ದರೆ ನಾನ್‌ಸೆನ್ಸ್ ಎಂದಿದ್ದೆಯಲ್ಲಾ ಎಂದು ಹೇಳಿದ. ನಾನು ಇನ್ನು ಇಲ್ಲಿ ಅಮ್ಮನೊಡನಿ ರುತ್ತೇನೆ, ನೀವಿನ್ನು ಹೋಗಬಹುದು ಎಂದ. ಆಗ ಹೆಂಡತಿ ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಯಿತು. ನಾವು ತಪ್ಪು ಮಾಡಿದ್ದೇವೆ ನಮ್ಮನ್ನು ಕ್ಷಮಿಸಿ, ಇನ್ನು ನಿಮ್ಮ ತಾಯಿಯನ್ನು ನಾವೆಲ್ಲಾ ನೋಡಿಕೊಳ್ಳುತ್ತೇವೆ ಎಂದರು. ಇದು ಮಗ ತೆಗೆದುಕೊಂಡ ದೃಢನಿರ್ಧಾರದ ಫಲ.

ಇಂತಹುದೇ ಮತ್ತೊಂದು ಕಥೆಯಿದೆ. ಒಬ್ಬರು ಸ್ವಲ್ಪ ಶ್ರೀಮಂತ ಎನ್ನಬಹುದಾದ ವ್ಯಕ್ತಿಯನ್ನು ಅವರ ಮಕ್ಕಳು ಅನಾಥಾಶ್ರಮಕ್ಕೆ ಸೇರಿಸಿದ್ದರು. ಆರಂಭದಲ್ಲಿ ಮಗ, ಮಗಳು ದೂರವಾಣಿಯಲ್ಲಿ ಕರೆಮಾಡಿ ಮಾತನಾಡುತ್ತಿದ್ದರು. ಕ್ರಮೇಣ ಅದು ಕಡಿಮೆಯಾಯಿತು. ಆದರೆ ಅನಾಥಾಲಯಕ್ಕೆ ದುಡ್ಡು ಮಾತ್ರ ಸರಿಯಾಗಿ ಕಳುಹಿಸುತ್ತಿದ್ದರು. ಇವರಿಗೆ ಆಶ್ರಮದ ಊಟ ಮಾಡಿ ಬೇಸರ ತರಿಸಿತ್ತು. ಒಂದು ದಿನ ಅವರಿಗೆ ಹೊರಗೆ ಹೋಟೆಲ್‌ನಲ್ಲಿ ತಿಂಡಿ ತಿನ್ನಬೇಕೆನಿಸಿತು. ಆದರೆ ಆ ಆಶ್ರಮಕ್ಕೆ ಒಬ್ಬ ಬಿಗಿಯಾದ ಕಾವಲುಗಾರ ಇದ್ದ. ಅವನು ಯಾರನ್ನೂ ಹೊರಹೋಗಲು ಬಿಡುತ್ತಿರಲಿಲ್ಲ. ಅಂದು ಆ ಕಾವಲುಗಾರ ಕಾಣಲಿಲ್ಲ. ಇವರು ಹೊರಹೊರಟರು. ಹೋಟೆಲ್‌ಗೆ ಹೋಗಿ ತಮಗೆ ಬೇಕೆನಿಸಿದ್ದನ್ನೆಲ್ಲಾ ತಿಂದರು. ಆಗ ಅವರಿಗೆ ತಮ್ಮಲ್ಲಿ ಕೇವಲ ನೂರು ರೂಪಾಯಿ ಇರುವುದು ತಿಳಿಯಿತು. ಸಪ್ಲೆಯರ್‌ನನ್ನು ಬಿಲ್ಲು ಎಷ್ಟಾಯಿತು? ಎಂದು ಕೇಳಿದರು. ಆತ ನೂರೈವತ್ತು ಎಂದ. ಇವರಿಗೆ ನೆಲವೇ ಕುಸಿದಂತಾಯಿತು. ಆದರೆ ಎಷ್ಟು ಹೊತ್ತಾದರೂ ಸಪ್ಲೆಯರ್ ಬಿಲ್ಲು ತರದಿದ್ದಾಗ ಇವರು ನಡುಗುವ ಸ್ವರದಲ್ಲೇ ಬಿಲ್ ಕೊಡಿ ಎಂದು ಕೇಳಿದರು. ಆಗ ಆ ವ್ಯಕ್ತಿ ನಿಮ್ಮ ಬಿಲ್ಲು ಪಾವತಿಯಾಗಿದೆ. ಅಲ್ಲಿ ಕುಳಿತಿದ್ದಾರಲ್ಲಾ ಅವರು ಕೊಟ್ಟರು ಎಂದರು. ನೋಡಿದರೆ ಅವನು ಆಶ್ರಮದ ಕಾವಲುಗಾರ. ಆತ ಹೇಳಿದ ನನಗೆ ನಿಮ್ಮ ಮಕ್ಕಳಷ್ಟು ಕಠಿಣವಾದ ಮನಸ್ಸಿಲ್ಲ, ನಾನು ಬಹಳ ದಿನಗಳಿಂದ ನಿಮ್ಮನ್ನು ಗಮನಿಸುತ್ತಿದ್ದೆ. ನನಗೆ ನಿಮ್ಮ ಆಸೆಗಳೇನು ಎಂಬುದು ಗೊತ್ತು. ಆದರೆ ಇಡೀ ಆಶ್ರಮಕ್ಕೆ ಊಟ ಹಾಕಿಸುವಷ್ಟು ಶಕ್ತಿ ನನಗಿಲ್ಲ. ಅದಕ್ಕೆ ಇಂದು ನೀವು ಹೊರಹೋಗುವಂತೆ ಮಾಡಿ ನಿಮ್ಮ ಹಿಂದೆಯೇ ಬಂದು ನಿಮ್ಮ ಬಿಲ್ಲು ಪಾವತಿಸಿದ್ದೇನೆ ಎಂದ. ಎಂತಹ ಮಾನವೀಯತೆ ಯಲ್ಲವೇ? ಇದರಲ್ಲಿ ಕಪಟವಿಲ್ಲ, ಯಾವ ಪ್ರಚಾರದ ಗುಂಗೂ ಇಲ್ಲ. ಮಾನವೀಯತೆ ಮುಖ್ಯ ಎಂದು ಸಾರುವ ಘಟನೆ ಇದೆ.

ಇಂತಹ ಹಲವು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಘಟನೆಗಳನ್ನು ನಾವು ಕಾಣುತ್ತೇವೆ. ಹಾಗೆಯೇ 'ಇಷ್ಟು ಮಾಡಿ ಅಷ್ಟು' ಪ್ರಚಾರ ಬಯಸುವವರನ್ನೂ ಕಾಣುತ್ತೇವೆ. ಮಾನವೀಯತೆ ಮಾನವನ ಸಹಜ ಗುಣವಾಗಬೇಕು. ಒಂದು ಕೈಯಲ್ಲಿ ಮಾಡಿದ್ದು ಮತ್ತೊಂದು ಕೈಗೆ ಗೊತ್ತಾಗಬಾರದು ಎಂದು ಹಿಂದಿನವರು ಹೇಳುತ್ತಿದ್ದುದು ಇದೇ ಕಾರಣಕ್ಕಾಗಿ. ನಾವು ಮಾಡುವ ಉಪಕಾರ ವ್ಯರ್ಥವಾಗುವುದಿಲ್ಲ. ಅದರ ಫಲ ಮತ್ತೊಂದು ರೂಪದಲ್ಲಿ ನಮ್ಮ ಖಾತೆಗೆ ಜಮಾ ಆಗುತ್ತದೆ. ಅದೃಷ್ಟ ನಮ್ಮ ಹಿಂದೆ ಇರುತ್ತದೆ. ಅದು ಎಲ್ಲವನ್ನೂ ಗಮನಿಸುತ್ತದೆ. ಸತ್ಯಕ್ಕೇ ಜಯವೇ ಹೊರತು ಕಪಟತೆಗಲ್ಲ. ಹಾಗೆ ಕಂಡುಬಂದರೆ ಅದು ಕ್ಷಣಿಕ ಮಾತ್ರ ಎಂಬುದು ನಮ್ಮ ಗಮನದಲ್ಲಿರಬೇಕು.

ಮೈಸೂರಲ್ಲಿ ರಸ್ತೆ, ಚರಂಡಿ ಕಾಮಗಾರಿಗಳಿಗೆ ಗ್ರಹಣ

ಪ್ರಾರಂಭದಲ್ಲಿ ವೇಗವಾಗಿ ನಡೆಯುವ ಕಾಮಗಾರಿ, ಕ್ರಮೇಣ ಆಮೆ ವೇಗ





ಮೈಸೂರು, ಜ.1(ಎಸ್‌ಪಿಎನ್)– ಮೈಸೂರಿನ ವಿವಿಧೆಡೆ ರಸ್ತೆ, ಚರಂಡಿ ಕಾಮಗಾರಿಗಳು ಆರಂಭವಾಗಿದ್ದು, ಪ್ರಾರಂಭದಲ್ಲಿ ಚುರುಕಾಗಿ ಸಾಗುವ ಕಾಮಗಾರಿಗಳು, ಕಾಲಕ್ರಮೇಣ ಮಂದಗತಿಯಲ್ಲಿ ಸಾಗಿ, ಜನರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಇದನ್ನು ಸರಿಪಡಿಸಬೇಕು ಎಂಬ ಒತ್ತಾಯಗಳು ಕೇಳಿ ಬರುತ್ತಿದೆ.

ಮೈಸೂರು ಅಶೋಕಪುರಂನಿಂದ ರಾಮಕೃಷ್ಣನಗರ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ(ಅಶೋಕಪುರಂ ನಲ್ಲಿ) ಕಳೆದ ಒಂದೂವರೆ ತಿಂಗಳ ಹಿಂದೆ ಆರಂಭವಾದ ಚರಂಡಿ ಕಾಮಗಾರಿ, 15 ದಿನಗಳವರೆಗೆ ಚುರುಕಾಗಿ ನಡೆದು ನಂತರ ಕುಂಟುತ್ತ ಸಾಗಿದೆ.

ಈ ಚರಂಡಿ ಕಾಮಗಾರಿಗಾಗಿ ಡಾಂಬರ್ ತೆಗೆದು ಗುಂಡಿ ತೋಡಲಾಗಿದೆ. ಇದರಿಂದ ಈ ಮಾರ್ಗದ ಸವಾರರ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ. ನಗರದ ವಿವಿದೆಡೆಯೂ ಇದೇ ರೀತಿ ಪರಿಸ್ಥಿತಿ. ಹಾಗಾಗಿ ವಾಹನ ಸವಾರರ ಪ್ರಾಣದ ಜೊತೆ ಸ್ಥಳೀಯ ಆಡಳಿತ ಚೆಲ್ಲಾಟವಾಡುತ್ತಿದೆ ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಆದಿಚುಂಚನಗಿರಿ ರಸ್ತೆ: ಕುವೆಂಪು ನಗರದ ಆದಿಚುಂಚನಗಿರಿ ರಸ್ತೆಯಲ್ಲಿ ಯುಜಿಡಿ ಪೈಪ್‌ಲೈನ್ ಅಳವಡಿಸಿ, ಕಾಮಗಾರಿ ಮುಗಿದಿದೆ. ಈ ಕಾಮಗಾರಿಗಾಗಿ ತೋಡಿದ್ದ ಹಳ್ಳಕ್ಕೆ ಜಲ್ಲಿಕಲ್ಲು ಹಾಕಿ ವಾರವೇ ಕಳೆದರೂ ಇಲ್ಲಿಯವರೆಗೆ ಡಾಂಬಾರ್ ಹಾಕಲು ಅಧಿಕಾರಿಗಳು ಮನಸ್ಸು ಮಾಡಿದಂತಿಲ್ಲ. ಈ ಮಾರ್ಗದಲ್ಲಿ ವಾಹನ ಸವಾರರು, ವ್ಯಾಪಾರಸ್ಥರಿಗೆ ಆಗುತ್ತಿರುವ ತೊಂದರೆ ಕುರಿತು ಹಲವು ಬಾರಿ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ವ್ಯಾಪಾರಿ ರಮೇಶ್ 'ಮೈಸೂರು ಮಿತ್ರ'ನ ಬಳಿ ದೂರಿದರು.

ಕಳೆದ ವಾರ ಅಪೋಲೋ ಆಸ್ಪತ್ರೆ ಮುಂಭಾಗ ತೋಡಿದ್ದ ಗುಂಡಿಯನ್ನು ಮುಚ್ಚಿ ಡಾಂಬರ್ ಹಾಕಿದ್ದಾರೆ. ಆದರೆ, ಅಪೋಲೋ ಆಸ್ಪತ್ರೆಯಿಂದ ಇಎಸ್‌ಐ ಸಮುದಾಯ ಪ್ರಾಥಮಿಕ ಕೇಂದ್ರದವರೆಗೆ ಯುಜಿಡಿ ಮಾರ್ಗಕ್ಕೆ ತೋಡಿದ್ದ ಗುಂಡಿಗೆ ಜಲ್ಲಿಕಲ್ಲು ಹಾಕಿ 15 ದಿನ ಕಳೆದರೂ ಇನ್ನು ಡಾಂಬರ್ ಹಾಕಲು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಾಹುಕಾರ್ ಚೆನ್ನಯ್ಯ ರಸ್ತೆ: ಸಾಹುಕಾರ್ ಚೆನ್ನಯ್ಯ ರಸ್ತೆಯ ಮಾರುತಿ ಟೆಂಪಲ್ ಬಳಿ, ಯುಜಿಡಿ ಪೈಪ್‌ಲೈನ್ ಅಳವಡಿಸುವ ಸಂಬಂಧ, ಕಳದೊಂದು ವಾರದ ಹಿಂದೆ 500 ಮೀಟರ್ ಪೈಪ್ ಅಳವಡಿಸಲಾಗಿದೆ. ಆದರೆ, ಮಣ್ಣು ತುಂಬಿ ಸಮತಟ್ಟು ಮಾಡದೇ ಆಗೆಯೇ ಕೆಲಸ ಮುಗಿಸಿದ್ದಾರೆ ಎಂದು ಟಿ.ಕೆ. ಬಡಾವಣೆ ನಿವಾಸಿಯೊಬ್ಬರು ಪತ್ರಿಕೆಗೆ ತಿಳಿಸಿದರು.

ವಿಶ್ವ ಮೈತ್ರಿ ಬುದ್ಧ ವಿಹಾರ ಮುಂಭಾಗದ ರಸ್ತೆ: ಹಲವು ದಿನಗಳಿಂದ ವಿಶ್ವ ಮೈತ್ರಿ ಬುದ್ಧ ವಿಹಾರದ ಮುಂಭಾಗ (ನರಸಿಂಹರಾಜ) ರಸ್ತೆ ನವೀಕರಣಕ್ಕೆ ಚಾಲನೆ ನೀಡಲಾಗಿದೆ. ರಸ್ತೆ ಎರಡು ಬದಿಯಿದ್ದ ಫುಟ್‌ಪಾತ್ ಮೇಲಿನ ಕಲ್ಲು ಹಾಸುಗಳನ್ನು ಸಂಪೂರ್ಣ ಕಿತ್ತುಹಾಕಿದ್ದಾರೆ. ಕಾಂಕ್ರಿಟ್ ಬ್ಲಾಕ್ ಬಾಕ್ಸ್ ಟೈಪ್ ಚರಂಡಿ ನಿರ್ಮಾಣ ಕಾರ್ಯ ಮಂದಗತಿಯಲ್ಲಿ ಸಾಗುತ್ತಿದೆ. ಅಲ್ಲದೆ, ವಿಶ್ವಮೈತ್ರಿ ಬುದ್ಧ ವಿಹಾರದ ಮುಂಭಾಗದಿಂದ ಕೋರ್ಟ್‌ವರೆಗೆ ವಾಹನ ಸವಾರರು ಓಡಾಡುವುದು ದುಸ್ತರವಾಗಿದೆ.

ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ರಸ್ತೆ ರಿಪೇರಿ: ಯಾದವಗಿರಿ ಜಾವಾರಸ್ತೆಯ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ಕಳೆದೊಂದು ವರ್ಷಗಳಿಂದ ಮಳೆಯಿಂದಾಗಿರುವ ಗುಂಡಿಗಳಿಗೆ ಕೇವಲ ಮಣ್ಣು ಸುರಿದು ಜಿಲ್ಲಾಡಳಿತ ತಾತ್ಕಾಲಿಕ ದುರಸ್ತಿ ಮಾಡಿದೆ. ಕಳೆದು ತಿಂಗಳು ಸುರಿದ ಮಳೆ ನೀರು ಹರಿದು ಬಿದ್ದಿದ್ದ ಗುಂಡಿಗಳಿಗೆ ಮಣ್ಣು ತುಂಬಿದ್ದರಿಂದ ಇದೀಗ ಈ ರಸ್ತೆಯ ರೈಲ್ವೆ ಅಂಡರ್ ಬ್ರಿಡ್ಜ್ ಕೆಳಗೆ ಭಾರೀ ಗುಂಡಿಗಳಾಗಿರುವ ಕಾರಣ ವಾಹನ ಓಡಾಟ ದುಸ್ತರವಾಗಿದೆ ಎಂಬುದು ಇಲ್ಲಿನ ನಿವಾಸಿಗಳು ದೂರಿದ್ದಾರೆ.

ಫೆಬ್ರವರಿಯಲ್ಲಿ ನೀರವ್ ಮೋದಿ ಆಸ್ತಿ ಹರಾಜು



ಮುಂಬೈ, ಜ.1– ಕೋಟ್ಯಂತರ ರೂ. ಸಾಲ ಮಾಡಿ ದೇಶ ಬಿಟ್ಟು ಪರಾರಿಯಾಗಿರುವ ವಜ್ರ ಉದ್ಯಮಿ ನೀರವ್ ಮೋದಿ ಸಂಬಂಧಿಸಿದ ಆಸ್ತಿಯನ್ನು ಹರಾಜು ಹಾಕಲು ಸಾಲ ವಸೂಲಾತಿ ನ್ಯಾಯ ಮಂಡಳಿ–1(DRT-1) ಮುಂದಾಗಿದೆ.

ಪುಣೆಯ ಅಪಾರ್ಟ್‌ಮೆಂಟ್‌ನಲ್ಲಿರುವ 398 ಚದರ ಮೀಟರ್ ಮತ್ತು 396 ಚದರ ಮೀಟರ್ ಅಳತೆಯನ್ನು ಹೊಂದಿರುವ ಫ್ಲ್ಯಾಟ್ ಮಾರಾಟಕ್ಕೆ ಸಿದ್ಧತೆ ನಡೆದಿದೆ. ಈ ಎರಡು ಫ್ಲ್ಯಾಟ್‌ಗಳಿಗೆ ಕ್ರಮವಾಗಿ ರೂ 8.99 ಕೋಟಿ ರೂ. ಮತ್ತು ರೂ 8.93 ಕೋಟಿ ರೂ. ಮೂಲ ಬೆಲೆಯನ್ನು ನಿಗದಿಪಡಿಸಲಾಗಿದ್ದು, ಫೆಬ್ರವರಿ 3 ರಂದು ಹರಾಜು ಪ್ರಕ್ರಿಯೆ ನಡೆಯಲಿದೆ.

ಏನಿದು ಪ್ರಕರಣ: ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 13 ಸಾವಿರ ಕೋಟಿ ರೂ. ವಂಚಿಸಿದ ಆರೋಪ ನೀರವ್ ಮೋದಿ ಮೇಲಿದೆ ನೀರವ್ ಮೋದಿ ಜೊತೆ ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದ ಗೀತಾಂಜಲಿ ಜುವೆಲ್ಲರಿಯ ಮೆಹುಲ್ ಚೋಕ್ಸಿ ವಿರುದ್ಧ ಕೂಡ ಸಿಬಿಐ, ಇಡಿ ಪ್ರಕರಣ ದಾಖಲಿಸಿದೆ. ಪ್ರಕರಣ ಸಂಬಂಧ ಈಗಾಗಲೇ ಮುಂಬೈ ಸೇರಿದಂತೆ ವಿದೇಶದಲ್ಲಿರುವ ನೀರವ್ ಮೋದಿ ಆಸ್ತಿಯನ್ನು ತನಿಖಾ ಸಂಸ್ಥೆಗಳು ಮುಟ್ಟುಗೋಲು ಹಾಕಿದೆ.

ನೀರವ್ ಮೋದಿ ಲಂಡನ್‌ನಲ್ಲಿ ನೆಲೆಸಿದ್ದರೆ ಮೆಹುಲ್ ಚೋಕ್ಸಿ ಆಂಟಿಗುವಾ ಮತ್ತು ಬಾರ್ಬುಡಾದಲ್ಲಿ ನೆಲೆಸಿದ್ದಾರೆ. ಇಬ್ಬರನ್ನು ಭಾರತಕ್ಕೆ ಕರೆ ತರಲು ಕಾನೂನು ಹೋರಾಟ ನಡೆಯುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹೊಸ ವರ್ಷದಲ್ಲಿ ಮದ್ಯಪ್ರಿಯರಿಂದ ಭರ್ಜರಿ ಆದಾಯ



ಬೆಂಗಳೂರು, ಜ.1– ಹೊಸ ವರುಷ.. ಹೊಸ ಹರುಷ.. ಇಡೀ ಜಗತ್ತು 2022ರ ವರ್ಷಕ್ಕೆ ಗುಡ್‌ಬೈ ಹೇಳಿ 2023ಕ್ಕೆ ಹಾಯ್ ಹಾಯ್ ಹೇಳಿದೆ. ಅದ್ರಲ್ಲೂ ಸಿಲಿಕಾನ್ ಸಿಟಿ ನಮ್ಮ ಬೆಂಗಳೂರಿನಲ್ಲಂತೂ ಮಧ್ಯರಾತ್ರಿ 12 ಗಂಟೆ ಆಗ್ತಿದ್ದಂತೆ ನ್ಯೂ ಇಯರ್‌ಗೆ ಗ್ರ್ಯಾಂಡ್ ವೆಲ್‌ಕಂ ಸಿಕ್ಕಿದೆ. ಎಂ.ಜಿ ರಸ್ತೆ, ಬ್ರಿಗೇಡ್ ರೋಡ್, ಚರ್ಚ್ ಸ್ಟ್ರೀಟ್‌ನಲ್ಲಂತೂ ಜನಸಾಗರವೇ ಹರಿದುಬಂದಿತ್ತು.

ಹಾಡು, ಕುಣಿತ, ಮೋಜು ಮಸ್ತಿ ಮಾಡಿ, ಪಟಾಕಿ ಸಿಡಿಸಿ ಹೊಸ ವರ್ಷವನ್ನು ಬರಮಾಡಿಕೊಂಡರು. ಬಾರ್, ಪಬ್, ಕ್ಲಬ್‌ಗಳಲ್ಲಿ ಸೇರಿದ್ದ ಮದ್ಯ ಪ್ರಿಯರು ಪಾರ್ಟಿಗಳಲ್ಲಿ ಕುಡಿದು ತೂರಾಡಿ ಸಖತ್ ಎಂಜಾಯ್ ಮಾಡಿದ್ದಾರೆ. ಬಂದಿರುವ ಹೊಸ ವರ್ಷ ಹರುಷ ತರುವ ಜೊತೆಗೆ ಭರ್ಜರಿ ಆದಾಯವನ್ನೂ ತಂದುಕೊಟ್ಟಿದೆ. ಕಳೆದ 9 ದಿನಗಳಲ್ಲಿ ಅತ್ಯಧಿಕ ಮದ್ಯ ಸೇಲ್ ಆಗಿದ್ದು, ಅಬಕಾರಿ ಇಲಾಖೆಗೆ 657 ಕೋಟಿ ರೂ. ಆದಾಯ ತಂದುಕೊಟ್ಟಿದೆ.

ಡಿ.23 ರಿಂದ 31ರವರೆಗೆ 20.66 ಲಕ್ಷ ಲೀಟರ್ ಐಎಂಎಲ್ ಮದ್ಯ ಹಾಗೂ 15.04 ಲಕ್ಷ ಲೀಟರ್ ಬಿಯರ್ ಮಾರಾಟವಾಗಿದೆ. ಇದರಿಂದ ಡಿಸೆಂಬರ್ 31ರ ಒಂದೇ ದಿನ ಬರೋಬ್ಬರಿ 181 ಕೋಟಿ ರೂ. ಮದ್ಯ ಮಾರಾಟವಾಗಿದ್ದು, ಕಳೆದ 9 ದಿನಗಳಲ್ಲಿ ಅಂದ್ರೆ ಡಿ. 23 ರಿಂದ ಡಿ.31ರವರೆಗೆ 1,262 ಕೋಟಿ ಮೊತ್ತದ ಮದ್ಯ ಮಾರಾಟವಾಗಿದ್ದರಿಂದ ಅಬಕಾರಿ ಇಲಾಖೆ ಬೊಕ್ಕಸಕ್ಕೆ 657 ಕೋಟಿ ಆದಾಯ ಹರಿದುಬಂದಿದೆ.

ಭೀಕರ ಅಪಘಾತ: ಡಿಕ್ಕಿ ಹೊಡೆದು 12 ಕಿಮೀ ಎಳೆದೊಯ್ದ ಕಾರು, ಯುವತಿ ದುರ್ಮರಣ

ನವದೆಹಲಿ, ಜ.1– ಯುವತಿಯೊಬ್ಬಳ ಸ್ಕೂಟರ್ ಅಪಘಾತಕ್ಕೀಡಾಗಿದ್ದು, ಆಕೆಯನ್ನು ಕಾರು 12 ಕಿ.ಮೀವರೆಗೂ ಎಳೆದೊಯ್ದಿದ್ದು, ಪರಿಣಾಮ ಯುವತಿ ಸಾವನ್ನಪ್ಪಿದ ಘಟನೆ ದೆಹಲಿಯಲ್ಲಿ ನಡೆದಿದೆ.

ಅಮನ್ ವಿಹಾರ್ ನಿವಾಸಿ ಅಂಜಲಿ(20) ಮೃತ ಯುವತಿ. ದೆಹಲಿಯ ಸುಲ್ತಾನ್‌ಪುರಿಯಲ್ಲಿ ಇಂದು ಬೆಳಗ್ಗೆ ಹೊಸ ವರ್ಷಾಚರಣೆ ಆರಂಭವಾದ ಕೆಲವೇ ಗಂಟೆಗಳಲ್ಲಿ ಈ ಘಟನೆ ನಡೆದಿದೆ. ಅಂಜಲಿ ಚಲಿಸುತ್ತಿದ್ದ ಸ್ಕೂಟಿಯು ಕಾರಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಕಾರಿನ ಚಕ್ರಕ್ಕೆ ಆಕೆ ಸಿಕ್ಕಿ ಹಾಕಿಕೊಂಡಿದ್ದಾಳೆ. ಆದರೂ ಕಾರು 10–12 ಕಿ.ಮೀ ದೂರ ಕ್ರಮಿಸಿದೆ.

ಇದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಕರೆ ಮಾಡಿ ಕಾರೊಂದು ಶವವನ್ನು ಎಳೆದುಕೊಂಡು ಹೋಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ. ಅದಾದ ಒಂದು ಗಂಟೆಯ ನಂತರ ರಸ್ತೆಯಲ್ಲಿ ಮಹಿಳೆಯ ಶವ ಬಿದ್ದಿರುವ ಬಗ್ಗೆ ಪೊಲೀಸರಿಗೆ ಮತ್ತೊಂದು ಕರೆ ಬಂದಿದೆ. ಅದಾದ ಬಳಿಕ ಪೊಲೀಸರು ಸ್ಥಳಕ್ಕೆ ನೀಡಿ ಪರಿಶೀಲನೆ ನಡೆಸಿದ್ದು, ವಾಹನಕ್ಕಾಗಿ ಹುಡುಕಾಟ ಪ್ರಾರಂಭಿಸಿದ್ದಾರೆ.

ಈ ವೇಳೆ ನೋಂದಾಯಿತ ಕಾರಿನ ಸಂಖ್ಯೆಯ ಆಧಾರದ ಮೇಲೆ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚಿ, ಘಟನೆಗೆ ಸಂಬಂಧಿಸಿ ಮಾರುತಿ ಸುಜಕಿ ಬಲೆನೊ ಕಾರಿನಲ್ಲಿದ್ದ ಐವರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರಲ್ಲಿ ಕ್ರೆಡಿಟ್ ಕಾರ್ಡ್ ಸಂಗ್ರಹ ಏಜೆಂಟ್, ಚಾಲಕ ಹಾಗೂ ಪಡಿತರ ಅಂಗಡಿ ಮಾಲೀಕರಿದ್ದಾರೆ.

ಘಟನೆಯ ಕುರಿತು ಆರೋಪಿಗಳನ್ನು ವಿಚಾರಣೆ ನಡೆಸಿದಾಗ, ಕಾರು ಸ್ಕೂಟಿಗೆ ಡಿಕ್ಕಿಯಾಗಿದೆ ಎಂಬುದನ್ನು ತಿಳಿಸಿದ್ದಾರೆ. ಆದರೆ ಹಲವಾರು ಕಿ.ಮೀಗಳವರೆಗೂ ಕ್ರಮಿಸಿದರೂ ಕಾರಿನ ಕೆಳಗೆ ಮಹಿಳೆ ಶವ ಇದೆ ಎನ್ನವುದು ತಿಳಿದಿರಲಿಲ್ಲ ಎಂದು ವಿಚಾರಣೆ ವೇಳೆ ತಿಳಿಸಿದ್ದಾರೆ. ಅಷ್ಟೇ ಅಲ್ಲದೇ ಕಾರಿನಲ್ಲಿದ್ದ ಆರೋಪಿಗಳು ಕುಡಿದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಶ್ವಮಾನವ ದಿನಾಚರಣೆ



ಮೈಸೂರು, ಜ.1– ನಗರದ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಶ್ವಮಾನವ ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನವನ್ನು ಶ್ರದ್ಧಾಪೂರ್ವಕವಾಗಿ ಆಚರಿಸಲಾಯಿತು.

ವಿದ್ಯಾರ್ಥಿಗಳು ಕುವೆಂಪು ಅವರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಸಭಿಕರನ್ನು ರಂಜಿಸಿ, ಕುವೆಂಪುರವರ ವಿಚಾರಗೋಷ್ಠಿಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿದ್ದರು. ಶಾಲಾ ಆಡಳಿತಾಧಿಕಾರಿ ಕಾಂತಿ ನಾಯಕ್ ಅವರು ಮಾತನಾಡಿ, ಕುವೆಂಪು ಅವರ ಪ್ರಾಥಮಿಕ ಅನೌಪಚಾರಿಕ ವಿದ್ಯಾಭ್ಯಾಸದ ಬಗ್ಗೆ ಅವರು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಗ್ರಂಥಾಲಯಗಳಿಗೆ ಹೋಗಿ ಪುಸ್ತಕ ಓದುವ ಅಭ್ಯಾಸವನ್ನು ಮೈಗೂಡಿಸಿಕೊಂಡಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಒಂಬತ್ತನೆಯ ತರಗತಿ ವಿದ್ಯಾರ್ಥಿನಿ ಸುನಿಧಿ ತಾಯಿ ಶಾರದಾ ಮಾತೆಯನ್ನು ಕುರಿತು ಪ್ರಾರ್ಥನೆ ಸಲ್ಲಿಸಿದರು. ನಂತರ ವಿದ್ಯಾರ್ಥಿನಿ ಯಶಸ್ವಿನಿ ಕುವೆಂಪುರವರ ಕಿರು ಪರಿಚಯ ಮಾಡಿಕೊಟ್ಟರು. ಉಳಿದ ವಿದ್ಯಾರ್ಥಿಗಳು 'ಓ ನನ್ನ ಚೇತನ ಆಗು ನೀ ಅನಿಕೇತನ' ಎಂಬ ವಿಶ್ವಮಾನವ ಗೀತೆಯನ್ನು ಶುಶ್ರಾವ್ಯವಾಗಿ ಹಾಡಿ ವಿಶ್ವಪ್ರೇಮವನ್ನು ಮೆರೆದರು. ಶಾಲೆಯ ಪ್ರಾಧ್ಯಾಪಕರಾದ ಮಹಮದ್ ಫಾರೂಕ್, ಶಿಕ್ಷಕ ಚಿಕ್ಕಣ್ಣ, ವಿಜಯಲಕ್ಷ್ಮಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಪರಿಚಿತ ಶವಪತ್ತೆ

ಮೈಸೂರು, ಜ.1– ಮೈಸೂರಿನ ವರುಣಾ ಹೋಬಳಿಯ ಯಾಂದಳ್ಳಿ ಗ್ರಾಮದ ಹೊರವಲಯದಲ್ಲಿ ಹರಿಯುವ ಕಾಲುವೆಯಲ್ಲಿ ಸುಮಾರು 35–40 ವರ್ಷದ ಅಪರಿಚಿತ ವ್ಯಕ್ತಿ ಶವಪತ್ತೆಯಾಗಿದೆ ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 35–40 ವರ್ಷದವರಾಗಿದ್ದು, ಮುಖ ಭಾಗವನ್ನು ಜಲಚರ ಪ್ರಾಣಿಗಳು ತಿಂದಿರುವಂತೆ ಕಂಡು ಬಂದಿದ್ದು, ಒಂದು ಪಿಂಕ್ ಬಣ್ಣದ ತುಂಬು ತೋಳಿನ ಶರ್ಟ್ ಮತ್ತು, ಕಪ್ಪು ಬಣ್ಣದ ಪ್ಯಾಂಟು ಧರಿಸಿರುತ್ತಾರೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ದೂ.ಸಂ: 2520040, ಮೈಸೂರು ನಗರ ನಿಸ್ತಂತು ಕೊಠಡಿ ದೂ.ಸಂ: 0821–2444800 ಹಾಗೂ ಮೈಸೂರು ಸೌತ್ ಪೊಲೀಸ್ ಠಾಣೆಯ ದೂ.ಸಂ: 0821–2444955, 9480805045 ಸಂಪರ್ಕಿಸಿ ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಜ.1(ಪಿಎಂ)– ಮಾಜಿ ಮೇಯರ್ ನಾರಾಯಣ ಅಭಿಮಾನಿಗಳ ಟ್ರಸ್ಟ್ ವತಿಯಿಂದ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಭಾನುವಾರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪೌರಕಾರ್ಮಿಕರು ಹಾಗೂ ಶೋಷಿತ ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ ನಾರಾಯಣ ಅವರು ಹಿಂದಿನಿಂದಲೂ ಬಹಳಷ್ಟು ಹೋರಾಟ ನಡೆಸುತ್ತಿದ್ದಾರೆ. ತಳಸ್ತರದ ಪೌರ ಕಾರ್ಮಿಕರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಅವರ ಹೆಸರಿನಲ್ಲಿ ಈ ಟ್ರಸ್ಟ್ ಸ್ಥಾಪಿಸಿಕೊಂಡು ಹಲವು ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಆರ್.ರಮೇಶ್, ಉಪಾಧ್ಯಕ್ಷ ಆರ್.ದಾಸು, ಕಾರ್ಯದರ್ಶಿ ಎನ್. ಲೋಕೇಶ್, ಸಂಘಟನಾ ಕಾರ್ಯದರ್ಶಿ ವಿ.ಪರಶುರಾಮ್ ಮತ್ತಿತರರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
1) ಟೆಲಿಕಾಲರ್ – 10
2) ಡೇಟಾ ಎಂಟ್ರಿ ಆಪರೇಟರ್ – 10 (ಕಂಪ್ಯೂಟರ್ ಟೈಪಿಂಗ್ wpm 25 ಇರಬೇಕು), ಟೆಕ್ಸ್‌ಟೈಲ್ಸ್ ಹಾಗೂ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಿ ಅನುಭವವಿರುವ ಸೇಲ್ಸ್ ಗರ್ಲ್ಸ್, ಸೇಲ್ಸ್ ಮ್ಯಾನ್ ತಕ್ಷಣ ಬೇಕಾಗಿದ್ದಾರೆ. (ಅನುಭವ ಇದ್ದವರಿಗೆ ಮೊದಲ ಆದ್ಯತೆ).
Call: 9035560544

ಸುವರ್ಣ ಯಾತ್ರ
18–1–23 ಮತ್ತು 10–2–23 ಪೂರಿ ಜಗನ್ನಾಥ್, ಕೋನಾರ್ಕ್, ಭುವನೇಶ್ವರ, ಮಾ ಬಿರಾಜ್ ಶಕ್ತಿ ಪೀಠ 4 ದಿನಗಳು, 10–2–23 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ ಓಂಕಾರೇಶ್ವರ, ಮಹಾ ಕಾಳೇಶ್ವರ 4 ದಿನಗಳು, 30–1–23 ಗುಜರಾತ್ ಪ್ರವಾಸ 2 ಜ್ಯೋತಿರ್ಲಿಂಗ, ದ್ವಾರಕ, ಬೆಟ್ ದ್ವಾರಕ, ಇತರೆ. 24–2–23 ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು.
9019462508
8970949434

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ತೇಜಸ್ವಿನಿ ಟೂರಿಸ್ಟ್
20–1–23 ರಿಂದ 10 ದಿನ (16 ಸ್ಥಳ) ಶಿರಡಿ, ಪಾಂಚವಟಿ, ಗಾಣಗಾಪುರ, ಮಂತ್ರಾಲಯ (18 ಸ್ಥಳ).
5–2–23 8 ದಿನ (15 ಸ್ಥಳ) ಕನ್ಯಾಕುಮಾರಿ, ರಾಮೇಶ್ವರ, 9 ನವಗ್ರಹಗಳು, ಈಶ ಫೌಂಡೇಶನ್, ಶ್ರೀರಂಗ ಇತ್ಯಾದಿ.
26–3–23 ರಂದು 15 ಮಧ್ಯಪ್ರದೇಶ, ಗುಜರಾತ್ ಮತ್ತು ರಾಜಸ್ಥಾನ ಜ್ಯೋತಿರ್ಲಿಂಗ,
21–4–23 ರಿಂದ 24 ದಿನ 24 ಸ್ಥಳಗಳು ಕಾಶಿ, ದೆಹಲಿ, ನೇಪಾಳ, ಕುಲ್ಲುಮನಾಲಿ, ಗೋರಖಪುರ, ಅಮೃತಸರ, ನೇಮಿಷಾರಣ್ಯ, ವೈಷ್ಣೋದೇವಿ. ವಿವರಗಳಿಗೆ, ಮೈಸೂರು
9379792644

V-GUARD

10 ವರ್ಷಗಳ ವ್ಯಾರಂಟಿ
ಸರ್ವರಿಗೂ ಹೊಸ ವರ್ಷದ ಶುಭಾಶಯಗಳು 2023
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಶ್ರೀನಿವಾಸ ಕ್ಯಾಟರಿಂಗ್ ಸರ್ವಿಸ್
ಮನೆಯಲ್ಲಿ ಮಾಡಿದ ಸಂಕ್ರಾಂತಿ ಎಳ್ಳು ದೊರೆಯುತ್ತದೆ. (ಬ್ರಾಹ್ಮಣರ) ಕ್ಯಾರೀಯರ್ ಊಟ ದೊರೆಯುತ್ತದೆ.
ಹೆಸರು : ಪದ್ಮಶ್ರೀ
8138851200

ಷೇರ್ ಮಾರ್ಕೆಟ್ ಟ್ರೇಡಿಂಗ್
ಅಡ್ವಾನ್ಸ್ ಟ್ರೇಡಿಂಗ್ ಕೋರ್ಸ್
ಸ್ಟಾಕ್ ಬ್ರೇಕ್‌ಔಟ್ ಸ್ಟ್ರಾಟಜಿ, ನಿಫ್ಟಿ & ಬ್ಯಾಂಕ್ ನಿಫ್ಟಿ Options, ಸ್ವಿಂಗ್ ಟ್ರೇಡಿಂಗ್ All teach in live class training, tips also available. Daily profit 1000 - 1500. Just fee 4999/-.
Mob: 9945667806

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ರೈಲಿನಲ್ಲಿ ಕಾಶಿ ಯಾತ್ರೆ
10/04/2023. ರಿಂದ ರೈಲಿನಲ್ಲಿ 13 ದಿನಗಳ ಪ್ರವಾಸ ಸ್ಥಳಗಳು ; . ದೆಹಲಿ. ಆಗ್ರಾ ಮಥುರಾ, ಬೃಂದಾವನ, ಕಾಶಿ, ಸಾರನಾಥ್, ಅಯೋಧ್ಯಾ, ಅಲಹಾಬಾದ್, ಸೀತಾಮಡಿ, ಗಯಾ, ಬುದ್ಧಗಯಾ, ಇತ್ಯಾದಿ.. ಊಟ, ಕೊಠಡಿ, ರೈಲು ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟ್‌ಗೆ 17000/–, ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ 5000 ರೂ ಅನುದಾನ ದೊರೆಯುತ್ತದೆ ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್ಸ್ ನಜರ್ ಬಾದ್, ಮೈಸೂರು.,
9342118682 / 9449128682

ತಕ್ಷಣ ಬೇಕಾಗಿದ್ದಾರೆ
ಬ್ರಾಹ್ಮಣ ಕುಟುಂಬಕ್ಕೆ ಅಡುಗೆ ಮಾಡಲು ಬ್ರಾಹ್ಮಣ ಅಡುಗೆ ಹೆಂಗಸು ತಕ್ಷಣ ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 98801 09584
ಸ್ಥಳ: ಕುವೆಂಪುನಗರ, ಮೈಸೂರು

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಚಾರ್ಧಾಮ್ ಯಾತ್ರೆ
28/04/2023. ರಿಂದ ವಿಮಾನದಲ್ಲಿ 12 ದಿನಗಳ ಪ್ರವಾಸ, ಸ್ಥಳಗಳು ; ದೆಹಲಿ, ಹರಿದ್ವಾರ, ಋಷಿಕೇಶ ಯಮುನೋತ್ರಿ, ಗಂಗೋತ್ರಿ, ಉತ್ತರಕಾಶಿ, ರುದ್ರಪ್ರಯಾಗ, ಗೌರಿಕುಂಡ, ಕೇದಾರನಾಥ ಬದರಿನಾಥ, ಇತ್ಯಾದಿ. ಊಟ, ಕೊಠಡಿ, ವಿಮಾನ ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟ್‌ಗೆ 44000/–, ಕರ್ನಾಟಕ ಸರ್ಕಾರದಿಂದ ಚಾರ್ಧಮ್ ಯಾತ್ರೆಗೆ 20000 ರೂ ಅನುದಾನ ದೊರೆಯುತ್ತದೆ. ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್ಸ್ ನಜರ್ ಬಾದ್, ಮೈಸೂರು.
9342118682 / 9449128682

JOB VACANCY
(Company appointment) Not security Agency Security Guards, Supervisors, Secutity Officers. Place:- Mysore, Nanjangud, Gundalpet, HD Kote, Hunsur, K R Nagar, Periyapatna, Madikari. Salary: 16k to 25 k, 26 days, PF ESI, Date: 29-12-2022, Place of Interview - Siddappa Square, Vani Vilas Double Road, N R Mohalla, Lakshmipuram, Mysuru, Karnataka - 570004
8618291971 / 9739327747

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ನಿವೃತ್ತರಿಗೆ ಸುವರ್ಣ ಅವಕಾಶ
ಕೇಂದ್ರ, ರಾಜ್ಯ, ಬ್ಯಾಂಕಿಂಗ್, ಖಾಸಗಿ ನಿವೃತ್ತರಿಗೆ ಹಾಗೂ Housewives ಮತ್ತು Business ವಲಯದವರಿಗೆ ವಿಶೇಷ ಅವಕಾಶ.
Free Seminar. 3-1-2023 ಮಂಗಳವಾರ 11 am. ಹೋಟೆಲ್ ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ, ಮೈಸೂರು.
Limited Seats. ಕೂಡಲೇ ಸಂಪರ್ಕಿಸಿ:
7349052084, 9845244373, 9880115979, 9845458130

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)
BE / MBA / M.Tech / MD / MS / Ph.D ಮುಂತಾದ India / UK / Australia / Germany ಯ ವಧು–ವರರ ಮಾಹಿತಿಗಾಗಿ ಸಂಪರ್ಕಿಸಿ:
8088776211, 9880147473
ಜಯನಗರ, ಮೈಸೂರು.
Web: http://www.sapthapadhimatrimony.com

ವಿಚ್ಛು ಕಲ್ಯಾಣ ಭಾಗ್ಯ
ಎಲ್ಲಾ ಜಾತಿಯ ವಧು, ವರರಿಗಾಗಿ ಸಂಪರ್ಕಿಸಿ
1) ಮೊದಲನೆ ಮದುವೆ
2) ಎರಡನೇ ಮದುವೆ
3) Late Marriage
4) ವಿಧವೆ, ವಿಧುರರು
ಸಂಪರ್ಕಿಸಿ: ನಂ. 445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್, ಮೈಸೂರು
8722935334, 8296856534

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ – PUC / Degree (Age - 30yrs to 45 yrs) - 08 Hours Duty + Weekly off - ESI, PF ಮತ್ತು ಊಟದ ವ್ಯವಸ್ಥೆ ಇರುತ್ತದೆ.
ಸ್ಥಳ: ಭುಗತ್‌ಗಳ್ಳಿ, ಆಲನಹಳ್ಳಿ, ಬನ್ನೂರು ರಸ್ತೆ, ವಾಜಮಂಗಲ, ವರುಣ ಮತ್ತು ಸುತ್ತೂರು.
ಸಂಪರ್ಕಿಸಿ:
9739166772

ವಿಚ್ಛು ರಿಯಲ್ ಎಸ್ಟೇಟ್
ಸೈಟು / ಮನೆ ಮಾರಾಟ ಹಾಗೂ ಖರೀದಿಗೆ ಮನೆ ಭೋಗ್ಯಕ್ಕೆ / ಬಾಡಿಗೆಗೆ. ಸಂಪರ್ಕಿಸಿ:
ನಂ. 445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್, ಮೈಸೂರು–570 017
8296856534, 7349559459

ಬೇಕಾಗಿದ್ದಾರೆ
ಸಸ್ಯಾಹಾರಿ ಕುಕ್ ಮತ್ತು ಹೆಲ್ಪರ್ಸ್, ಶಿವಮೊಗ್ಗದಲ್ಲಿರುವ ದೇವಸ್ಥಾನದಲ್ಲಿ ಬಂದು ಅಲ್ಲೇ ಉಳಿದುಕೊಂಡು ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ವಸತಿ ಸೌಕರ್ಯ.
ಸಂಪರ್ಕಿಸಿ: ದೀಪಕ್
8660045084, 9620208168

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವಾಟರ್ ಲೆವೆಲ್ ಕಂಟ್ರೋಲ್‌ಗಾಗಿ

ಸಂಪರ್ಕಿಸಿ:
Mob: 8880558064

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ.: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಭಾಧೆ, ಸಾಲ ಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ), ಮೈಸೂರು.

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ ಯುವತಿಯರಿಗೆ ಗೃಹಿಣಿಯರಿಗೆ ವಿದ್ಯಾರ್ಥಿಗಳಿಗೆ ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 14,000 ದಿಂದ 20,000 ರವರೆಗೆ ಗಳಿಸಿ. ಮಾಹಿತಿಗಾಗಿ ಸಂಪರ್ಕಿಸಿ:
9972237729
9739597810

ಕೇರಳ ಕೊಳ್ಳೇಗಾಲ ಶ್ರೀ ಜ್ಯೋತಿಷ್ಯರು
ಪಂ॥ ಮೋಹನ್ ಪೊದುವಾಳ್ (ಕೇರಳ) ಮೋಡಿ ಯಲ್ಲಪ್ಪನವರ ಮಗ ವಿದ್ವಾನ್ ಜ್ಯೋತಿಷಿ ವಿಶಾರದ ಮೋಡಿ ಮಾಂತ್ರಿಕ ಪಂ॥ ಕುಮಾರ್
ಮೊ.: 9036984793
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋರ ಮೋಡಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ. ಖಾಯಂ ವಿಳಾಸ: ರಾಜ್ ಗೋಪಾಲ್ ಆಸ್ಪತ್ರೆ ಬಿಲ್ಡಿಂಗ್, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ವಿಹಾರ ಮಾರ್ಗ, ಸಿದ್ಧಾರ್ಥ ಲೇಔಟ್, ಮೈಸೂರು.

ಸೈಟು ಬೇಕಾಗಿದೆ
30x40
ಆರ್.ಎಸ್.ನಾಯ್ಡುನಗರ & ಕೆಸರೆ, 3ನೇ ಹಂತ (ದಕ್ಷಿಣ ದಿಕ್ಕು ಬಿಟ್ಟು) (ಮಾಲೀಕರು ಮಾತ್ರ ಸಂಪರ್ಕಿಸಿ)
9743509921
9945181525

SBR CONSTRUCTION
ಸ್ಕೂಲ್ ಇಂಡಸ್ಟ್ರೀಯಲ್ ಆರ್.ಸಿ.ಸಿ. ಬಿಲ್ಡಿಂಗ್ ಕಟ್ಟಿ ಕೊಡಲಾಗುವುದು.
Sq.ft. Rs. 1099 ಮಾತ್ರ
T & C Apply. Contact:
9900840025
8660223993

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಡಾ. ಗುರೂಜಿ
9448229184
7899625268

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.
9740733021 / 9535028750

HOUSE FOR SALE
#179, DTS Rao Nagar, Sathagalli, North East Corner, Ground Floor:- Parking / Commercial Shop, 1st & 2nd Floor:- Duplex - 3BHK. Opp. PU Learn College. Nearest: Arnald School, VTU College, Sathagalli Bus Depo, International Stadium.
9945614665

ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME -BASED
ecode GAS SAFE — All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಮೊದಲು ಬಂದವರಿಗೆ ಆದ್ಯತೆ — ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

ಹೋಂ ನರ್ಸಿಂಗ್ ಕೆಲಸ
ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ತರಬೇತಿ ಕಲ್ಪಿಸಿಕೊಡಲಾಗುತ್ತದೆ. ಊಟ, ವಸತಿಯೊಂದಿಗೆ ಸಂಬಳ: 12,000 – 23,000 (ಸರ್ಕಾರಿ ನೋಂದಾಯಿತ ಸಂಸ್ಥೆ) ಮೊದಲು ಬಂದವರಿಗೆ ಆದ್ಯತೆ.
7483960098
9743135666

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ನಿವೃತ್ತ ನೌಕರರಿಗೆ ಉದ್ಯೋಗವಕಾಶದ ಸೆಮಿನಾರ್
ಭಾರತದ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ನಿವೃತ್ತ ಕೇಂದ್ರ / ರಾಜ್ಯ / ಬ್ಯಾಂಕ್ / ಸ್ವಯಂ ನಿವೃತ್ತರಿಗೆ ಸೆಮಿನಾರ್ ಏರ್ಪಡಿಸಲಾಗಿದೆ. 1) ವಿದ್ಯಾರ್ಹತೆ: SSLC & above Any Degree, 2) Age above 35 years. 3) Place of Seminar :- ಮೌರ್ಯ ರೆಸಿಡೆನ್ಸಿ ಹರ್ಷ ರಸ್ತೆ, ಮೈಸೂರು. 4) ದಿನಾಂಕ: 05–01–2023. 5) ಸಮಯ ಬೆಳಗ್ಗೆ 11 ಗಂಟೆಗೆ ನಿರ್ದಿಷ್ಟ ಸಂಬಳ ಮತ್ತು ಇತರೆ ಭತ್ಯೆಗಳು ಲಭ್ಯವಿರುತ್ತದೆ. Followed by Lunch ದಾಖಲಾತಿಗಳು
9449068132 / 9845034730
9480055885

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಆಟೋಮ್ಯಾಟಿಕ್ ಆಕ್ಸಲ್ ಹತ್ತಿರ ಇರುವ ಕಂಪನಿಗೆ 48 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 12 ಗಂಟೆ ಕೆಲಸಕ್ಕೆ 16,000/– ಕೆಲಸದ ಸಮಯ– ಬೆಳಿಗ್ಗೆ 8 ರಿಂದ ಸಂಜೆ 8 ರವರೆಗೆ ಕೂಡಲೇ ಸಂಪರ್ಕಿಸಿ. ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್.ಎಸ್.
8722844236

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು – 15 ಮಂದಿ
ಸ್ಥಳ: 1) ನಜರ್‌ಬಾದ್, 2) ಸಯ್ಯಾಜಿ ರಾವ್ ರಸ್ತೆ, 3) ವಿದ್ಯಾರಣ್ಯಪುರಂ, 4) ಗದ್ದಿಗೆ ರಸ್ತೆ, 5) ಹೆಬ್ಬಾಳ್ ಸುತ್ತಮುತ್ತ.
ಹೌಸ್ ಕೀಪಿಂಗ್ (ಮಹಿಳೆಯರು)
ಸ್ಥಳ: ಕೆ.ಆರ್.ಎಸ್ ರಸ್ತೆ, ಮೇಟಗಳ್ಳಿ, ಸಂಪರ್ಕಿಸಿ:
9686422400
9242406261

ಸೈಟ್ ಮಾರಾಟಕ್ಕೆ ಇದೆ
100 x150 ಅಡಿ, ವಿ.ವಿ.ಮೊಹಲ್ಲಾ, ಜಯಲಕ್ಷ್ಮಿಪುರಂ, ಮೈಸೂರು
8050207677
9980325263

ಬೇಕಾಗಿದ್ದಾರೆ!!
ಹೆಬ್ಬಾಳಿನ ಬಸವನಗುಡಿಯಲ್ಲಿರುವ ಮೆಡಿಕಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಮೊದಲ ಆದ್ಯತೆ.
9741934470
9591098819

WANTED
Female Graduates for montessori school in bogadi.
Call :
6364227636

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ & ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Billings, Front Office Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 39000 (ESI+PF+OT) ಸೇರಿ
9353753194
9980630131

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ವಿನಾಯಕ ಟೂರಿಸ್ಟ್
ಉತ್ತರ ಭಾರತ ಪ್ರವಾಸ ರೈಲು ಮತ್ತು ಬಸ್ಸಿನಲ್ಲಿ 29.1.2023 ಮತ್ತು 31.3.2023, 16 ದಿನಗಳ ಪ್ರವಾಸ ಆಗ್ರಾ, ಅಲಹಾಬಾದ್ ಕಾಶಿ ಅಯೋಧ್ಯ, ಹರಿದ್ವಾರ ಅಮೃತಸರ ವೈಷ್ಣೋದೇವಿ ದೆಹಲಿ.
26.2.2023 10 ದಿನಗಳು, ಮಥುರಾ ಅಲಹಾಬಾದ್, ಕಾಶಿ, ಅಯೋಧ್ಯ, ದೆಹಲಿ, ಜೂನ್ ತಿಂಗಳಿನಲ್ಲಿ ಅಮರ್‌ನಾಥ್ ಯಾತ್ರೆಗೆ ಸಂಪರ್ಕಿಸಿ:
ರಾಮಚಂದ್ರ 9481819973
ಲಕ್ಷ್ಮಣರಾವ್: 9341820013 / 7676167667

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45, ಸಂಬಳ: 14,500/–, ESI, PF ಒಳಗೊಂಡು 3 SHift ಹಾಗೂ Week off ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದು ಕೊಳ್ಳತಕ್ಕದ್ದು. ಸ್ಥಳ: CIPET ಕಾಲೇಜ್ ಹತ್ತಿರ, ರಿಂಗ್ ರೋಡ್, ಮೇಟಗಳ್ಳಿ, ಮೈಸೂರು. ಮೊ.:
9986874584

ಬೇಕಾಗಿದ್ದಾರೆ
Steel Con industries
ಎಕ್ಸಿಕ್ಯೂಟಿವ್ (18 ರಿಂದ 30 ವರ್ಷದೊಳಗೆ) (ದ್ವಿಚಕ್ರ ವಾಹನ ಕಡ್ಡಾಯ)
9113596290
9844582558

COACHING CENTRE
Graphics Design, Web Design, DTP (New year Offer) Logo, Flex Board, LED Board, Mugprint, Billbook, Pamphlet, Invitation Ext., All Types Printing Design Course
8105363691
8123517141

ಮಾರುತಿ ದೇವಸ್ಥಾನಕ್ಕೆ ಅರ್ಚಕರು ಬೇಕಾಗಿದ್ದಾರೆ
Speech and Hearing ಸರ್ಕಲ್, ಮೈಸೂರು
8073200346
7026346891

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಸೋಮವಾರ 2 ಜನವರಿ 2023



ಚಂದ್ರಶೇಖರ ಪಾಟೀಲ್ (ಚಂಪಾ) ಕವಿ
ಜನನ:ಜೂನ್ 18, 1939
ಹತ್ತಿಮತ್ತೂರು, ಹಾವೇರಿ
ಪ್ರಶಸ್ತಿ: ಪಂಪ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ


ಕೆ.ಎಲ್.ಮಂಜುನಾಥ್
ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ
ಸ್ವಗ್ರಾಮ: ಕೆಂಪಲಿಂಗನಹಳ್ಳಿ, ಕುಣಿಗಲ್ ತಾ.


ಲತಾ ಮಂಗೇಶ್ಕರ್
ಜನನ: 28.9.1929
ಮೊದಲ ಹೆಸರು: ಹೇಮಾ ಮಂಗೇಶ್ಕರ್
ಪದ್ಮಭೂಷಣ, ಪದ್ಮವಿಭೂಷಣ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ


ಭಾರ್ಗವಿ ನಾರಾಯಣ್
ಕಿರುತೆರೆ ನಟಿ
2019ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ



ಚನ್ನವೀರ ಕಣವಿ (ಸಾಹಿತಿ)
ಜನನ: ಜೂನ್ 28, 1928,
ಹೊಂಬಳ, ಧಾರವಾಡ ಜಿಲ್ಲೆ
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನಕೃ ಪ್ರತಿಷ್ಠಾನ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ


ರಾಜಕೀಯ ಮುತ್ಸದ್ದಿ ಹೆಚ್.ಡಿ.ಚೌಡಯ್ಯ
ಸ್ವಗ್ರಾಮ: ಹೊಳಲು ಗ್ರಾಮ, ಮಂಡ್ಯ ಜಿಲ್ಲೆ
ನಾಲ್ಕು ಬಾರಿ ಕೆರಗೋಡು ಕ್ಷೇತ್ರದ ಶಾಸಕರು



ಬಪ್ಪಿ ಲಹರಿ
ಬಾಲಿವುಡ್ ಸಂಗೀತ ನಿರ್ದೇಶಕ
ಜನನ: ನವೆಂಬರ್ 27, 1952
ಜಲ್‌ಪೈಗುರಿ, ವೆಸ್ಟ್ ಬೆಂಗಾಲ್


ರಾಜೇಶ್
ಕನ್ನಡ ಚಿತ್ರರಂಗದ ಹಿರಿಯ ನಟ
ಜನನ: ಏಪ್ರಿಲ್ 15, 1932, ಬೆಂಗಳೂರು


ಆಸ್ಟ್ರೇಲಿಯಾ ಕ್ರಿಕೆಟ್ ದಿಗ್ಗಜ ಆಂಡ್ರ್ಯೂ ಸೈಮಂಡ್ಸ್
ಜನನ: ಜೂನ್ 9, 1975
ಬರ್ಮಿಂಗ್ ಹ್ಯಾಮ್, ವೆಸ್ಟ್ ಮಿಡ್‌ಲ್ಯಾಂಡ್ಸ್, ಇಂಗ್ಲೆಂಡ್


ಪೀಟರ್ ಬ್ರೋಕ್
ಮಹಾಭಾರತ ನಿರ್ದೇಶಕ
ಜನನ: ಮಾರ್ಚ್ 21, 1925, ಲಂಡನ್


9/11 ದಾಳಿಯ ಮಾಸ್ಟರ್ ಮೈಂಡ್ ಆಲ್ ಖೈದಾ ಉಗ್ರ ಸಂಘಟನೆ ಮುಖ್ಯಸ್ಥ
ಅಯ್ಮಾನ್ ಅಲ್ ಜವಾಹಿರಿ


ಶಿವಮೊಗ್ಗ ಸುಬ್ಬಣ್ಣ
ಖ್ಯಾತ ಸುಗಮ ಸಂಗೀತ ಗಾಯಕ
ಜನನ :ಡಿ. 14, 1938, ಶಿವಮೊಗ್ಗ. ತಂದೆ-ತಾಯಿ: ಗಣೇಶರಾಯ, ರಂಗನಾಯಕಿ


ಡಾ. ಎಂ.ಎಸ್.ವಿಶ್ವೇಶ್ವರ
ಖ್ಯಾತ ವಿಕಿರಣ ತಜ್ಞ,
ಭಾರತ್ ಕ್ಯಾನ್ಸರ್ ಆಸ್ಪತ್ರೆ, ಮೈಸೂರು.


ಟಾಟಾ ಸನ್ಸ್ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ
ಜನನ: ಜುಲೈ 4, 1968
ಬಾಂಬೆ, ಮಹಾರಾಷ್ಟ್ರ


ಉಮೇಶ್ ಕತ್ತಿ
ಅರಣ್ಯ ಸಚಿವ
ಜನನ: ಮಾರ್ಚ್ 14, 1961
8 ಬಾರಿ ವಿಧಾನಸಭೆಗೆ ಆಯ್ಕೆ
ಸ್ವಗ್ರಾಮ: ಬೆಲ್ಲದ ಬಾಗೇವಾಡಿ, ಬೆಳಗಾವಿ ಜಿಲ್ಲೆ


ಬ್ರಿಟನ್ ರಾಣಿ 2ನೇ ಎಲಿಜಬೆತ್
ಜನನ: 21 ಏಪ್ರಿಲ್, 1926
ಬ್ರೂಟನ್ ಸ್ಟ್ರೀಟ್, ಲಂಡನ್, ಯುನೈಟೆಡ್ ಕಿಂಗ್‌ಡಂ


ರವಿಪ್ರಸಾದ್,
ಕಿರುತೆರೆ ನಟ,
ಸ್ವಗ್ರಾಮ: ಕಲ್ಲಹಳ್ಳಿ, ಮಂಡ್ಯ ಜಿಲ್ಲೆ

ಡಾ. ಕಮಲಾರಾಮನ್
ಖ್ಯಾತ ಸ್ತ್ರೀರೋಗ ತಜ್ಞರು, ರಾಜಕಾರಣಿ
ಮೈಸೂರು


ಮುಲಾಯಂ ಸಿಂಗ್ ಯಾದವ್
ಜನನ: 22 ನವೆಂಬರ್, 1939
ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ, ಮೂರು ಬಾರಿ ಮುಖ್ಯಮಂತ್ರಿ ಪದವಿ

ಕಾರು ಹರಿಸಿ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ
ಮೈಸೂರು

ಲೋಹಿತಾಶ್ವ
ಕನ್ನಡ ಚಿತ್ರರಂಗದ ಹಿರಿಯ ನಟ, ನಾಟಕಕಾರ,
ಜನನ: ಆಗಸ್ಟ್ 5, 1942
ತೊಂಡಗೆರೆ, ತುಮಕೂರು ಜಿಲ್ಲೆ

2022ರ ಘಟನಾವಳಿಗಳು

● ಜೂ.19 ಪ್ರಧಾನಿ ಮೋದಿ ಮೈಸೂರಿಗೆ



● ಜೂ.21 ಅರಮನೆ ಅಂಗಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಯೋಗ





● ಅ.5 ಲಕ್ಷ ಲಕ್ಷ ಭಕ್ತರ ಜನರ ನಡುವೆ ಅದ್ದೂರಿ ಜಂಬೂ ಸವಾರಿ



ಜನವರಿ

ಜ.1 ಪಾಲಿಕೆಯಿಂದ 3 ಅಭಯ ಕ್ಷಿಪ್ರ ಕಾರ್ಯಪಡೆ ವಾಹನಗಳಿಗೆ ಚಾಲನೆ

ಜ.1 ಕೈಗಾರಿಕೆಗೆ 2 ಎಕರೆಗೂ ಅಧಿಕ ಭೂಮಿ 10 ವರ್ಷಕ್ಕೆ ಲೀಸ್ ಕಂ ಸೇಲ್

ಜ.1 ಹೊಸ ವರುಷದ ದುರಂತ: ವೈಷ್ಣೋದೇವಿ ದೇವಾಲಯದಲ್ಲಿ ಕಾಲ್ತುಳಿತಕ್ಕೆ 16 ಮಂದಿ ಸಾವು

ಜ.1 ಹೊಸ ವರುಷದ ಸಿಹಿ ಸುದ್ದಿ: ವಾಣಿಜ್ಯ ಬಳಕೆ ಎಲ್‌ಪಿಜಿ 102 ಇಳಿಕೆ

ಜ.2 ಖಾಸಗಿ ಬಸ್-ಕಾರು ಮುಖಾಮುಖಿ ಡಿಕ್ಕಿ: ಕೊಡಗಿನ ನವದಂಪತಿ ಸೇರಿ ಮೂವರ ದುರ್ಮರಣ

ಜ.2 ಅರಮನೆ ಆವರಣದ ಫಲಪುಷ್ಪ ಪ್ರದರ್ಶನಕ್ಕೆ ತೆರೆ

ಜ.2 ಮೇಕೆದಾಟು ಯೋಜನೆ : ಚಾ.ನಗರದಲ್ಲಿ ಕಾಂಗ್ರೆಸ್ ಪಾದಯಾತ್ರೆ

ಜ.4 ಸೆಸ್ಕ್‌ಗೆ ಸರ್ಕಾರಿ ಇಲಾಖೆಗಳಿಂದ 511.23 ಕೋಟಿ ಬಿಲ್ ಬಾಕಿ

ಜ.4 ಮಂಡ್ಯ ಜಿಲ್ಲೆಯಲ್ಲಿ ಶತಕದಂಚಿಗೆ ಕೊರೊನಾ ಪ್ರಕರಣ

ಜ.5 ಸುಮಂತ್ ಜೊತೆ ವೈವಾಹಿಕ ಜೀವನಕ್ಕೆ ಕಾಲಿರಿಸಿದ ಶುಭಾ ಪೂಂಜಾ

ಜ.6 ಶಾಲೆಗೆ ಮೊಬೈಲ್ ತಂದ ಬಾಲಕಿ ಬಟ್ಟೆ ಬಿಚ್ಚಿಸಿದ ಶಿಕ್ಷಕ

ಜ.7 ಮೈಸೂರಲ್ಲಿ ವರ್ಷದ ಮೊದಲ ವಾರಾಂತ್ಯ ಕರ್ಫ್ಯೂ ಜಾರಿ

ಜ.7 ನಾಯಂಡಹಳ್ಳಿ ಬಳಿ ಹಳಿ ತಪ್ಪಿದ ಗೂಡ್ಸ್ ರೈಲು

ಜ.9 ವೀಕೆಂಡ್ ಕರ್ಫ್ಯೂ ನಡುವೆಯೇ ಕಾಂಗ್ರೆಸ್‌ನ ಮೇಕೆದಾಟು ಪಾದಯಾತ್ರೆ

ಜ.9 ಲಾರಿ ಹರಿದು ಇಬ್ಬರು ಶಿಕ್ಷಕರು ಸಾವು

ಜ.10 ಹನಗೋಡಿನಲ್ಲಿ ಗ್ರಾಮಸ್ಥರ ಗದ್ದಲ, ಕಲ್ಲು ತೂರಾಟದಿಂದ ಕಂಗೆಟ್ಟು ನಾಲೆಯಲ್ಲಿ ಹೆಣಗಾಡಿದ ಕಾಡಾನೆಗಳು

ಜ.10 ನಾಡಿನ ಹಿರಿಯ ಸಾಹಿತಿ ಚಂಪಾ ಇನ್ನಿಲ್ಲ

ಜ.12 ಸರ್ಕಾರಕ್ಕೆ: ಪಾದಯಾತ್ರೆ ತಡೆಯಲು ನೀವು ಅಸಮರ್ಥರೇ? ಕೆಪಿಸಿಸಿಗೆ: ನೀವು ಪಾದಯಾತ್ರೆ ನಡೆಸುತ್ತಿರುವುದೇಕೆ? ಹೈಕೋರ್ಟ್ ತರಾಟೆ

ಜ.13 ಮೇಕೆದಾಟು ಪಾದಯಾತ್ರೆ ಸ್ಥಗಿತ

ಜ.16 ವಿಶ್ವದಲ್ಲೇ ಅತೀ ದೊಡ್ಡ ಖಾದಿ ರಾಷ್ಟ್ರಧ್ವಜ ಪ್ರದರ್ಶನ

ಜ.16 ಭಾರತದ ಕೋವಿಡ್ ಲಸಿಕೆ ಅಭಿಯಾನಕ್ಕೆ ಒಂದು ವರ್ಷ

ಜ.18 ಮಕ್ಕಳ ಆರೋಗ್ಯ ಕಾಪಾಡಿ: ಜಿಲ್ಲಾಡಳಿತಕ್ಕೆ ಸಿಎಂ ಸೂಚನೆ

ಜ.21 ಬೆಂಗಳೂರಲ್ಲಿ ವಾರಾಂತ್ಯ ಹಗಲು ಕರ್ಫ್ಯೂ ರದ್ದು

ಜ.23 ಇಂಡಿಯಾ ಗೇಟ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್‌ರ ಹ್ಯಾಲೋಗ್ರಾಮ್ ಪ್ರತಿಮೆ ಅನಾವರಣ

● ಜ.2 ಕೇಂದ್ರದ ರೆಡ್ ಜೋನ್ ಪಟ್ಟಿಯಲ್ಲಿರುವ ಬೆಂಗಳೂರು ಲಾಕ್‌ಡೌನ್

● ಜ.4 ಕೊರೊನಾ, ರೂಪಾಂತರಿ ಒಮಿಕ್ರಾನ್ ತಡೆಗೆ ರಾಜ್ಯದಲ್ಲಿ ವಾರಾಂತ್ಯ ಕರ್ಫ್ಯೂ ಜಾರಿ

● ಜ.6 ರಾಜ್ಯದಲ್ಲಿ ವಾರಾಂತ್ಯ ಕರ್ಫ್ಯೂ ಜಾರಿ

● ಜ.8 ವಾರಾಂತ್ಯ ಕರ್ಫ್ಯೂ:ಮೈಸೂರಲ್ಲಿ ಸ್ಪಂದನೆ

● ಜ.11 ಕೊರೊನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಶಾಲೆಗೆ ಬಂದ್



ಜ.23 ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಲ್.ಮಂಜುನಾಥ್ ನಿಧನ

ಜ.24 ಮೈಸೂರು ರೈಲು ಮ್ಯೂಸಿಯಂನಲ್ಲಿ 1964ರ ಉಗಿಬಂಡಿ

ಜ.25 ಭಾರತದ ಸೇನಾ ಪಡೆಗಳ ಮುಖ್ಯಸ್ಥ ಬಿಪಿನ್ ರಾವತ್, ಕವಿ ಸಿದ್ದಲಿಂಗಯ್ಯ ಸೇರಿ 128 ಮಂದಿಗೆ ಪದ್ಮ ಪ್ರಶಸ್ತಿ

ಜ.27 ಕಾಂಗ್ರೆಸ್‌ಗೆ ಸಿ.ಎಂ. ಇಬ್ರಾಯಿಂ ಗುಡ್‌ಬೈ

ಜ.28 ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೊಮ್ಮಗಳು ಡಾ. ಸೌಂದರ್ಯ ಆತ್ಮಹತ್ಯೆ

ಜ.30 ದೇಶದಲ್ಲಿ ಶೇ. 75 ರಷ್ಟು ಲಸಿಕೆ ಸಾಧನೆ: ಪ್ರಧಾನಿ ಮೋದಿ ಟ್ವೀಟ್

ಫೆಬ್ರುವರಿ

ಫೆ.1 ಕೇಂದ್ರ ಬಜೆಟ್ 2022 : 35 ಲಕ್ಷ ಉದ್ಯೋಗ ಸೃಷ್ಟಿ : ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

ಫೆ.3 ಮಹಾರಾಣಿ ಶಿಕ್ಷಕಿಯರ ತರಬೇತಿ ಸಂಸ್ಥೆಗೆ ಎನ್‌ಟಿಎಂ ಶಾಲೆ ಸ್ಥಳಾಂತರ

ಫೆ.4 ಅತ್ಯಾಚಾರದಿಂದ ಮುಕ್ತವಾದ ಮಾಜಿ ಸಚಿವ ರಮೇಶ್ ಜಾರಕಿಹೊಳಿ

ಫೆ.4 ವಸ್ತ್ರ ಸಂಹಿತೆ ಕಡ್ಡಾಯ :ಕೇಸರಿ, ಹಿಜಾಬ್ ಧರಿಸಲು ಅವಕಾಶವಿಲ್ಲ : ಕರ್ನಾಟಕ ಸರ್ಕಾರ ಖಡಕ್ ಸೂಚನೆ

ಫೆ.5 ಕಾಲೇಜುಗಳಲ್ಲೂ ವಸ್ತ್ರಸಂಹಿತೆ ಜಾರಿ

ಫೆ.6 ಭಾರತದ ಗಾನ ಕೋಗಿಲೆ ಲತಾ ಮಂಗೇಶ್ಕರ್ ಇನ್ನಿಲ್ಲ

ಫೆ.6 ಶ್ರೀರಂಗಪಟ್ಟಣ : ಮಹಿಳೆ, ನಾಲ್ವರು ಮಕ್ಕಳೂ ಸೇರಿ ಒಂದೇ ಕುಟುಂಬದ ಐವರ ಭೀಕರ ಹತ್ಯೆ

ಫೆ.7 ಇತಿಹಾಸ ಪುಟ ಸೇರಿದ ಎನ್‌ಟಿಎಂ ಶಾಲೆ ಕಟ್ಟಡ

ಫೆ.7 ಗಣರಾಜ್ಯೋತ್ಸವದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರ ತೆರವು ಪ್ರಕರಣ : ಮೈಸೂರಲ್ಲಿ ಸಂವಿಧಾನ ರಕ್ಷಣಾ ಸಮಿತಿಯಿಂದ ಭಾರೀ ಆಕ್ರೋಶ

ಫೆ.8 ರಾಜ್ಯದಲ್ಲಿ ವಸ್ತ್ರ ಸಂಘರ್ಷ: ವಿದ್ಯಾರ್ಥಿ ಗುಂಪುಗಳ ನಡುವೆ ಕಲ್ಲು ತೂರಾಟ, ಲಾಠಿ ಚಾರ್ಜ್, ಅಶ್ರುವಾಯು ಪ್ರಯೋಗ

ಫೆ.9 ಗ್ರಾಮೀಣ ಪ್ರದೇಶದ ಮನೆಗಳಿಗೆ ನಲ್ಲಿ ನೀರು ಕಲ್ಪಿಸುವ ಜಲಜೀವನ್ ಜಾರಿ

ಫೆ.12 ರೆವಿನ್ಯೂ ಸೈಟ್ ವಿಚಾರದಲ್ಲಿ ಬಾರ್‌ನಲ್ಲಿ ವಾಗ್ವಾದ : ಇರಿದು ಯುವಕನ ಹತ್ಯೆ

ಫೆ.13 ಲಾಕ್‌ಡೌನ್ ತೆರವು: ಮೈಸೂರಿನತ್ತ ಮುಖ ಮಾಡುತ್ತಿರುವ ವಿದೇಶಿಗರು

ಫೆ.14 ಹಿರಿಯ ನಟಿ ಭಾರ್ಗವಿ ನಾರಾಯಣ್ ನಿಧನ

ಫೆ.16 ಕನ್ನಡದ ಹಿರಿಯ ಸಾಹಿತಿ ಡಾ.ಚೆನ್ನವೀರ ಕಣವಿ ನಿಧನ

ಫೆ.16 ಹಿರಿಯ ಮುತ್ಸದ್ದಿ ಹೆಚ್.ಡಿ.ಚೌಡಯ್ಯ ಇನ್ನಿಲ್ಲ

ಫೆ.16 ಬಾಲಿವುಡ್ ಸಂಗೀತ ನಿರ್ದೇಶಕ ಬಪ್ಪಿ ಲಹರಿ ನಿಧನ

ಫೆ.16 ನೀನು ದೇಶದ್ರೋಹಿ : ಡಿಕೆಶಿ, ನಿಮ್ಮಪ್ಪ ದೇಶದ್ರೋಹಿ : ಈಶ್ವರಪ್ಪ, ವಿಧಾನಸಭೆಯಲ್ಲಿ ಕೈ ಮಿಲಾಯಿಸುವ ಹಂತಕ್ಕೆ ಪರಿಸ್ಥಿತಿ

ಫೆ.17 ಪ್ರಕಾಶಕರ ಸಮ್ಮೇಳನಾಧ್ಯಕ್ಷರಾಗಿ ಟಿ.ಎಸ್.ಛಾಯಾಪತಿ ಆಯ್ಕೆ

ಫೆ.18 ಸರ್ಕಾರಿ ಆಸ್ತಿಗೆ ನಕಲಿ ದಾಖಲೆ ಸೃಷ್ಟಿಸಿ ಖಾಸಗಿಯವರಿಗೆ ಖಾತೆ ಹುಣಸೂರು ನಗರಸಭೆ ಮಾಜಿ ಆಯುಕ್ತ ಶಿವಪ್ಪನಾಯಕ ಬಂಧನ

ಫೆ.19 ರಾಜ್ಯದಲ್ಲಿ ಕೋವಿಡ್ ಪಾಸಿಟಿವಿಟಿ ದರ ಶೇ.4ಕ್ಕೆ ಇಳಿಕೆ

● ಫೆ.2 ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಬೇಲೂರು, ಹಳೇಬೀಡು ಸೇರ್ಪಡೆ



● ಫೆ.24 ಉಕ್ರೇನ್ ಮೇಲೆ ರಷ್ಯಾ ಸಮರ



ಫೆ.19 ಕನ್ನಡ ಚಿತ್ರರಂಗದ ಹಿರಿಯ ನಟ ರಾಜೇಶ್ ಇನ್ನಿಲ್ಲ

ಫೆ.21 ಶಿವಮೊಗ್ಗದಲ್ಲಿ ಭಜರಂಗ ದಳ ಕಾರ್ಯಕರ್ತ ಹರ್ಷನ ಹತ್ಯೆ ಉದ್ವಿಗ್ನ

ಫೆ.22 ಹರ್ಷನ ಹತ್ಯೆ ಸಂಬಂಧ 6 ಮಂದಿ ಬಂಧನ

ಫೆ.24 ಸಾಲಬಾಧೆ : ಹಾಸನದಲ್ಲಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ

ಫೆ.25 ಉಕ್ರೇನ್ ರಾಜಧಾನಿ ಬಹುತೇಕ ರಷ್ಯಾ ವಶಕ್ಕೆ

ಫೆ.26 ಉಕ್ರೇನ್ ಯುದ್ಧ ಭೂಮಿಯಿಂದ ಭಾರತಕ್ಕೆ ಸುರಕ್ಷಿತವಾಗಿ ಮರಳಿದ 219 ವಿದ್ಯಾರ್ಥಿಗಳು

ಫೆ.27 ಮೇಕೆದಾಟು ಎರಡನೇ ಹಂತದ ಪಾದಯಾತ್ರೆಗೆ ಚಾಲನೆ

ಫೆ.27 ಅಂಬರೀಷ್ ಸ್ಮಾರಕಕ್ಕೆ ಸಿಎಂ ಬೊಮ್ಮಾಯಿ ಶಂಕುಸ್ಥಾಪನೆ

ಮಾರ್ಚ್

ಮಾ.2 ಕರ್ನಾಟಕದ ಪ್ರತಿಭಾನ್ವಿತ ನವೀನ್ ಸೇರಿ ಭಾರತದ ಇಬ್ಬರ ಬಲಿ ಪಡೆದ ಉಕ್ರೇನ್ ಯುದ್ಧ

ಮಾ.4 ಹೊರೆ ಇಲ್ಲದ, ಬರೆ ಹಾಕದ ಬೊಮ್ಮಾಯಿ ಬಜೆಟ್

ಮಾ.4 ಮೇಕೆದಾಟು ಯೋಜನೆಗೆ 1000 ಕೋಟಿ ರೂ. ಮೀಸಲು

ಮಾ.4 ಮೈಸೂರು-ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆಗೆ ಹಸಿರು ನಿಶಾನೆ

ಮಾ.4 ಬೆಳಗೊಳ ಬಳಿಯ ಕಾರೇಕುರದಲ್ಲಿ ಕತ್ತು ಕೊಯ್ದು ಯುವಕನ ಬರ್ಬರ ಹತ್ಯೆ

ಮಾ.4 ಗುಂಡ್ಲುಪೇಟೆ ಬಳಿ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದ ಗುಡ್ಡ ಕುಸಿತ: ಇಬ್ಬರು ಕಾರ್ಮಿಕರು ನಾಪತ್ತೆ

ಮಾ.6 ಮೈಸೂರಲ್ಲಿ ಅತ್ಯಾಧುನಿಕ ಖಗೋಳ ತಾರಾಲಯಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶಂಕುಸ್ಥಾಪನೆ

ಮಾ.7 ಮೈಸೂರಿನ ಯಾದವಗಿರಿ ರೈಲ್ವೆ ಕ್ವಾಟ್ರರ್ಸ್‌ನಲ್ಲಿ ಕ್ಲೋರಿನ್ ಸೋರಿಕೆ, 50ಕ್ಕೂ ಅಧಿಕ ಮಂದಿ ಅಸ್ವಸ್ಥ

ಮಾ.7 ಪಡುವಾರಹಳ್ಳಿ ದೇವು ಪ್ರಕರಣ : 11 ಮಂದಿಗೆ ಜೀವಾವಧಿ ಶಿಕ್ಷೆ

ಮಾ.8 ಉಕ್ರೇನ್‌ನಲ್ಲಿ ರಷ್ಯಾ ರಣಕೇಕೆ

ಮಾ.9 ಸಂಸದೆ ಸುಮಲತಾರೊಂದಿಗೆ ಜೆಡಿಎಸ್ ಕಾರ್ಯಕರ್ತರ ವಾಕ್ಸಮರ: ಏಳು ಮಂದಿ ವಿರುದ್ಧ ಕೊಲೆ ಯತ್ನ ಕೇಸು

ಮಾ.9 ನಾಗಮಂಗಲದಲ್ಲಿ ನಂಗಾನಾಚ್ : ಮಹಿಳಾ ದಿನಾಚರಣೆ ವಿಶೇಷ

ಮಾ.9 ಶ್ರೀರಂಗಪಟ್ಟಣ ಬಳಿ ಯುವಕನ ಕತ್ತು ಕೊಯ್ದು ಹತ್ಯೆ ಪ್ರಕರಣ: ಐವರು ಆರೋಪಿಗಳ ಬಂಧನ

ಮಾ.11 ಪಂಚರಾಜ್ಯಗಳ ಫಲಿತಾಂಶ :ಬಿಜೆಪಿ 4 ರಾಜ್ಯದಲ್ಲಿ ಜಯಭೇರಿ ಹಿನ್ನೆಲೆ: ಕೈ ಹಿಡಿಯಲು ಸಜ್ಜಾದವರಿಗೆ ಶಾಕ್

ಮಾ.12 ಕಾಂಗ್ರೆಸ್‌ಗೆ ಸಿ.ಎಂ. ಇಬ್ರಾಹಿಂ ರಾಜೀನಾಮೆ

ಮಾ.16 ಮೈಸೂರು ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಬಾಲಕೃಷ್ಣ, ಗುಂಡ್ಲುಪೇಟೆ ಅಬಕಾರಿ ಇನ್ಸ್‌ಪೆಕ್ಟರ್ ಚೆಲುವರಾಜು ಸೇರಿ ರಾಜ್ಯಾದ್ಯಂತ 18 ಮಂದಿ ಅಧಿಕಾರಿಗಳಿಗೆ ಎಸಿಬಿ ಶಾಕ್

ಮಾ.17 ಮೈಸೂರಲ್ಲಿ ಪುನೀತ್ ಹುಟ್ಟುಹಬ್ಬ ಆಚರಣೆ, ಯುವರತ್ನಗೆ ಮೆರುಗು ನೀಡಿದ ಜೇಮ್ಸ್

ಮಾ.20 ಮಾಜಿ ಶಾಸಕ ವಾಸು ಸೇರಿ 60 ಹಿರಿಯ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ, 'ಕ್ಷೀರ ಸಮೃದ್ಧಿ ಬ್ಯಾಂಕ್' ಸ್ಥಾಪನೆ : ಸಿಎಂ

● ಮಾ.10, 2024ರಲ್ಲೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ: ಪ್ರಧಾನಿ ಮೋದಿ ಭವಿಷ್ಯ





● ಮಾ.13 ಮೈಸೂರು ವಿಶ್ವವಿದ್ಯಾನಿಲಯದಿಂದ ಪುನೀತ್ ರಾಜ್‌ಕುಮಾರ್‌ಗೆ ಮರಣೋತ್ತರ ಗೌರವ ಡಾಕ್ಟರೇಟ್

● ಮಾ.15 ಶಾಲಾ-ಕಾಲೇಜಲ್ಲಿ ಹಿಜಾಬ್ ನಿಷೇಧ : ಸರ್ಕಾರದ ಆದೇಶ ಎತ್ತಿ ಹಿಡಿದ ಹೈಕೋರ್ಟ್





● ಮಾ.27 ಬ್ಯಾಡ್ಮಿಂಟನ್ ಸ್ವಿಸ್ ಓಪನ್ ಕಿರೀಟ ಮುಡಿಗೇರಿಸಿಕೊಂಡ ಪಿ.ವಿ. ಸಿಂಧೂ

ಮಾ.21 ಮೈಸೂರು : ಏಳು ತಿಂಗಳ ಗರ್ಭಿಣಿ ಕೊಂದು ಕೆರೆಗೆಸೆದ ಪತಿ

ಮಾ.22 ಮೈಸೂರು:ಡಾ.ವಿ.ಕೆ. ಅತ್ರೆ, ಪುನೀತ್ ರಾಜ್‌ಕುಮಾರ್, ಎಂ. ಮಹದೇವಸ್ವಾಮಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ

ಮಾ.26 ರೋಪ್ ವೇ ಚಾಮುಂಡಿಬೆಟ್ಟಕ್ಕೆ ಅಪಾಯಕಾರಿ: ಸಂಸದ ಶ್ರೀನಿವಾಸ ಪ್ರಸಾದ್

ಮಾ.26 ಮೈಸೂರಿನ ಹೆಬ್ಬಾಳಲ್ಲಿ ಡಾ. ಸುಧಾಮೂರ್ತಿ ರಸ್ತೆ ಅನಾವರಣ

ಮಾ.30 ಮೈಸೂರಲ್ಲಿ ಬ್ಯಾಂಕ್ ನೋಟ್ ಇಂಕ್ ಘಟಕ ಉದ್ಘಾಟಿಸಿದ ಆರ್‌ಬಿಐ ಗೌರ್ನರ್

ಏಪ್ರಿಲ್

ಏ.3 ಚಾಮುಂಡಿಬೆಟ್ಟದಲ್ಲಿ ವಾಣಿಜ್ಯ ಕೇಂದ್ರೀಕೃತ ಪ್ರವಾಸೋದ್ಯಮ ಅಭಿವೃದ್ಧಿ ಕೈಬಿಡಿ : ಚಾಮುಂಡಿಬೆಟ್ಟ ಉಳಿಸಿ ಸಮಿತಿಯಿಂದ ದುಂಡು ಮೇಜಿನ ಸಭೆ

ಏ.5 ಪ್ರಧಾನಿ ಮೋದಿಗೆ ಬೋಸ್ ಪ್ರತಿಮೆ ನೀಡಿದ ಮೈಸೂರು ಶಿಲ್ಪಿ ಅರುಣ್ ಯೋಗಿರಾಜ್

ಏ.7 ಪುನೀತ್ ರಾಜ್‌ಕುಮಾರ್ ಕನಸು ನನಸು: ಮೈಸೂರಲ್ಲಿ ಶಕ್ತಿಧಾಮ ವಿದ್ಯಾಶಾಲೆಗೆ ಸಿಎಂ ಶಂಕುಸ್ಥಾಪನೆ : 5 ಕೋಟಿ ರೂ. ನೆರವು

ಏ.10 ತುಮಕೂರು :ವಿಶ್ವದಲ್ಲೇ ಅತೀ ಎತ್ತರದ 161 ಅಡಿ ಆಂಜನೇಯಮೂರ್ತಿ ಉದ್ಘಾಟಿಸಿದ ಸಿಎಂ ಬೊಮ್ಮಾಯಿ

ಏ.11 ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಪ್ರಕ್ರಿಯೆಗೆ ಚಾಲನೆ

ಏ.11 ಮೈಸೂರು : ಹಾಡಹಗಲೇ ಕಾರಿನ ಮೇಲೆ ಮುಸುಕುಧಾರಿಗಳ ದಾಳಿ

ಏ.12 ಸಚಿವ ಈಶ್ವರಪ್ಪ ವಿರುದ್ಧ ಶೇ.40 ಕಮೀಷನ್ ದೂರು ನೀಡಿದ್ದ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ

ಏ.15 ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣ: ಈಶ್ವರಪ್ಪ ರಾಜೀನಾಮೆ

ಏ.16 2023ರ ವಿಧಾನಸಭಾ ಚುನಾವಣೆಗೆ ಜೆಡಿಎಸ್ ತಯಾರಿ: ಜನತಾ ಜಲಧಾರೆ ಗಂಗಾಯಾತ್ರೆ ಆರಂಭ

ಏ.17 ಜೆಡಿಎಸ್ ನೂತನ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ

ಏ.17 ವಾಟ್ಸಾಪ್‌ನಲ್ಲಿ ಪ್ರಚೋದನಕಾರಿ ಪೋಸ್ಟ್ : ಹುಬ್ಬಳ್ಳಿ ಉದ್ವಿಗ್ನ

ಏ.18 ಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ

ಏ.23 ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ :ನೂರಾರು ನಿವೇಶನಗಳ ದಾಖಲೆಯ ಪುಟಗಳೇ ಮಾಯ

ಏ.24 ದೇಶದ ಜಲ ಸಂರಕ್ಷಣೆಗೆ ಸಂಕಲ್ಪ ಮಾಡೋಣ : ಮೋದಿ ಕರೆ

● ಏ.16 'ಮೈಸೂರು ಮಿತ್ರ'ನ 43ನೇ ವರ್ಷಕ್ಕೆ ಪಾದಾರ್ಪಣೆ



● ಏ.20 ಹುಣಸೂರು ಬಳಿ ಭೀಕರ ಅಪಘಾತ :ಕೊಡಗಿನ 6 ಮಂದಿ ಸಾವು



ಏ.25 ರಾಜ್ಯಕ್ಕೆ ಕೊರೊನಾ 4ನೇ ಅಲೆ ಪ್ರವೇಶ

ಏ.25 ಎವಿಎಸ್ ಮೂರ್ತಿ, ಈ.ಎಸ್. ಚಕ್ರವರ್ತಿ, ಆನಂದ್ ಸಂಕೇಶ್ವರ್‌ಗೆ ಮುಕ್ತವಿವಿ ಗೌರವ ಡಾಕ್ಟರೇಟ್ ಪ್ರದಾನ

ಏ.28 ಬೆಂಗಳೂರಲ್ಲಿ ಪ್ರೀತಿ ನಿರಾಕರಿಸಿದ ಯುವತಿ ಮೇಲೆ ಆಸಿಡ್ ದಾಳಿ

ಏ.29 ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮದ ಆರೋಪಿ ದಿವ್ಯಾ ಹಾಗರಗಿ ಬಂಧನ

ಮೇ

ಮೇ 3 ಬಂಡೀಪಾಳ್ಯ ಎಪಿಎಂಸಿ ಪ್ರಾಂಗಣದಲ್ಲಿ ಏಜೆಂಟ್ ಕ್ಯಾಪ್ಸಿಕಮ್ ರವಿ ಬರ್ಬರ ಹತ್ಯೆ

ಮೇ 4 ಪೊಲೀಸ್ ಇಲಾಖೆಯಿಂದಲೇ ಪಿಎಸ್‌ಐ ಅಕ್ರಮ ಬಯಲು: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ

ಮೇ 5 ಪಿಎಸ್‌ಐ ಹಗರಣ : ಹೈಕೋರ್ಟ್ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲಿ : ವಿಪಕ್ಷ ನಾಯಕ ಸಿದ್ದರಾಮಯ್ಯ

ಮೇ 6 ಪಿಎಸ್‌ಐ ನೇಮಕಾತಿ ಪ್ರಕರಣ :ಕಿಂಗ್‌ಪಿನ್ ಟಚ್ ಮಾಡಿದರೆ ಸರ್ಕಾರ ಉಳಿಯಲ್ಲ: ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಬಾಂಬ್

ಮೇ 6 2500 ಕೋಟಿ ರೂ. ಕೊಡಿ ನಿಮ್ಮನ್ನು ಸಿಎಂ ಮಾಡ್ತೀವಿ ಅಂದ್ರು : ಶಾಸಕ ಬಸವನಗೌಡ ಪಾಟೀಲ್ ಬಾಂಬ್

ಮೇ 7 ಬಂಡೀಪಾಳ್ಯ ಏಜೆಂಟ್ ಕ್ಯಾಪ್ಸಿಕಮ್ ರವಿ ಹತ್ಯೆ ಪ್ರಕರಣ : ಐವರು ಆರೋಪಿಗಳ ಬಂಧನ

ಮೇ 8 ಮೈಸೂರಲ್ಲಿ ಸಿಲ್ಕ್ ಇಂಡಿಯಾ ಮೇಳಕ್ಕೆ ಚಾಲನೆ

ಮೇ 8 ಅಡಗೂರು ಹೆಚ್. ವಿಶ್ವನಾಥರ 75ರ ಸಂಭ್ರಮ

ಮೇ 8 ಹುಣಸೂರಿನಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ

ಮೇ 9 ಮೈಸೂರಲ್ಲಿ ಮುತಾಲಿಕ್ ನೇತೃತ್ವದಲ್ಲಿ ಮೊಳಗಿದ ಸುಪ್ರಭಾತ

ಮೇ 10 ಬೇಗೂರು : ಬೈಕ್‌ಗೆ ಕಾರು ಡಿಕ್ಕಿ : ಸ್ಥಳದಲ್ಲೇ ತಂದೆ-ಮಗ ಸಾವು

ಮೇ 10 ಲಂಕಾ ಪ್ರಧಾನಿ ನಿವಾಸಕ್ಕೆ ಬೆಂಕಿ ಹಚ್ಚಿದ ಪ್ರತಿಭಟನಾಕಾರರು

ಮೇ 10 ಚಾಮುಂಡಿಬೆಟ್ಟದ ತಪ್ಪಲಿನ ಕಲ್ಯಾಣಿಯ ಶಿವನ ವಿಗ್ರಹವುಳ್ಳ ಸ್ತಂಭ ಕುಸಿತ

ಮೇ 11 ಅಮರಾವತಿ : ಸಮುದ್ರದಲ್ಲಿ ತೇಲಿ ಬಂದ ಚಿನ್ನದ ರಥ

ಮೇ 12 ರಾನಿಲ್ ವಿಕ್ರಮಸಿಂಘೆ ಶ್ರೀಲಂಕಾ ನೂತನ ಪ್ರಧಾನಿ

ಮೇ 12 ಮತಾಂತರ ನಿಷೇಧ ಕಾಯ್ದೆಗೆ ಸುಗ್ರೀವಾಜ್ಞೆ: ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಮೇ 12 ಕೇಂದ್ರ ಚುನಾವಣಾ ಆಯುಕ್ತರಾಗಿ ರಾಜೀವ್ ಕುಮಾರ್ ನೇಮಕ

ಮೇ 13 ತಮಿಳುನಾಡಲ್ಲಿ ಆಸಿಡ್ ದಾಳಿ ಆರೋಪಿ ನಾಗೇಶ್ ಬಂಧನ

ಮೇ 14 ಜಿಟಿಟಿ ಮೊಮ್ಮಗಳು ಗೌರಿ ನಿಧನ

ಮೇ 15 ಆಸ್ಟ್ರೇಲಿಕಾ ಕ್ರಿಕೆಟ್ ದಿಗ್ಗಜ ಆಂಡ್ರ್ಯೂ ಸೈಮಂಡ್ಸ್ ನಿಧನ

ಮೇ 15 ಗುಂಡ್ಲುಪೇಟೆ ಪಾರ್ವತಾಂಭ ರಥೋತ್ಸವದಲ್ಲಿ ರಥಕ್ಕೆ ಸಿಲುಕಿ ಇಬ್ಬರ ಸಾವು

ಮೇ 17 ರಾಜ್ಯದಲ್ಲಿ ಮತಾಂತರ ನಿಷೇಧ ಜಾರಿ

ಮೇ 17 ಮೈಸೂರಲ್ಲಿ ಭಾರೀ ಮಳೆಗೆ ಕೊಚ್ಚಿ ಹೋದ ಸೇತುವೆ

ಮೇ 17 ನಟಿ ರಾಖಿ ಸಾವಂತ್‌ಗೆ ಮೈಸೂರಿನ ಬಾಯ್ ಫ್ರೆಂಡ್

ಮೇ 19 ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ನಿರಾಣಿ ಶುಗರ್ಸ್‌ಗೆ ಗುತ್ತಿಗೆ

ಮೇ 20 ಕೆನಡಾದ ಸಂಸತ್‌ನಲ್ಲಿ ಕನ್ನಡ ಪ್ರೇಮ ಮೆರೆದ ಚಂದ್ರ ಆರ್ಯ

ಮೇ 24 ಕೋರ್ಟ್‌ಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿ ಸೆಲ್ಫಿಯಿಂದ ಸಿಕ್ಕಿಬಿದ್ದ

ಮೇ 26 ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 80ನೇ ಜನ್ಮ ದಿನ ಆಚರಣೆ

ಮೇ 28 ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 80ನೇ ಜನ್ಮ ದಿನ ಆಚರಣೆ : ಪಂಚಲೋಹದ 750 ಕೆಜಿ ತೂಕದ ಪಲ್ಲಕ್ಕಿಯಲ್ಲಿ ಶ್ರೀಗಳ ಉತ್ಸವ

ಮೇ 29 ವಿಧಾನಸಭೆಯಿಂದ ರಾಜ್ಯಸಭೆ ಚುನಾವಣೆಗೆ ಬಿಜೆಪಿಯಿಂದ ನಿರ್ಮಲ ಸೀತಾರಾಮನ್, ನಟ ಜಗ್ಗೇಶ್, ಕಾಂಗ್ರೆಸ್‌ನಿಂದ ಜೈರಾಂ ರಮೇಶ್ ಅಭ್ಯರ್ಥಿಗಳು

ಮೇ 29 ಹೈದರಾಬಾದ್‌ನ ಮೂವರು ಪ್ರವಾಸಿಗರು ಕೊಡಗಿನ ಅಬ್ಬಿ ಫಾಲ್ಸ್‌ನಲ್ಲಿ ನೀರು ಪಾಲು

ಜೂನ್

ಜೂ.2 ಹಾಸನ : ನಗರಸಭೆ ಜೆಡಿಎಸ್ ಸದಸ್ಯ ಪ್ರಶಾಂತ್ ಬರ್ಬರ ಹತ್ಯೆ

ಜೂ.5 ನೋಟುಗಳಲ್ಲಿ ಕಲಾಂ, ಠಾಗೋರ್ ಚಿತ್ರಗಳು

ಜೂ.7 ಬೆಂಗಳೂರಲ್ಲಿ ಶಂಕಿತ ಕಾಶ್ಮೀರಿ ಉಗ್ರನ ಬಂಧನ

ಜೂ.8 ಮೈಸೂರಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ

ಜೂ.8 ಶ್ರೀರಂಗಪಟ್ಟಣ : ರುಂಡ ಮುಂಡ ಬೇರ್ಪಟ್ಟ ಮಹಿಳೆಯರ ದೇಹ ಪತ್ತೆ

ಜೂ.10 ಕರ್ನಾಟಕದಿಂದ ರಾಜ್ಯಸಭೆಗೆ ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್ ಸಿಂಗ್, ಜೈರಾಮ್ ರಮೇಶ್ ಆಯ್ಕೆ

ಜೂ.12 ಅರಮನೆ ಆವರಣದಲ್ಲಿ 16 ಯೋಗ ಪಟುಗಳಿಂದ ಪೂರ್ವಾಭ್ಯಾಸ ಯೋಗ ಪ್ರದರ್ಶನ

ಜೂ.13 ಮೈಸೂರು ದಕ್ಷಿಣ ಪದವೀಧರ ಕ್ಷೇತ್ರ : ಶೇ. 70 ರಷ್ಟು ಮತದಾನ

ಜೂ.14 ನೂತನ ಲೋಕಾಯುಕ್ತರಾಗಿ ನ್ಯಾ.ಬಿ.ಎಸ್. ಪಾಟೀಲ್ ನೇಮಕ

ಜೂ.16 ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಧು ಮಾದೇಗೌಡ ಗೆಲುವು

ಜೂ.17 ನ್ಯಾಷನಲ್ ಹೆರಾಲ್ಡ್ ಪ್ರಕರಣ : ಮೈಸೂರಲ್ಲಿ ಕಾಂಗ್ರೆಸ್ ಆಕ್ರೋಶ

ಜೂ.18 ಪಿಯುಸಿ ಫೇಲ್, ಕಡಿಮೆ ಅಂಕ ಬಂದ ಹಿನ್ನೆಲೆ : ಶ್ರೀರಂಗಪಟ್ಟಣ, ಕುಶಾಲನಗರ ಸೇರಿ ರಾಜ್ಯದಲ್ಲಿ ಆರು ವಿದ್ಯಾರ್ಥಿಗಳ ಆತ್ಮಹತ್ಯೆ

ಜೂ.23 ಕೊಡಗು, ಹಾಸನ, ಮಂಡ್ಯದ ಕೆಲವೆಡೆ ಭೂ ಕಂಪನ

ಜೂ.24 ಮೈಸೂರಲ್ಲಿ ವೈದ್ಯ ದಂಪತಿ ಪುತ್ರನ ಅಪಹರಣ : ಕೆಲವೇ ಗಂಟೆಯಲ್ಲಿ ಸುಖಾಂತ್ಯ

ಜೂ.25 ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಮಾಜಿ ಸಿಎಂ ಎಸ್.ಎಂ. ಕೃಷ್ಣ, ಇನ್ಫೋಸಿಸ್‌ನ ಎನ್.ಆರ್. ನಾರಾಯಣ ಮೂರ್ತಿ, ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಆಯ್ಕೆ

ಜೂ.26 ಬೆಳಗಾವಿ : ಕ್ರೂಸರ್ ಪಲ್ಟಿ : ಏಳು ಮಂದಿ ಸಾವು

ಜೂ.27 ಮಾಜಿ ಸಿಎಂ ಎಸ್.ಎಂ. ಕೃಷ್ಣ, ಇನ್ಫೋಸಿಸ್‌ನ ಎನ್.ಆರ್. ನಾರಾಯಣಮೂರ್ತಿ, ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರಿಗೆ ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಜುಲೈ

ಜು.1 ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರಿಗೆ ಮಾಸಿಕ 2ಸಾವಿರ ರೂ. ಸಂಕಷ್ಟ ಭತ್ಯೆ

ಜು.2 ಗುಂಡ್ಲುಪೇಟೆ : ಹುಲಿ ದಾಳಿಯಿಂದ ಇಬ್ಬರಿಗೆ ತೀವ್ರ ಗಾಯ

ಜು.3 ಕೊಡಗಲ್ಲಿ ಭೂಕುಸಿತ, ಧರೆಗುರುಳಿದ ಮರಗಳು

ಜು.3 ಮೈಸೂರು : ಇಬ್ಬರ ಮೇಲೆ ದಾಳಿ ನಡೆಸಿದ್ದ ಹೆಣ್ಣು ಹುಲಿ ಸೆರೆ

ಜು.3 ದಿ ಮಹಾಭಾರತ ನಿರ್ದೇಶಕ ಪೀಟರ್ ಬ್ರೂಕ್ ನಿಧನ

ಜು.5 ಸರಳ ವಾಸ್ತು ಖ್ಯಾತಿಯ ಚಂದ್ರಶೇಖರ ಗುರೂಜಿ ಹತ್ಯೆ

ಜು.5 ಮೈಸೂರು : ಚಾಲಕನಿಗೆ ಇರಿದು ಕಾರಿನೊಂದಿಗೆ ಪರಾರಿ

ಜು.5 ರಾಜ್ಯದಲ್ಲಿ ರೈತ ಶಕ್ತಿಗೆ 400 ಕೋಟಿ ರೂ. ಅನುದಾನ

ಜು.5 ಸರಳ ವಾಸ್ತು ಖ್ಯಾತಿಯ ಚಂದ್ರಶೇಖರ ಗುರೂಜಿ ಹತ್ಯೆ

ಜು.6 ಮೈಸೂರಲ್ಲಿ ವಿವೇಕ ಸ್ಮಾರಕಕ್ಕೆ ಅಡಿಗಲ್ಲು

ಜು.7 ಮೈಸೂರು : ರೈಲಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಂದ ಹಣ ವಸೂಲಿ : ನಕಲಿ ಟಿಟಿಇ ಬಂಧನ

ಜು.8 ಜಪಾನ್ ಮಾಜಿ ಪ್ರಧಾನಿ ಶಿಂಜೋ ಅಬೆ ಹತ್ಯೆ

ಜು.9 ರಂಗನತಿಟ್ಟು ಪಕ್ಷಿಧಾಮದ ದೋಣಿ ವಿಹಾರ ತಾತ್ಕಾಲಿಕ ಬಂದ್

ಜು.9 ಮೈಸೂರಿನ ಎಲ್ಲಾ ಅಮರನಾಥ ಯಾತ್ರಿಗಳು ಸುರಕ್ಷಿತವಾಗಿ ಆಗಮನ

ಜು.10 ಬೆಂಗಳೂರಿಗೆ ಆಗಮಿಸಿದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು

ಜು.10 ಅಬ್ಬರಿಸಿದ ಮಳೆ : ತತ್ತರಿಸಿದ ಕೊಡಗು

ಜು.11 ಮೈಸೂರು: ಕಾರುಗಳ ಮುಖಾಮುಖಿ ಡಿಕ್ಕಿ: ಮಾವ-ಅಳಿಯ ಸಾವು

ಜು.12 ಕೊಡಗು ಮಳೆ ಹಾನಿ ಪ್ರದೇಶಕ್ಕೆ ಸಿಎಂ ಬೊಮ್ಮಾಯಿ ಭೇಟಿ

ಜು.13 ಚಾಮರಾಜನಗರ : ವೈಭವದ ಚಾಮರಾಜೇಶ್ವರ ರಥೋತ್ಸವ

ಜು.13 ಮೈಸೂರು ಹಸಿರು, ಸ್ವಚ್ಛ ರಾಜಧಾನಿ ಆಗಲಿ : ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ

ಜು.14 ಮೈಸೂರು : ಎದುರಾಳಿಯ ಬಲವಾದ ಪಂಚ್: ಮೈಸೂರಿನ ಕಿಕ್ ಬಾಕ್ಸರ್ ಕುಸಿದು ಬಿದ್ದು ಸಾವು

ಜು.15 ಸಿದ್ದರಾಮಯ್ಯ ತವರಲ್ಲೇ ಮೊಳಗಿತು ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಣೆ

ಜು.17 ಸಿಂಗಾಪುರ ಓಪನ್ ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ. ಸಿಂಧೂ ಚಾಂಪಿಯನ್

ಜು.18 ರಾಜ್ಯದಲ್ಲಿ ಭಿಕ್ಷಾಟನೆ ನಿಷಿದ್ಧ: ಸಚಿವ ಕೋಟಾ ಶ್ರೀನಿವಾಸ ಪೂಜಾರಿ

ಜು.19 ಅದ್ದೂರಿ ದಸರಾ ಆಚರಣೆ : ಸಿಎಂ ಬೊಮ್ಮಾಯಿ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ನಿರ್ಧಾರ

ಜು.20 ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ವರ್ಧಂತಿ ಉತ್ಸವ ಸಿಎಂ ಬೊಮ್ಮಾಯಿ, ರಾಜವಂಶಸ್ಥರು ಭಾಗಿ

ಜು.20 ಕೆ.ಆರ್.ಎಸ್., ಕಬಿನಿ ಜಲಾಶಯಕ್ಕೆ ಸಿಎಂ ಬೊಮ್ಮಾಯಿ ಬಾಗಿನ ಸಮರ್ಪಣೆ

ಜು.22 ಚುನಾವಣಾ ರಾಜಕೀಯಕ್ಕೆ ಯಡಿಯೂರಪ್ಪ ಗುಡ್‌ಬೈ

ಜು.22 ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ :ಸಂಪುಟ ಸಭೆ ನಿರ್ಣಯ

ಜು.23 ಮೈಸೂರಲ್ಲಿ ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ ಗ್ರಂಥ ಬಿಡುಗಡೆ

ಜು.25 15ನೇ ರಾಷ್ಟ್ರಪತಿಯಾಗಿ ಮುರ್ಮು ಪ್ರಮಾಣ ವಚನ ಸ್ವೀಕಾರ

● ಜು.1 ಮೊದಲ ಆಷಾಢ ಶುಕ್ರವಾರ ಸಾವಿರಾರು ಭಕ್ತರು ಚಾಮುಂಡೇಶ್ವರಿ ದರ್ಶನ



● ಜು.2 ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆ, ಜಲಾವೃತ



● ಜು.21 ಭಾರತದ ನೂತನ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಆಯ್ಕೆ



ಜು.26 ಸುಳ್ಯಾದಲ್ಲಿ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ

ಜು.27 ಸುಳ್ಯಾದಲ್ಲಿ ಬಿಜೆಪಿ ಮುಖಂಡನ ಬರ್ಬರ ಹತ್ಯೆ ಹಿನ್ನೆಲೆ : ದೊಡ್ಡಬಳ್ಳಾಪುರ ಜನೋತ್ಸವ ರದ್ದು

ಜು.28 ಪ್ರವೀಣ್ ಹತ್ಯೆ ಪ್ರಕರಣ : ಇಬ್ಬರ ಬಂಧನ

ಜು.29 ಮೈಸೂರು-ಬೆಂಗಳೂರು-ಚೆನ್ನೈ ಬುಲೆಟ್ ಟ್ರೈನ್ : ಯೋಜನಾ ವರದಿಗೆ ಕೇಂದ್ರ ಹಸಿರು ನಿಶಾನೆ

ಜು.30 ಹಾಸನದಿಂದ ಬಂದ ಟ್ಯಾಂಕರ್‌ನಲ್ಲಿ 200 ಲೀಟರ್ ಪೆಟ್ರೋಲ್ ನಾಪತ್ತೆ

ಜು.31 ನಂಜನಗೂಡು :ಹಸು ಮೇಯಿಸುತ್ತಿದ್ದ ರೈತರ ಮೇಲೆ ಹುಲಿ ದಾಳಿ : ಓರ್ವ ಸಾವು

ಆಗಸ್ಟ್

ಆ.1 ಹಿಂದುಳಿದ ವರ್ಗಕ್ಕೆ ಸೇರ್ಪಡೆಗೊಳಿಸಲು ಆಗ್ರಹಿಸಿ ವೀರಶೈವ ಲಿಂಗಾಯತರ ಭಾರೀ ಮೆರವಣಿಗೆ

ಆ.2 ವರುಣಾರ್ಭಟಕ್ಕೆ ನಲುಗಿದ ಮಂಡ್ಯ

ಆ.2 ಕೊಡಗಿನಲ್ಲಿ ಬೊಬ್ಬಿರಿಯುತ್ತಿರುವ ಮಳೆ

ಆ.2 ಬೇಟೆಗಾರ ಪ್ರಖ್ಯಾತಿಯ ಬಂಡೀಪುರ ರಾಣಾ ಇನ್ನಿಲ್ಲ

ಆ.4 ಮಂಡ್ಯ : ಹಣ, ಆಭರಣಕ್ಕಾಗಿ ಮಹಿಳೆಯರ ಕೊಂದು ರುಂಡ, ಮುಂಡ ಬೇರ್ಪಡಿಸುತ್ತಿದ್ದ ಸೀರಿಯಲ್ ಕಿಲ್ಲರ್ ಜೋಡಿ ಬಂಧನ

ಆ.4 ಭಾರೀ ಮಳೆಗೆ ಕೊಡಗು ತತ್ತರ : ಹೆದ್ದಾರಿ ಬಂದ್

ಆ.6 ಜಗದೀಪ್ ಧನಕರ್ ನೂತನ ಉಪರಾಷ್ಟ್ರಪತಿ

ಆ.7 ಗಜಪಯಣಕ್ಕೆ ಸಂಭ್ರಮದ ಚಾಲನೆ

ಆ.7 ಕೆಆರ್‌ಎಸ್‌ನಿಂದ ಒಂದು ಲಕ್ಷ ಕ್ಯೂಸೆಕ್ಸ್ ನೀರು ಬಿಡುಗಡೆ

ಆ.8 ಮನೆಗೆ ನುಗ್ಗಿ ಮಗನ ಮುಂದೆಯೇ ರಿಯಲ್ ಎಸ್ಟೇಟ್ ಏಜೆಂಟ್ ಹತ್ಯೆ

ಆ.9 ಅಪ್ರಾಪ್ತ ಮಗನಿಂದಲೇ ತಂದೆಯ ಬರ್ಬರ ಹತ್ಯೆ

ಆ.11 ಮೈಸೂರಲ್ಲಿ ಯುವಜನೋತ್ಸವಕ್ಕೆ ಸಿಎಂ ಚಾಲನೆ

ಆ.11 ಶಿವಮೊಗ್ಗ ಸುಬ್ಬಣ್ಣ ನಿಧನ

ಆ.12 ಸರಗೂರು : ಕಾಡಾನೆ ದಾಳಿಗೆ ಕೇರಳ ಮೂಲದ ರೈತ ಬಲಿ

ಆ.13 ಹಾಸನ ಕೋರ್ಟ್ ಆವರಣದಲ್ಲೇ ಪತ್ನಿ ಕತ್ತು ಸೀಳಿದ ಪತಿ


ಆ.16 ಮೈಸೂರಲ್ಲಿ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಸಂಭ್ರಮ

ಆ.17 ಖ್ಯಾತ ಕ್ಯಾನ್ಸರ್ ವಿಕಿರಣ ತಜ್ಞ ಡಾ. ಎಂ.ಎಸ್. ವಿಶ್ವೇಶ್ವರ ಇನ್ನಿಲ್ಲ

ಆ.18 ಕೊಡಗಲ್ಲಿ ಸಿದ್ದರಾಮಯ್ಯಗೆ ಬಿಜೆಪಿ ಕಾರ್ಯಕರ್ತರ ಘೇರಾವ್, ಮೊಟ್ಟೆ ಎಸೆತ

ಆ.21 ಮಂಡ್ಯ ಉದ್ಯಮಿ ಹನಿಟ್ರ್ಯಾಪ್ ಮಾಡಿ 50 ಲಕ್ಷ ರೂ. ವಸೂಲಿ

● ಆ.10 ಮೈಸೂರು ಅರಮನೆಗೆ ಗಜಪಡೆ ಆಗಮನ



ಆ.22 ಮಂಡ್ಯದಲ್ಲಿ ಚಿನ್ನಾಭರಣಕ್ಕೆ ಮಹಿಳೆ ಕೊಲೆ, ಆದರೆ ಹಂತಕರಿಗೆ ಸಿಕ್ಕಿದ್ದು ಕೇವಲ 10 ರೂ.

ಆ.23 ಮೈಸೂರಲ್ಲಿ ವೀರ ಸಾವರ್ಕರ್ ರಥಯಾತ್ರೆಗೆ ಮಾಜಿ ಸಿಎಂ ಯಡಿಯೂರಪ್ಪ ಚಾಲನೆ

ಆ.26 ಗುಲಾಂ ನಬಿ ಅಜಾದ್ ಕಾಂಗ್ರೆಸ್‌ಗೆ ಗುಡ್‌ಬೈ

ಆ.27 ಚಿತ್ರದುರ್ಗದ ಮುರುಘಾಮಠದ ಮುರುಘಾ ಶರಣರು ಸೇರಿದಂತೆ ಐವರ ವಿರುದ್ಧ ಪೋಕ್ಸೋ ಪ್ರಕರಣ ದಾಖಲು

ಆ.29 ರಾಮನಗರ ಬಳಿ ನದಿಯಾದ ಮೈಸೂರು-ಬೆಂಗಳೂರು ಹೆದ್ದಾರಿ

ಆ.30 ಭಾರೀ ಮಳೆಯಿಂದ ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಾಂತರ ವಿಭಾಗದಲ್ಲಿ ಜಲಪ್ರಳಯ

ಸೆಪ್ಟೆಂಬರ್

ಸೆ.1 ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ ಮುರುಘಾ ಶರಣರ ಬಂಧನ

ಸೆ.2 ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ 'ಐಎನ್‌ಎಸ್ ವಿಕ್ರಾಂತ್' ಪ್ರಧಾನಿ ಮೋದಿ ಲೋಕಾರ್ಪಣೆ

ಸೆ.3 ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ 800 ಕೋಟಿ ರೂ. ಹಗರಣ : ಸಿಬಿಐ ತನಿಖೆಗೆ ಜೆಡಿಎಸ್ ಆಗ್ರಹ

ಸೆ.4 ಟಾಟಾ ಸನ್ಸ್ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಅಪಘಾತದಲ್ಲಿ ಸಾವು

ಸೆ.5 ಚಾಮರಾಜನಗರದಲ್ಲಿ ವರುಣನ ಅಟ್ಟಹಾಸ

ಸೆ.5 ಲಿಜ್ ಟ್ರಸ್ ಬ್ರಿಟನ್ ನೂತನ ಪ್ರಧಾನಿ

ಸೆ.6 ಅರಣ್ಯ ಸಚಿವ ರಮೇಶ್ ಕತ್ತಿ ಇನ್ನಿಲ್ಲ

ಸೆ.6 ನೂತನ ಮೇಯರ್ ಆಗಿ ಶಿವಕುಮಾರ್, ಉಪಮೇಯರ್ ಆಗಿ ಡಾ.ಜಿ.ರೂಪಾ ಆಯ್ಕೆ

ಸೆ.7 ಮೈಸೂರಿನ ಆರ್‌ಬಿಐ ಆವರಣದಲ್ಲಿ ಚಿರತೆ

ಸೆ.8 ಬ್ರಿಟನ್ ರಾಣಿ 2ನೇ ಎಲಿಜಬೆತ್ ಇನ್ನಿಲ್ಲ

ಸೆ.8 ದೆಹಲಿ ಇಂಡಿಯಾ ಗೇಟ್ ಬಳಿ 28 ಅಡಿ ಎತ್ತರದ ಸುಭಾಷ್ ಚಂದ್ರ ಬೋಸ್ ಪ್ರತಿಮೆಯನ್ನು ಪ್ರಧಾನಿ ಮೋದಿ ಅನಾವರಣ

ಸೆ.14 ಆಡಳಿತದಲ್ಲಿ ಕನ್ನಡ ಕಡ್ಡಾಯ : ಸಿಎಂ ಬೊಮ್ಮಾಯಿ ಘೋಷಣೆ

ಸೆ.14 ಕೆಆರ್, ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆ ನವೀಕರಣಕ್ಕೆ 89.50 ಕೋಟಿ ರೂ. ಅನುದಾನ

ಸೆ.14 ಕಿರುತೆರೆ ನಟ ಮಂಡ್ಯ ರವಿಪ್ರಸಾದ್ ನಿಧನ

ಸೆ.15 ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ರಾಜಾರಾಂ ಬಂಧನ

ಸೆ.16 ಯುವ ಸಂಭ್ರಮಕ್ಕೆ ಚಲನಚಿತ್ರ ನಟ ಡಾಲಿ ಧನಂಜಯ ಚಾಲನೆ

ಸೆ.17 ದೇಶದಲ್ಲಿ ಮತ್ತೆ ಚಿತಾ ಯುಗಾರಂಭ : ಆಫ್ರಿಕಾದಿಂದ ಕರೆ ತಂದ 8 ಚಿತಾಗಳಿಗೆ ಮೋದಿ ಸ್ವಾಗತ

ಸೆ. 17 ಇನ್ನಷ್ಟು ಕಾಲ ಪ್ರಧಾನಿ ಮೋದಿಯವರೇ ಪ್ರಧಾನಿಯಾಗಿರಬೇಕು : ಮಾಜಿ ಸಿಎಂ ಎಸ್.ಎಂ. ಕೃಷ್ಣ

ಸೆ. 18 ತಮಿಳು ನಟಿ ದೀಪಾ ಆತ್ಮಹತ್ಯೆ

ಸೆ. 19 ಡಾ. ಜೆ. ಕಮಲಾರಾಮನ್ ನಿಧನ

● ಸೆ.13 ದಸರಾಗೆ ಬಂದ ಲಕ್ಷ್ಮೀಗೆ ಪುತ್ರ ಪ್ರಾಪ್ತಿ



● ಸೆ. 26 ಮೈಸೂರು ದಸರಾ ಉದ್ಘಾಟಿಸಿದ ಮೊದಲ ರಾಷ್ಟ್ರಪತಿ ದ್ರೌಪದಿ ಮುರ್ಮು



ಸೆ. 20 ಮಾತಾ ಅಮೃತಾನಂದಮಯಿ ಅವರ ತಾಯಿ ಧಮಯಂತಿ ನಿಧನ

ಸೆ. 28 ಪಿಎಫ್‌ಐ ಸಂಘಟನೆ ಐದು ವರ್ಷ ನಿಷೇಧ : ಸಿಎಂ ಬೊಮ್ಮಾಯಿ

ಸೆ. 29 ಒಲಂಪಿಕ್ ಪದಕ ವಿಜೇತ ಕುಸ್ತಿ ಪಟು ಸಾಕ್ಷಿ ಮಲ್ಲಿಕ್‌ರಿಂದ ದಸರಾ ಕ್ರೀಡಾಕೂಟ ಉದ್ಘಾಟನೆ

ಅಕ್ಟೋಬರ್

ಅ.1 ಮೈಸೂರು ಜಿಲ್ಲೆಯಲ್ಲಿ ರಾಹುಲ್ ಗಾಂಧಿ ಐಕ್ಯತಾ ಯಾತ್ರೆ

ಅ.2 ಮೈಸೂರು ಪ್ರವೇಶಿಸಿದ ಭಾರತ್ ಐಕ್ಯತಾ ಯಾತ್ರೆ, ಮೈಸೂರು ಅರಮನೆ ಎದುರು ರಾಹುಲ್ ವಾಸ್ತವ್ಯ

ಅ.3 ಮೈಸೂರಲ್ಲಿ ರಾಹುಲ್ ಗಾಂಧಿ ಪಾದಯಾತ್ರೆ, ಚಾಮುಂಡೇಶ್ವರಿ ದರ್ಶನ ಪಡೆದ ರಾಹುಲ್

ಅ.7 ಈಗ ಟಿಪ್ಪು ಎಕ್ಸ್‌ಪ್ರೆಸ್ 'ಒಡೆಯರ್ ಎಕ್ಸ್‌ಪ್ರೆಸ್', ತಾಳಗುಪ್ಪ ಎಕ್ಸ್‌ಪ್ರೆಸ್ 'ಕುವೆಂಪು ಎಕ್ಸ್‌ಪ್ರೆಸ್'

ಅ.8 ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ : ಸಂಪುಟ ಅಸ್ತು

ಅ.9 ಭಕ್ತಸಾಗರದ ನಡುವೆ ಚಾಮುಂಡೇಶ್ವರಿ ಭವ್ಯ ರಥೋತ್ಸವ

ಅ.10 ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಇನ್ನಿಲ್ಲ

ಅ.11 ಶ್ರದ್ಧಾಭಕ್ತಿಯಿಂದ ನೆರವೇರಿದ ಚಾಮುಂಡೇಶ್ವರಿ ಅಮ್ಮನ ತೆಪ್ಪೋತ್ಸವ

ಅ.12 ಗಾಂಧೀಜಿ ಪಾದದ ದೂಳಿಗೆ ನೆಹರೂ ಸಮ : ಸಿಎಂ ಬೊಮ್ಮಾಯಿ

ಅ.13 ಮಳವಳ್ಳಿಯಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ, ಹತ್ಯೆ ಪ್ರಕರಣ: ಟ್ಯೂಷನ್ ಟೀಚರ್ ಕಾಂತರಾಜು ಬಂಧನ

ಅ.15 ಮೈಸೂರಿನ ಎಲೆ ತೋಟ ಬಳಿ ದೈತ್ಯ ಮೊಸಳೆ ಪ್ರತ್ಯಕ್ಷ

ಅ.15 ವರುಣಾರ್ಭಟ : ಸಕ್ಕರೆ ನಾಡು ತತ್ತರ

ಅ.16 ಬೊಮ್ಮಾಯಿ ಅವರೇ ಮುಂದಿನ ಸಿಎಂ ಅಭ್ಯರ್ಥಿ : ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಘೋಷಣೆ

ಅ.17 ರಾಜಕೀಯ ನಿವೃತ್ತಿ ಘೋಷಿಸಿದ ಹಿರಿಯ ಮುತ್ಸದಿ ರಾಜಕಾರಣಿ ಸಂಸದ ವಿ. ಶ್ರೀನಿವಾಸ ಪ್ರಸಾದ್

ಅ.18 ಮೈಸೂರು ಅರಮನೆ ಗೋಡೆ ಕುಸಿತ

ಅ.20 ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ರಾಜೀನಾಮೆ

ಅ.21 ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಕುಸಿತ

ಅ.21 ಚಾಮುಂಡಿಬೆಟ್ಟದಲ್ಲಿ ಭೂಕುಸಿತ

ಅ.22 ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಪ್ರತ್ಯಕ್ಷ

ಅ.23 ಟಿ20 ವಿಶ್ವಕಪ್ :ಪಾಕಿಸ್ತಾನದ ವಿರುದ್ಧ ವಿರಾಟ್ ಅಬ್ಬರ, ಪಾಕ್ ತತ್ತರ

ಅ.24 ರಿಷಿ ಸುನಕ್ ಬ್ರಿಟನ್ ನೂತನ ಪ್ರಧಾನಿ

ಅ.27 ಮೈಸೂರು ಜಿಲ್ಲಾಧಿಕಾರಿಯಾಗಿ ಡಾ. ಕೆ.ವಿ. ರಾಜೇಂದ್ರ ಅಧಿಕಾರ ಸ್ವೀಕಾರ

ಅ.28 'ಅಪ್ಪು' ಕೊನೆ ಚಿತ್ರ ಗಂಧದಗುಡಿ ಬಿಡುಗಡೆ

ಅ.30 ಮೈಸೂರಿನ ಡಿ. ಮಾದೇಗೌಡ, ಪ್ರೊ. ಕೃಷ್ಣೇಗೌಡ, ಮಾದಮ್ಮ, ಅ.ರಾ.ಮಿತ್ರ, ಗಣೇಶ್ ತಿಮ್ಮಯ್ಯ ಸೇರಿದಂತೆ 67 ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಘೋಷಣೆ

ಅ.30 ಆರ್‌ಎಸ್‌ಎಸ್ ಜ್ಯೇಷ್ಠ ಪ್ರಚಾರಕ ಚಂದ್ರಶೇಖರ ಭಂಡಾರಿ ನಿಧನ

ಅ.30 ಗುಜರಾತ್‌ನಲ್ಲಿ ತೂಗು ಸೇತುವೆ ಕುಸಿದು 90 ಮಂದಿ ಸಾವು

ನವೆಂಬರ್

ನ.2 ಬೆಂಗಳೂರಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಪ್ರಧಾನಿ ಮೋದಿ ಚಾಲನೆ

ನ.3 ನಾಪತ್ತೆಯಾಗಿದ್ದ ಶಾಸಕ ರೇಣುಕಾಚಾರ್ಯ ಸಹೋದರನ ಪುತ್ರ ಶವವಾಗಿ ಪತ್ತೆ

ನ.4 ಕಾರುಹರಿಸಿ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ

ನ.6 ಬೆಂಗಳೂರಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಅದ್ದೂರಿ ಸ್ವಾಗತ

ನ.8 ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ ಪ್ರಕರಣ : ಇಬ್ಬರ ಬಂಧನ

ನ.8 ಕನ್ನಡ ಚಿತ್ರರಂಗದ ಹಿರಿಯ ನಟ ಲೋಹಿತಾಶ್ವ ನಿಧನ

ನ.11 ನಾಡಪ್ರಭು ಕೆಂಪೇಗೌಡರ ಕಲ್ಪನೆಯಂತೆ ಅಭಿವೃದ್ಧಿ : ಮೈಸೂರು-ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್, ಕೆಂಪೇಗೌಡರ ಪ್ರತಿಮೆ ಅನಾವರಣಗೊಳಿಸಿ ಪ್ರಧಾನಿ ಮೋದಿ

ನ.12 ಹೆಚ್.ಡಿ. ಕೋಟೆಯಲ್ಲಿ ಉರುಳಿಗೆ ಹೆಣ್ಣು ಹುಲಿ ಬಲಿ

ನ.17 ಮೈಸೂರಿನ ಎಲೆತೋಟದಲ್ಲಿ ಸೆರೆ ಸಿಕ್ಕ ಮೊಸಳೆ

ನ.18 ಕೋಲಾರದಲ್ಲಿ ಜೆಡಿಎಸ್ ಪಂಚಯಾತ್ರೆಗೆ ಹೆಚ್.ಡಿ. ದೇವೇಗೌಡರಿಂದ ಚಾಲನೆ

ನ.20 ಉಗ್ರ ಶಾರೀಖ್ : ಮಂಗಳೂರು ಕುಕ್ಕರ್ ಬಾಂಬ್ ಸೃಷ್ಟಿಯಾಗಿದ್ದೇ ಮೈಸೂರಲ್ಲಿ

ನ.23 ಕಾಡಾನೆ ದಾಳಿಗೆ ಭವಿಷ್ಯದ ಅಂಬಾರಿ ಆನೆ ಗೋಪಾಲಸ್ವಾಮಿ ಬಲಿ

● ನ.20 ಫಿಫಾ ಫುಟ್‌ಬಾಲ್ ವಿಶ್ವಕಪ್‌ಗೆ ಅದ್ದೂರಿ ಚಾಲನೆ



ನ.23 ಮೈಸೂರು : ಬಿಹಾರ ಮೂಲದ ಅತ್ಯಾಚಾರಿಗೆ 43 ವರ್ಷ ಜೈಲು ಶಿಕ್ಷೆ

ನ.28 ಮೈಲ್ಯಾಕ್ ಉತ್ತೇಜನಕ್ಕೆ ಸರ್ಕಾರ ಬದ್ಧ : ಸಿಎಂ ಬೊಮ್ಮಾಯಿ

ನ.29 ಬಾಲಕಿ ಅಪಹರಣದ ಆರೋಪಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಜೀಪಿನಿಂದ ಹಾರಿ ಸಾವು

ನ.30 ಪಿಎಫ್‌ಐ ನಿಷೇಧಕ್ಕೆ ಕೋರ್ಟ್ ಅಸ್ತು

ಡಿಸೆಂಬರ್

ಡಿ. 1 ಮದ್ದೂರು : ಕೌಟುಂಬಿಕ ಕಲಹದಿಂದ ವೇಸತ್ತ ನರ್ಸ್ ಮೂವರು ಮಕ್ಕಳೊಂದಿಗೆ ಆತ್ಮಹತ್ಯೆ

ಡಿ. 1 ತಿ. ನರಸೀಪುರ : ಚಿರತೆಗೆ ವಿದ್ಯಾರ್ಥಿನಿ ಬಲಿ

ಡಿ. 2 ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪಗೆ ಅಂತಾರಾಷ್ಟ್ರೀಯ ಫೆಲೋಶಿಪ್

ಡಿ. 6 ಕೈಗಾರಿಕಾ ಪ್ರದೇಶಕ್ಕೆ ರೈತರಿಂದ ಬಲವಂತವಾಗಿ ಜಮೀನು ಸ್ವಾಧೀನ ಇಲ್ಲ

ಡಿ. 8 ಪ್ರಧಾನಿ ಮೋದಿ ತವರು ಗುಜರಾತ್‌ನಲ್ಲಿ ಬಿಜೆಪಿಗೆ ಭರ್ಜರಿ ಗೆಲುವು

ಡಿ. 10 ಬಹುರೂಪಿ ರಂಗೋತ್ಸವಕ್ಕೆ ಸಿಎಂ ವಿಧ್ಯುಕ್ತ ಚಾಲನೆ

ಡಿ. 13 ಚಾಮರಾಜನಗರ ಜಿಲ್ಲೆಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲು 1100 ಕೋಟಿಗೆ ಸದ್ಯವೇ ಸಂಪುಟ ಅನುಮೋದನೆ : ಸಿಎಂ

ಡಿ. 13 ಗುಂಡ್ಲುಪೇಟೆ : ಲಾರಿ ಡಿಕ್ಕಿ : ಸ್ಥಳದಲ್ಲೇ ಕಾಡಾನೆ ಸಾವು

ಡಿ. 14 ನಟಿ ಅಭಿನಯಾಗೆ 2 ವರ್ಷ ಜೈಲು ಶಿಕ್ಷೆ

ಡಿ. 17 ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಮೊಳಗಿದ ಹನುಮ ಘೋಷ

ಡಿ. 18 ಭಾರತದ ಸರ್‌ಗಂ ಮಿಸೆಸ್ ವರ್ಲ್ಡ್

ಡಿ. 22 ಮಧ್ಯ ಪ್ರದೇಶಕ್ಕೆ ಧುಬಾರೆ ಅರಣ್ಯ ಪ್ರದೇಶದಿಂದ ಐದು ಸಾಕಾನೆ ಶಿಫ್ಟ್

ಡಿ. 23 ತಿ. ನರಸೀಪುರ : ಇಬ್ಬರು ವಿದ್ಯಾರ್ಥಿಗಳ ಬಲಿ ಪಡೆದ ಚಿರತೆ ಸೆರೆ

ಡಿ. 24 ಮೈಸೂರಲ್ಲಿ ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಡಿ. 24 ಮೇಲುಕೋಟೆಯಲ್ಲಿ ಜೆಡಿಎಸ್ ಪಂಚರತ್ನ ಯಾತ್ರೆ

ಡಿ. 25 ಖಾಸಗಿ ಸಹಕಾರಿ ನೌಕರರಿಗೆ ಯಶಸ್ವಿನಿ ವಿಸ್ತರಣೆ

ಡಿ. 27 ಕಡಕೊಳ ಬಳಿ ಮೋದಿ ಸಹೋದರ ಪ್ರಹ್ಲಾದ್ ಮೋದಿ, ಕುಟುಂಬ ಸದಸ್ಯರಿದ್ದ ಕಾರು ಅಪಘಾತ

ಡಿ. 28 ಪ್ರಧಾನಿ ಮೋದಿ ತಾಯಿ ಆಸ್ಪತ್ರೆಗೆ ದಾಖಲು

● ಡಿ. 13 ರಾಮನಗರದ ರಾಮದೇವರಬೆಟ್ಟ ಅಯೋಧ್ಯೆಯಾಗಿ ಪರಿವರ್ತನೆ: ಸಿಎಂ



● ಡಿ. 30 ಪ್ರಧಾನಿ ಮೋದಿಗೆ ಮಾತೃವಿಯೋಗ



ಹೊಸವರ್ಷ: ಮೇಲುಕೋಟೆ ಚಲುವನಾರಾಯಣಸ್ವಾಮಿ ದೇಗುಲದಲ್ಲಿ ಭಕ್ತಸಾಗರ



ಮೇಲುಕೋಟೆ,ಜ.1– ಇಲ್ಲಿನ ಶ್ರೀಚಲುವನಾರಾಯಣಸ್ವಾಮಿ ದೇವಾಲಯದಲ್ಲಿ ಹೊಸವರ್ಷದ ಮೊದಲ ದಿನ ಭಾನುವಾರ ಭಕ್ತರಿಂದ ತುಂಬಿತ್ತು. ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಭಕ್ತರು ಚಲುವನಾರಾಯಣಸ್ವಾಮಿ ಮತ್ತು ಬೆಟ್ಟದೊಡೆಯ ಕುಂತಸಿಗ್ರಿಯ ದರ್ಶನ ಪಡೆದರು.

ಪಂಚಕಲ್ಯಾಣಿ, ಯೋಗನರಸಿಂಹಸ್ವಾಮಿ ಬೆಟ್ಟ, ಅಕ್ಕ–ತಂಗಿ ಕೊಳ ಸೇರಿ ಎಲ್ಲಾ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಹೆಚ್ಚಿದ್ದರು. ಹೊಸವರ್ಷದ ಮೊದಲ ದಿನ ಚಲುವನಾರಾಯಣನದರ್ಶನದಿಂದ ಇಡೀ ವರ್ಷ ಉಲ್ಲಾಸದಾಯಕವಾಗಿರುತ್ತದೆ ಎಂಬ ನಂಬಿಕೆ ಇದೆ. ಭಕ್ತರು ಮುಂಜಾನೆಯಿಂದ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ದೇವಾಲಯದ ಗೋಪುರದ ಬಾಗಿಲನ್ನು ತಳಿರುತೋರಣ, ಬಾಳೆ ದಿಂಡುಗಳಿಂದ ಸಿಂಗಾರಿಸಲಾಗಿತ್ತು. ದೇವಾಲಯದ ಬಳಿಗೆ ವಾಹನ ಪ್ರವೇಶ ನಿಷೇಧಿಸಿದ್ದ ಪೊಲೀಸರು, ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದ ಮೈದಾನ ಸೇರಿದಂತೆ ಇತರ ಕಡೆ ವಾಹನ ನಿಲುಗಡೆ ಅವಕಾಶ ಮಾಡಿಕೊಟ್ಟಿದ್ದರು.

ಯತಿರಾಜದಾಸರ್ ಗುರುಪೀಠದಲ್ಲಿ ಹಾಗೂ ಆಂಧ್ರದ ಚಿನ್ನಜೀಯರ್ ಮಠದಲ್ಲಿ ಭಕ್ತರಿಗೆ ಅನ್ನದಾನದ ವ್ಯವಸ್ಥೆ ಮಾಡಲಾಗಿತ್ತು. ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಭಕ್ತರಿಗೆ ಅನ್ನದಾನ ಏರ್ಪಡಿಸಿದ್ದರು.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಸುಮಾರಾಣಿ ದರ್ಶನಕ್ಕೆ ಸುಗಮ ವ್ಯವಸ್ಥೆ ಮಾಡಿದ್ದರು.



ಮಂಡ್ಯದಲ್ಲೂ ಹೊಸ ವರ್ಷಾಚರಣೆ

ಮಂಡ್ಯ, ಜ.1– ಸಕ್ಕರೆ ನಾಡು ಮಂಡ್ಯದಲ್ಲಿ 2023ರ ನೂತನ ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲಾಗಿದೆ.

ಶನಿವಾರ ರಾತ್ರಿ 7 ಗಂಟೆಗೆ ಮಂಡ್ಯ ನಗರ ಸೇರಿದಂತೆ ಹಲವೆಡೆ ಇರುವ ಕ್ಲಬ್‌ಗಳು, ಪಬ್‌ಗಳು, ರೆಸ್ಟೋರೆಂಟ್‌ಗಳು ಭರ್ತಿಯಾಗಿದ್ದವು. ಮಧ್ಯ ರಾತ್ರಿ 1 ರವರೆಗೂ ಕ್ಲಬ್‌ಗಳನ್ನು ತೆರೆಯಲು ಅವಕಾಶ ಕೊಡಲಾಗಿತ್ತು. ಜೊತೆಗೆ 12ಕ್ಕೆ ಎಲ್ಲೆಡೆ ಪಟಾಕಿ ಹೊಡೆದು ಹೊಸ ವರ್ಷವನ್ನು ಯುವಕರು ಬರಮಾಡಿಕೊಂಡರು.

ಇನ್ನು ಮಂಡ್ಯದ ಹಲವು ದೇವಾಲಯಗಳು ಭಾನುವಾರ ತುಂಬಿದ್ದವು. ಮುಖ್ಯವಾಗಿ ಶ್ರೀರಂಗಪಟ್ಟದ ನಿಮಿಷಾಂಭ, ಕರಿಘಟ್ಟದ ವೆಂಕಟೇಶ್ವರ, ರಂಗನಾಥ ದೇಗುಲಗಳಲ್ಲಿ ಭಕ್ತಸಾಗರ ಹರಿದು ಬಂದರೆ, ಮೇಲುಕೋಟೆಯ ಚಲುವನಾರಾಯಣ ಸ್ವಾಮಿ, ಆದಿಚುಂಚನಗಿರಿಯ ಭೈರವೇಶ್ವರ ದೇಗುಲ, ಮಳವಳ್ಳಿಯ ಮತ್ತೀತಾಳೇಶ್ವರ ದೇಗುಲ, ಕೆ.ಎಂ. ದೊಡ್ಡಿಯ ಆತ್ಮಲಿಂಗೇಶ್ವರ ದೇಗುಲ, ಮದ್ದೂರಿನ ಮದ್ದೂರಮ್ಮ, ವೈದ್ಯನಾಥೇಶ್ವರ, ಹೊಳೆ ಆಂಜನೇಯ, ಕೆ.ಆರ್.ಪೇಟೆಯ ಕಲ್ಲಹಳ್ಳಿಯ ಭೂವರಹನಾಥ ದೇಗುಲ, ಮಂಡ್ಯದ ಅರ್ಕೇಶ್ವರ ದೇಗುಲಗಳಲ್ಲಿ ಭಕ್ತ ಸಾಗರವೇ ನೆರೆದಿತ್ತು.

ಜ.4ರಂದು 5ನೇ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನಾಧ್ಯಕ್ಷೆಯಾಗಿ ಡಾ.ಎಚ್.ಆರ್.ಕನ್ನಿಕಾ ಆಯ್ಕೆ



ಮಂಡ್ಯ, ಜ.1– ನಗರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜ.4ರಂದು ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮಂಡ್ಯ ನಗರ 5ನೇ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಡಿಸಲಾಗಿದೆ.

ಯುವ ಸಾಹಿತಿ ನವೋದಯ ತರಬೇತಿ ಸಂಸ್ಥೆಯ ಅಧ್ಯಕ್ಷೆ ಡಾ.ಎಚ್.ಆರ್.ಕನ್ನಿಕಾ ಅವರನ್ನು ಸಮ್ಮೇಳನಾಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷರೂ ಆದ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮ್ಮೇಳನ ಹಲವು ವಿಶೇಷತೆಗಳನ್ನು ಹೊಂದಿದೆ. ಅದರಲ್ಲೂ ಮಹಿಳೆಯರಿಗಾಗಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಬೆಂಗಳೂರು ಕಿದ್ವಾಯಿ ಆಸ್ಪತ್ರೆ ಸಹಕಾರದಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಅಂಬೇಡ್ಕರ್ ಭವನದಲ್ಲಿ ಸ್ತನ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್ ತಪಾಸಣೆ, ಕಿಮ್ಸ್ ಆಸ್ಪತ್ರೆ ಸಹಕಾರದೊಂದಿಗೆ ಕಣ್ಣು ಮತ್ತು ದಂತ ತಪಾಸಣೆ, ಎಸ್.ಡಿ. ಜಯರಾಂ ಆಸ್ಪತ್ರೆ ಸಹಯೋಗದಲ್ಲಿ ಮೊಳೆರೋಗ, ಮಧು ಮೇಹ, ರಕ್ತದೊತ್ತಡ ತಪಾಸಣೆ ಮಾಡಲಾಗು ವುದು ಎಂದು ವಿವರಿಸಿದರು.

ಜಿಲ್ಲಾಡಳಿತದ ಸಹಯೋಗದಲ್ಲಿ ಆಯುಷ್ಮಾನ್ ಭಾರತ್ ಕಾರ್ಡ್ ವಿತರಣೆ, ಮತದಾರರ ಗುರುತಿನ ಚೀಟಿ ಪರಿಷ್ಕರಣೆ ಹಾಗೂ ಆಧಾರ್ ಸಂಖ್ಯೆ ಜೋಡಣೆ ನಮೂನೆ ಅರ್ಜಿ ಸ್ವೀಕರಿಸಲಾಗುವುದು. ಪಡಿತರ ಚೀಟಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಅರ್ಹರಿಗೆ ಮಾಸಾಶನವನ್ನು ಮಾಡಿಸಿಕೊಡಲಾಗುವುದು. ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು ಮಳಿಗೆಗಳನ್ನು ತೆರೆಯಲಾಗುವುದು. ಅಲ್ಲಿ ತಿಂಡಿ ತಿನಿಸು ಮಾರಾಟಕ್ಕೆ ಅವಕಾಶ ನೀಡಲಾಗುವುದು ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಸಿ.ಕೆ.ರವಿಕುಮಾರ ಮಾತನಾಡಿ, ಅಂದು ಬೆಳಗ್ಗೆ 8.30ಕ್ಕೆ ಧ್ವಜಾರೋಹಣ ನೆರವೇರಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಗುವುದು. 10.30ಕ್ಕೆ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು ಉದ್ಘಾಟಿಸಲಿದ್ದಾರೆ. ಸಿದ್ದಪ್ಪಾಜಿ ಕಥಾ ಪ್ರಸಂಗ, ವಿಶೇಷ ಉಪನ್ಯಾಸ, ಖ್ಯಾತ ಹರಟೆ ಕಲಾವಿದರಿಂದ ಹಾಸ್ಯಗೋಷ್ಠಿ, ಸಮೂಹ ನೃತ್ಯವಿರಲಿದೆ. ಸಂಜೆ 5.30ಕ್ಕೆ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅಧ್ಯಕ್ಷತೆಯಲ್ಲಿ ಸಮಾರೋಪ ಹಾಗೂ ಸನ್ಮಾನ ಸಮಾರಂಭ ಇದೆ ಎಂದರು. ಕಸಾಪ ಜಿಲ್ಲಾ ಕೋಶಾಧ್ಯಕ್ಷ ಬಿ.ಎಂ. ಅಪ್ಪಾಜಪ್ಪ, ನಗರ ಘಟಕದ ಅಧ್ಯಕ್ಷೆ ಸುಜಾತಾ ಕೃಷ್ಣ, ಮಂಡ್ಯ ತಾಲೂಕು ಅಧ್ಯಕ್ಷ ಮಂಜು ಮುತ್ತೇಗೆರೆ, ಚಂದ್ರಕುಮಾರ್ ಗೋಷ್ಠಿಯಲ್ಲಿದ್ದರು.



ಶ್ರೀರಂಗಪಟ್ಟಣದ ಬೆಳಗೊಳ ಗ್ರಾಮದ ಶ್ರೀ ಸ್ವಾಮಿನಾರಾಯಣ ಗುರುಕುಲ ಅಂತಾರಾಷ್ಟ್ರೀಯ ಶಾಲೆಯಲ್ಲಿ 2022ರ ಗುರುಕುಲ ಜ್ಞಾನ ಮೇಳವನ್ನು ಜಯಪ್ರಕಾಶ್ ರಾವ್, ಚಲನಚಿತ್ರ ಕಲಾವಿದ ಸುಚೇಂದ್ರ ಪ್ರಸಾದ್ ಜ್ಞಾನ ಮೇಳಕ್ಕೆ ಚಾಲನೆ ನೀಡಿದರು. ಜ್ಞಾನ ಮತ್ತು ತಾಂತ್ರಿಕತೆ ಆಧಾರಿತ 300ಕ್ಕೂ ಹೆಚ್ಚು ಮಾದರಿಗಳು ಮೇಳದಲ್ಲಿ ಪ್ರದರ್ಶನಗೊಂಡವು. ಸಂಸ್ಥೆ ಮುಖ್ಯಸ್ಥ ಸತ್ಸಂಗ ಪ್ರಿಯದಾಸ್ ಸ್ವಾಮೀಜಿ, ಶಾಲೆಯ ಪ್ರಾಂಶುಪಾಲ ಹರ್ಷ ಜೋಶಿ, ಶಾಲೆಯ ಸಂಯೋಜಕ ಸತೀಶ್ ಸೇರಿದಂತೆ ಗುರುಕುಲ ಶಿಕ್ಷಕರು ಹಾಜರಿದ್ದರು.

ನಿಧನ



ಕೆ.ಎನ್.ಮಹೇಶ್

ಕಿಕ್ಕೇರಿ, ಜ.1– ಪಟ್ಟಣದ ಅಂಗಡಿ ಬೀದಿ ನಿವಾಸಿ ಕೆ.ಎನ್.ಮಹೇಶ್ (54) ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರಿಯನ್ನು ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆ ರುದ್ರಭೂಮಿಯಲ್ಲಿ ನೆರವೇರಿತು.



ಚಿಕ್ಕಮ್ಮ

ಕಿಕ್ಕೇರಿ, ಜ.1– ಮಾದಿಹಳ್ಳಿ ಗ್ರಾಮದ ಚಿಕ್ಕಮ್ಮ (90) ಭಾನುವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಏಕಾದಶಿ: ಇಂದು ವೆಂಕಟೇಶ್ವರ ದೇವಾಲಯದಲ್ಲಿ ಕಜ್ಜಾಯ ವಿತರಣೆ



ಭಾರತೀನಗರ, ಜ.1– ಕೆ.ಎಂ. ದೊಡ್ಡಿಯ ವೆಂಕಟೇಶ್ವರ ದೇವಾಲಯದಲ್ಲಿ ವೈಕುಂಠ ಏಕಾದಶಿ ಅಂಗವಾಗಿ ಜ.2 ರಂದು ಭಕ್ತರಿಗೆ 8 ಸಾವಿರ ಕಜ್ಜಾಯ, ಹಾಲು, ಬಾಳೆಹಣ್ಣು ವಿತರಿಸಲು ವೆಂಕಟೇಶ್ವರ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

ಸೋಮವಾರ ಬೆಳಗ್ಗೆ 5.30ಕ್ಕೆ ಸರಿಯಾಗಿ ವೈಕುಂಠ ದ್ವಾರ ಪ್ರವೇಶದೊಂದಿಗೆ ಶ್ರೀ ವೆಂಕಟೇಶ್ವರ ಸ್ವಾಮಿಗೆ ಪೂಜೆ ಮತ್ತು ಮಹಾ ಮಂಗಳಾರತಿ, ಬೆಳಗ್ಗೆ 8ಕ್ಕೆ ಸೋಮು ತಂಡದವರಿಂದ ನಾದಸ್ವರ ಕಾರ್ಯಕ್ರಮ, ಮಧ್ಯಾಹ್ನ 3ಕ್ಕೆ ಮದ್ದೂರು ಶೃತಿ ಸಾಗರ ಭಜನಾಮಂಡಳಿ, ಗೀತಾ ಜಗದೀಶ್ ತಂಡದವರಿಂದ ಭಕ್ತಿ ಗೀತೆಗಳ ಕಾರ್ಯಕ್ರಮ, ಸಂಜೆ 6ಕ್ಕೆ ಹರಿಕಥೆ ವಿದ್ವಾನ್ ಕಾರಸವಾಡಿ ಸಚಿನ್ ತಂಡದವರಿಂದ ಶ್ರೀನಿವಾಸ ಕಲ್ಯಾಣ ಕಥಾ ಕಲಾಪೇಕ್ಷೆ ಕಾರ್ಯಕ್ರಮ ಗಳು ಜರುಗಲಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಪೂಜಾರಿ ವೆಂಕಟೇಗೌಡ ತಿಳಿಸಿದ್ದಾರೆ.

ತೆಂಗು ಬೆಳೆ ವಿಮೆಗೆ ಅರ್ಜಿ ಆಹ್ವಾನ

ಮಂಡ್ಯ, ಜ.1– ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ತೆಂಗು ಬೆಳೆ ವಿಮೆಗೆ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

4–5 ವರ್ಷದ ತೆಂಗಿನ ಗಿಡಗಳಿಗೆ ಪ್ರತಿ ಗಿಡಕ್ಕೆ ರೂ.9 ವಾರ್ಷಿಕ ರಂತೆ ಹಾಗೂ 16–60 ವರ್ಷದ ತೆಂಗಿನ ಮರಗಳಿಗೆ ಪ್ರತಿ ಮರಕ್ಕೆ ರೂ.14 ವಾರ್ಷಿಕ ರಂತೆ ವಿಮೆ ಮೊತ್ತ ಪಾವತಿಸಬೇಕಾಗಿದೆ. ಹಾಗೂ ತೆಂಗಿನ ಮರ ಹತ್ತುವ ಕಾಯಕವನ್ನು ಮಾಡುವವರು ರೂ.94 ರಂತೆ ವಾರ್ಷಿಕ ವಿಮೆ ಪಾವತಿಸಿ, ವಿಮೆ ಮಾಡಿಕೊಂಡು, ಮರಣ ಹೊಂದಿದಲ್ಲಿ ರೂ.5 ಲಕ್ಷ ಹಾಗೂ ಅನಾಹುತ ಸಂಬಂಧಿಸಿ ಆಸ್ಪತ್ರೆಗೆ ದಾಖಲಾ ದಲ್ಲಿ ರೂ.2 ಲಕ್ಷಗಳ ವಿಮಾ ಮೊತ್ತವನ್ನು ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಮೊ:9740152186, 9844621365, 9591307753, 9611730343, 6363229914 ಅನ್ನು ಸಂಪರ್ಕಿಸಿ.

ಅಮಿತ್ ಶಾ ಕಾರ್ಯಕ್ರಮಕ್ಕೆ ಮಾಡಿಸಿದ್ದ ಅಡುಗೆಯನ್ನು ಮಣ್ಣಿನಲ್ಲಿ ಹೂತ ಬಿಜೆಪಿಗರು

ಮಂಡ್ಯ, ಜ.1– ಡಿಸೆಂಬರ್ 30ರಂದು ಮಂಡ್ಯ ನಗರದ ಬಾಯ್ಸ್ ಕಾಲೇಜು ಆವರಣದಲ್ಲಿ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆ ಕಾರ್ಯಕ್ರಮಕ್ಕೆ ಮಾಡಿಸಿದ್ದ ಅಡುಗೆಯನ್ನು ನಿರೀಕ್ಷೆಗೆ ತಕ್ಕಂತೆ ಜನ ಬಾರದ ಹಿನ್ನೆಲೆಯಲ್ಲಿ ಮಣ್ಣಿನೊಳಗೆ ಹೂಳಲಾಗಿದೆ. ಈ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ಸಖತ್ ವೈರಲ್ ಆಗಿದ್ದು, ಜೆಡಿಎಸ್ ಈ ವಿಚಾರವನ್ನು ಟೀಕಿಸಿದೆ.

ಸಮಾವೇಶಕ್ಕೆ ಒಂದು ಲಕ್ಷ ಜನ ಸೇರುತ್ತಾರೆ ಎಂಬ ನಿರೀಕ್ಷೆಯನ್ನು ಬಿಜೆಪಿ ಮುಖಂಡರು ಅಂದಾಜು ಮಾಡಿದ್ದರು. ಕಾರ್ಯಕ್ರಮದಲ್ಲಿ 50 ಸಾವಿರ ಆಸನಗಳ ವ್ಯವಸ್ಥೆ ಮಾಡಿ, ಸುಮಾರು ಒಂದು ಲಕ್ಷ ಜನರಿಗೆ ಪಲಾವ್ ಮತ್ತು ಮೊಸರನ್ನ ಮಾಡಿಸಲಾಯಿತು. ಆದರೆ, ಕಾರ್ಯಕ್ರಮಕ್ಕೆ ನಿರೀಕ್ಷೆಯಂತೆ ಜನ ಬಂದಿರಲಿಲ್ಲ.

ಈ ಭಾಗದಲ್ಲಿ ರಾಜಕೀಯ ಸಮಾವೇಶಗಳು ಎಂದರೆ ಬಾಡೂಟವೇ ಫೇಮಸ್ ಆಗಿದ್ದರಿಂದ ವೆಜ್ ಊಟವನ್ನು ಮಾಡಲು ಕೆಲವರು ಮುಂದಾಗಿರಲಿಲ್ಲ. ಇದರಿಂದ 50 ಸಾವಿರ ಜನರಿಗೆ ಮಾಡಿಸಿದ್ದ ಊಟ ಉಳಿದಿತ್ತು.

ನಾಯಕರ ಸೂಚನೆ ಮೇರೆಗೆ ಕೆಲ ಬಿಜೆಪಿ ಕಾರ್ಯಕರ್ತರು ಕತ್ತಲಾಗುತ್ತಿದ್ದಂತೆ ಜೆಸಿಬಿ ಮೂಲಕ ಹಳ್ಳ ತೆಗೆದು ಆಹಾರ ಸುರಿದು ಮಣ್ಣು ಮುಚ್ಚಿಸಿದ್ದಾರೆ. ಇದನ್ನು ಕೆಲವರು ವಿಡಿಯೋ ರೆಕಾರ್ಡ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹರಿ ಬಿಟ್ಟಿದ್ದು, ವೈರಲ್ ಆಗಿದೆ. ಇದು ಜೆಡಿಎಸ್‌ಗೆ ಅಸ್ತ್ರವಾಗಿದ್ದು, ನಿನ್ನೆ ಸುದ್ದಿಗೋಷ್ಠಿ ನಡೆಸಿದ್ದ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ಜನರೇ ಬಾರದೇ ಅಡುಗೆ ತಯಾರಿಸಿ, ಮಣ್ಣಿನಲ್ಲಿ ಮುಚ್ಚಿಸಿದ್ದಾರೆ ಎಂದು ಆರೋಪಿಸಿದ್ದರು.

ನಂ.ಗೂಡಲ್ಲಿ ಲೋಕ ಕಲ್ಯಾಣಾರ್ಥ ಶಿವಶಂಕರಿ ಮಹಾಯಾಗ



ನಂಜನಗೂಡು, ಜ.1– ಶಿವಶಂಕರಿ ಮಹಾಯಾಗ ಸಮಿತಿಯಿಂದ ಶ್ರೀಕಂಠೇಶ್ವರ ದಾಸೋಹ ಭವನದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶಿವಶಂಕರಿ ಮಹಾಯಾಗ ನಡೆಯಿತು.

ಕೇರಳದ ಪಾಲಕ್ಕಾಡ್‌ನ ವ್ಯಾಸಾನಂದ ಶಿವಯೋಗಿ ಗುರೂಜಿ ನೇತೃತ್ವದಲ್ಲಿ ಶನಿವಾರ ಮುಂಜಾನೆಯಿಂದಲೇ ಮಂತ್ರಪಠಣ ಸ್ಥಳಶುದ್ಧಿ ಮತ್ತು ವಿವಿಧ ಧಾರ್ಮಿಕ ಕೈಂಕರ್ಯ ನೆರವೇರಿಸಲಾಯಿತು. ಭಾನುವಾರ ಬೆಳಗ್ಗೆ ಬ್ರಾಹ್ಮೀ ಮಹೂರ್ತದಲ್ಲಿ ಕ್ಷೇತ್ರಾಧಿಪತಿ ಶ್ರೀಕಂಠೇಶ್ವರನ ದೇವಾಲಯದಿಂದ ಅಗ್ನಿತಂದು ಹೋಮಕುಂಡಕ್ಕೆ ಅಗ್ನಿಸ್ಪರ್ಶ ಮಾಡಲಾಯಿತು. ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ 9 ಮಂದಿ ಋತ್ವಿಕರ ತಂಡ ಶಿವಶಂಕರಿ ಮಹಾಯಾಗ ನೆರವೇರಿಸಿದರು. ಕಲಿಕಾಲ ದೋಷ ನಿವಾರಣೆ, ಮಹಾರೋಗ ರುಜಿನ, ಸುನಾಮಿ, ಯುದ್ಧ ಮುಂತಾದ ದುಃಖಗಳಿಂದ ಪ್ರಾಣಿ ಪಕ್ಷಿ ಮತ್ತು ಮನುಷ್ಯ ಕುಲಕ್ಕೆ ಶಾಂತಿ, ನೆಮ್ಮದಿ ದೊರಕಲಿ ಎಂಬ ಸದುದ್ದೇಶದೊಂದಿಗೆ ಪಾಲಕ್ಕಾಡ್‌ನ ವ್ಯಾಸ ಪರಮಾತ್ಮ ಚಾರಿಟಬಲ್ ಟ್ರಸ್ಟ್, ದಕ್ಷಿಣ ಕನ್ನಡ ಜಿಲ್ಲೆಯ ರಾಘವೇಂದ್ರ ಚಾರಿಟಬಲ್ ಟ್ರಸ್ಟ್ ವತಿಯಿಂದ ಲೋಕದ ಶಾಂತಿ ಮತ್ತು ನೆಮ್ಮದಿಗಾಗಿ ಕಳೆದ 30 ವರ್ಷಗಳಿಂದಲೂ ದೇಶದ ವಿವಿಧ ಸ್ಥಳಗಳಲ್ಲಿ ಹಲವಾರು ಯಜ್ಞ ಯಾಗ ನಡೆಯುತ್ತಿದೆ.

ಹೊಸ ವರ್ಷಕ್ಕೆ ಹರಿದು ಬಂದ ಜನಸಾಗರ: ಹೊಸ ವರ್ಷ ಹಾಗೂ ಧನುರ್ಮಾಸ ಅಂಗವಾಗಿ ಶ್ರೀಕಂಠೇಶ್ವರ ದೇವಾಲಯಕ್ಕೆ ರಾಜ್ಯದ ವಿವಿಧ ಮೂಲೆಗಳಿಂದ ಜನಸಾಗರವೇ ಹರಿದು ಬಂದಿತ್ತು.

ದೇವಾಲಯದಲ್ಲಿ ಭಕ್ತರು ಮುಂಜಾನೆ 4 ಗಂಟೆಯಿಂದಲೇ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೆ ತುಲಾಭಾರಸೇವೆ, ಉರುಳು ಸೇವೆ, ಈಡುಗಾಯಿ ಸೇವೆ, ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರಸ್ವಾಮಿಗೆ ಬೆಳ್ಳಿ ಅಂಗಾಂಗಳ ಹರಕೆಯನ್ನು ಹುಂಡಿಗೆ ಹಾಕಿ ಶ್ರದ್ಧಾಭಕ್ತಿಯಿಂದ ಸೇವೆ ಸಲ್ಲಿಸಿ ಭಕ್ತಿ ಮೆರೆದರು.

ಶ್ರೀಕಂಠೇಶ್ವರಸ್ವಾಮಿಗೆ ಚಿನ್ನದ ಕೊಳಗ ತೊಡಿಸಿ, ನಾನಾ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಶ್ರೀಕಂಠೇಶ್ವರಸ್ವಾಮಿ ಅವರಿಗೆ ಪಂಚತೀರ್ಥಗಳ ಅಭಿಷೇಕ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲಾನ್ಯ ಅರ್ಪಣೆ, ಕಲ್ಲು–ಸಕ್ಕರೆ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ನಂತರ ಮಹಾಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ದೇವಾಲಯಕ್ಕೆ ಆಗಮಿಸಿದ್ದ ಭಕ್ತರು ಶಿವಶಂಕರಿ ಮಹಾಯಾಗದಲ್ಲಿ ಭಾಗವಹಿಸಿ ಪೂರ್ಣಾಹುತಿ ಹವಿಸ್ಸನ್ನು ಸಮರ್ಪಿಸಲು ಅವಕಾಶ ಮಾಡಿಕೊಡಲಾಗಿತ್ತು. ಈ ವೇಳೆ ಗಿರೀಶ್ ಭಗವತಿಸ್ವಾಮಿ, ಪ್ರಭಾಕರನಂದ ಸ್ವಾಮೀಜಿ, ಮಮತ, ರವಿಶಂಕರ್, ಲೋಹಿತ್, ಕಿರಣ್, ಲೋಕೇಶ್, ಚೆನ್ನರಾಜ ನಾಯಕ್, ಗಿರಿಧರ್, ರಾಮಚಂದ್ರ ಬೈಕಂಪಾಡಿ ಸೇರಿದಂತೆ ನೂರಾರು ಯಜ್ಞ ಪುರೋಹಿತರು, ವಿವಿಧ ಮಠದ ಪೀಠಾಧಿಪತಿಗಳು, ಸಾಧು ಸಂತರು ಭಾಗವಹಿಸಿದ್ದರು.

ರೋಟರಿ ಸಂಸ್ಥೆಯಿಂದ ರೈತ ದಿನಾಚರಣೆ



ಪಿರಿಯಾಪಟ್ಟಣ, ಜ.1– ರೈತಪರ ಹೋರಾಟದೊಂದಿಗೆ ಗುರುತಿಸಿಕೊಂಡಿರುವ ಮಾಜಿ ಪ್ರಧಾನಿ ದಿ.ಚೌಧ್ರಿ ಚರಣ್ ಸಿಂಗ್ ಅವರ ಹುಟ್ಟುಹಬ್ಬವನ್ನು ರೈತ ದಿನಾಚರಣೆಯಾಗಿ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ರೋಟರಿ ಸಂಸ್ಥೆ ಅಧ್ಯಕ್ಷ ರೋಟೆರಿಯನ್ ಸತ್ಯನಾರಾಯಣ ಅಭಿಪ್ರಾಯಪಟ್ಟರು.

ರೋಟರಿ ಸಂಸ್ಥೆ ಆವರಣದಲ್ಲಿ ರೈತ ದಿನಾಚರಣೆ ಅಂಗವಾಗಿ ಪ್ರಗತಿಪರ ರೈತರ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಚೌಧ್ರಿ ಚರಣ್ ಸಿಂಗ್ ಅವರು ಭೂ ಸುಧಾರಣೆ ಹರಿಕಾರರಾಗಿ ಹೆಚ್ಚಿನ ಪರಿಹಾರ ದೊರಕಿಸಿ ಕೊಡುವ ಮೂಲಕ ಭೂ ಹಿಡುವಳಿ ಕಾಯ್ದೆ ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದ ಅವರು ರೈತ ದಿನಾಚರಣೆ ಅಂಗವಾಗಿ ಪ್ರಗತಿಪರ ರೈತರನ್ನು ಗುರುತಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು.

ರೋಟರಿ ಮಾಜಿ ಗವರ್ನರ್ ಬಿ.ವಿ. ಜವರೇಗೌಡ ಮಾತನಾಡಿ, ಪ್ರಸ್ತುತ ರೈತನ ಬೆಳೆಗೆ ಬೆಲೆ ಇಲ್ಲ. ಆದರೆ ಭೂಮಿಗೆ ಮಾತ್ರ ಬೆಲೆ ಇರುವುದು ನಿಜಕ್ಕೂ ವಿಷಾದ ಎಂದರು.

ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್ ಮಾತನಾಡಿ, ರೋಟರಿ ಸಂಸ್ಥೆ ಎಂದರೆ ಕೇವಲ ಕಣ್ಣು, ಮೂಗು ಸೇರಿದಂತೆ ಆರೋಗ್ಯ ಚಟುವಟಿಕೆಗಳ ಕ್ಯಾಂಪ್‌ಗಳನ್ನು ನಡೆಸುವ ಸಂಸ್ಥೆ ಎಂಬ ಭಾವನೆ ನನಗೂ ಇತ್ತು. ಈ ಸಮಾರಂಭ ಆ ಭಾವನೆ ಮುಕ್ತಗೊಳಿಸಿದೆ. ರೈತರು ತಂಬಾಕು ಬೆಳೆ ಅವಲಂಬಿಸದೆ ಹಣ್ಣು, ಹೂ ಸೇರಿದಂತೆ ಎಲ್ಲಾ ರೀತಿಯ ತೋಟಗಾರಿಕೆ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸದೃಢವಾಗಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ಸಂಸ್ಥೆ ವತಿಯಿಂದ 15 ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ರೋಟರಿ ಸಂಸ್ಥೆ ಸದಸ್ಯರಾದ ಚಂದ್ರು, ಎಂ.ಎಂ.ರಾಜೇಗೌಡ, ನಟರಾಜ್, ಅಣ್ಣಪ್ಪ, ಬಿ.ಆರ್.ಸತೀಶ್ ಕುಮಾರ್, ಕೃಷ್ಣೇಗೌಡ, ಬಸವೇಗೌಡ ಸೇರಿದಂತೆ ನೂರಾರು ರೈತರಿದ್ದರು.

ಕೋಟೆಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ



ಹೆಚ್.ಡಿ.ಕೋಟೆ, ಜ.1– ಪೂರ್ವಿಕರು ತಮ್ಮ ಹಕ್ಕುಗಳಿಗಾಗಿ, ಸ್ವಾಭಿಮಾನ ಹಾಗೂ ಉಳಿವಿಗಾಗಿ 500 ಮಹರ್ ಸೈನಿಕರು, ಪೇಶ್ವೆಗಳ ವಿರುದ್ಧ ಹೋರಾಟ ಮಾಡಿ ಜಯಗಳಿಸಿದ ಸಂಕೇತವೇ ಭೀಮಾ ಕೋರೆಗಾಂವ್ ವಿಜಯೋತ್ಸವ ಎಂದು ಮೈಸೂರಿನ ಬನುಮಯ್ಯ ಕಾಲೇಜಿನ ಆಂಗ್ಲ ಉಪನ್ಯಾಸಕ ಡಾ.ಎಂ.ಟಿ ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಆದಿ ಕರ್ನಾಟಕ ಮಹಾಸಭಾ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮವನ್ನು ಮುಂದಿನ ವರ್ಷ ಅದ್ಧೂರಿಯಾಗಿ ಆಚರಿಸಲು ನನ್ನ ಸಂಪೂರ್ಣ ಸಹಕಾರ ಇದೆ ಎಂದು ತಿಳಿಸಿದರು.

ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಎಚ್.ಸಿ.ನರಸಿಂಹಮೂರ್ತಿ ಮಾತನಾಡಿ ಈ ದೇಶದ ಮೂಲ ನಿವಾಸಿಗಳ ಹೋರಾಟದ ಇತಿಹಾಸವನ್ನು ಮನುವಾದಿಗಳು ನೂರಾರು ವರ್ಷ ಮರೆ ಮಾಡಿದ್ದರು. ಇದನ್ನು ಹೊರ ತೆಗೆಯಲು ಡಾ.ಬಿ.ಆರ್. ಅಂಬೇಡ್ಕರ್ ಅವರ ಅಧ್ಯಯನದಿಂದ ಸಾಧ್ಯವಾಯಿತು ಎಂದರು. ಯಾರು ಬೇಕಾದರು ರಾಜಕೀಯ ಭಾಷಣ ಮಾಡಬಹುದು. ಆದರೆ, ಇತಿಹಾಸ ಮಾತನಾಡಲು ಅದನ್ನು ತಿಳಿದವರು ಮಾತನಾಡಬೇಕು. ಅಂತಹ ಒಂದು ಇತಿಹಾಸ ತಿಳಿದುಕೊಳ್ಳುವ ಕಾರ್ಯಕ್ರಮವನ್ನು ತಾಲೂಕಿನ ಎಲ್ಲರ ಸಹಕಾರದಲ್ಲಿ ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಅಂತರಸಂತೆ ಬುದ್ಧ ವಿಹಾರದ ಗೌತಮಿ ಬಂತೆ ಆಶೀರ್ವಚನ ನೀಡಿದರು. ಜಿಪಂ ಮಾಜಿ ಸದಸ್ಯರಾದ ವೆಂಕಟ ಸ್ವಾಮಿ, ಚಿಕ್ಕವೀರನಾಯಕ, ಸರಗೂರು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಮಾಜಿ ಅಧ್ಯಕ್ಷರಾದ ಮುದ್ದಮಲ್ಲಯ್ಯ, ಮಲಾರ ಪುಟ್ಟಯ್ಯ, ಸೋಗಹಳ್ಳಿ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಮೂರ್ತಿ, ಮುಖಂಡರಾದ ಎಂ.ಡಿ. ಮಂಚಯ್ಯ, ಅಕ್ಬರ್ ಪಾಷ, ಪರಶಿವ ಮೂರ್ತಿ, ಮರಿದೇವಯ್ಯ, ರಮೇಶ್, ಶಂಕರ್, ಮಹದೇವ ಸ್ವಾಮಿ, ಜಿವಿಕ ಬಸವರಾಜು, ಸಣ್ಣ ಕುಮಾರ, ಚಾ.ಶಿವ ಕುಮಾರ್, ಚೌಡಹಳ್ಳಿ ಜವರಯ್ಯ, ಉಮೇಶ್, ಶಿವರಾಜು, ಚನ್ನ ಇದ್ದರು.



ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಹರೀಶ್ ಶೂ ವಿತರಿಸಿದರು. ಈ ವೇಳೆ ಶಾಲಾ ಮುಖ್ಯ ಶಿಕ್ಷಕಿ ಸರಳ, ಎಸ್‌ಎಡಿಎಂಸಿ ಉಪಾಧ್ಯಕ್ಷೆ ಜ್ಯೋತಿ, ಶಿಕ್ಷಕರು, ಮಕ್ಕಳಿದ್ದರು.

ಮನುಗನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಮಹೇಶ್ ಆಯ್ಕೆ

ಸರಗೂರು, ಜ.1– ತಾಲೂಕಿನ ಮನುಗನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಹೆಚ್.ಡಿ ಮಹೇಶ್ ಆಯ್ಕೆಯಾಗಿದ್ದಾರೆ. ಮನುಗನಹಳ್ಳಿ ಗ್ರಾಮ ಪಂಚಾಯಿತಿ ಯಲ್ಲಿ ಒಟ್ಟು 16 ಮಂದಿ ಸದಸ್ಯರಿದ್ದು ಎಲ್ಲರು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಮನುಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕೆ.ಪಿ.ಶೀಲಾ, ನಟರಾಜು, ಸೋಮಶೇಖರ್, ಪವಿತ್ರಾ, ಸಂಗೀತಾ, ಸಿದ್ದರಾಜು, ದಿನೇಶ್, ಪಾರ್ವತಮ್ಮ, ಪಾಪಮ್ಮ ಹಾಜರಿದ್ದರು. ಚುನಾವಣೆ ಪ್ರಕ್ರಿಯೆಯನ್ನು ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕ ಎಚ್.ಡಿ.ಶ್ರೀಧರಮೂರ್ತಿ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಯೋಗೇಂದ್ರ ನಡೆಸಿಕೊಟ್ಟರು.

ಗ್ರಾಮದ ಮುಖಂಡ ಮನುಗನಹಳ್ಳಿ ಗುರುಸ್ವಾಮಿ, ಶಶಿ ಪಾಟೀಲ್, ಚಲುವರಾಜು, ಚನ್ನಮಲ್ಲಪ್ಪ, ಪುಟ್ಟು, ಶಿವರಾಜು, ಮಹದೇವ, ಬಸವಣ್ಣ, ಬಸವರಾಜು, ದಯಾನಂದ, ದೇವರಾಜು, ಮನುಗನಹಳ್ಳಿ ಕೀಮ್, ಹಾಜರಿದ್ದರು.



ಕಂಪಲಾಪುರದ ಬಿಳಿಗಿರಿರಂಗಸ್ವಾಮಿ ಪೆಟ್ರೋಲ್ ಬಂಕ್‌ನಲ್ಲಿ ನೂತನ ವರ್ಷದ ಕ್ಯಾಲೆಂಡರ್ ಅನ್ನು ಗ್ರಾಪಂ ಸದಸ್ಯ ಕೆ.ಎನ್.ಸೋಮಶೇಖರ್ ಬಿಡುಗಡೆಗೊಳಿಸಿದರು. ಈ ಮಾಲೀಕ ಬಂಕ್ ಮಾಲೀಕ ಕೆ.ಪಿ.ನಿಂಗರಾಜ್, ಕೆ.ಎನ್.ಅಶೋಕ್ ಹಾಗೂ ಸಿಬ್ಬಂದಿ ಇದ್ದರು.

ನಾಗರಿಕರಿಗೆ ಮೂಲ ಸೌಲಭ್ಯ ಕಲ್ಪಿಸಲು ಶ್ರಮಿಸುವೆ

ಪುರಸಭೆ ನೂತನ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ



ತಿ.ನರಸೀಪುರ, ಜ.1– ತಮ್ಮ ಅಧಿಕಾರ ವಧಿಯಲ್ಲಿ ಪಟ್ಟಣದ ನಾಗರಿಕರಿಗೆ ಮೂಲ ಸೌಲಭ್ಯ ಕಲ್ಪಿಸಲು ಶ್ರಮಿಸುತ್ತೇನೆ ಎಂದು ಪುರಸಭೆ ನೂತನ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ತಿಳಿಸಿದರು.

ಪಟ್ಟಣದ ಪುರಸಭೆಯಲ್ಲಿ ಅಧ್ಯಕ್ಷರ ಕೊಠಡಿ ಪದಗ್ರಹಣ ನೆರವೇರಿಸಿ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಯತೀಂದ್ರ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಹಾಗೂ ಯುವ ಮುಖಂಡ ಸುನೀಲ್ ಬೋಸ್ ಸಹಕಾರದೊಂದಿಗೆ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದು, ಅವರ ಮಾರ್ಗದರ್ಶನದಲ್ಲಿ ಉತ್ತಮ ಕೆಲಸ ಮಾಡುತ್ತೇನೆ. ಸಾರ್ವಜನಿಕರಿಗೆ ಖಾತೆ, ಕಂದಾಯದ ಬಗ್ಗೆ ಅರಿವು ಮೂಡಿಸುವ ಜೊತೆಗೆ ತ್ವರಿತವಾಗಿ ಕೆಲಸ ಮಾಡಿಕೊಡಲು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಗುವುದು ಎಂದರು.

ಪಟ್ಟಣದ ಪ್ರಮುಖ ರಸ್ತೆಗಳು ಹದಗೆಟ್ಟಿರುವ ಬಗ್ಗೆ ಪತ್ರಿಕೆಗಳ ವರದಿ ಗಮನಿಸಿದ್ದು, ಮೊದಲು ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಿ ಪುರಸಭೆಯ ನಾಗರಿಕರು ನೆಮ್ಮದಿಯಾಗಿ ಓಡಾಡಲು ಅನುವು ಮಾಡಿಕೊಡಲಾಗುತ್ತದೆ. ಹದಗೆಟ್ಟ ರಸ್ತೆ ಕಾಮಗಾರಿಗಳು ಶೀಘ್ರ ಅಭಿವೃದ್ಧಿ ಕಾಣಲಿದ್ದು, ಸಾರ್ವಜನಿಕರು ಪುರಸಭೆಯೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.

ಈ ವೇಳೆ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸದಸ್ಯರಾದ ತುಂಬಲಾ ಪ್ರಕಾಶ್, ಎಲ್.ಮಂಜುನಾಥ್, ಸಿಸ್ಟಮ್ ಸಿದ್ದು, ಮಾಜಿ ಸದಸ್ಯ ರಾಘವೇಂದ್ರ, ಮಾದೇಶ್, ಹೇಮಂತ್ ಕುಮಾರ್, ಮುಖ್ಯಾಧಿಕಾರಿ ಬಸವರಾಜು, ಬಿಲ್ ಕಲೆಕ್ಟರ್ ಪುಟ್ಟಸ್ವಾಮಿ, ರಾಜು, ಮಂಜು ಮತ್ತಿತರರಿದ್ದರು.

ಜಕಣಾಚಾರಿ ಸಂಸ್ಮರಣಾ ದಿನ ಆಚರಣೆ



ಮಡಿಕೇರಿ, ಜ.1– ಕರ್ನಾಟಕ ಶಿಲ್ಪಕಲೆಯ ತವರೂರು. ನಾಡಿನ ಶಿಲ್ಪಕಲೆಗೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಕೊಡುಗೆ ಅಪಾರ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ, ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಸಹಕಾರದಲ್ಲಿ ನಗರದ ಭಾರತೀಯ ವಿದ್ಯಾಭವನದಲ್ಲಿ ಭಾನುವಾರ ನಡೆದ 'ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಸಂಸ್ಮರಣಾ' ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಭಾರತೀಯ ಇತಿಹಾಸದಲ್ಲಿ ಶಿಲ್ಪಕಲೆಗೆ ತನ್ನದೇ ಆದ ಇತಿಹಾಸ ಇದೆ. ಆ ದಿಸೆಯಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರು ಬೇಲೂರು, ಹಳೆಬೀಡು, ಸೋಮನಾಥಪುರ ಮತ್ತಿತರ ಕಡೆಗಳಲ್ಲಿ ಕೆತ್ತಿರುವ ಕೆತ್ತನೆಗಳೇ ಇದಕ್ಕೆ ಸಾಕ್ಷಿ ಎಂದು ನುಡಿದರು.

ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ನಾಗರಾಜು ಮಾತನಾಡಿ, ವಿಶ್ವಕರ್ಮ ಸಮಾಜದಲ್ಲಿ ಕಬ್ಬಿಣ, ಮರಗೆಲಸ, ಶಿಲ್ಪಕಲೆ, ಚಿನ್ನಬೆಳ್ಳಿ ಹೀಗೆ ಐದು ರೀತಿಯ ಕುಲಕಸುಬುಗಳನ್ನು ನಿರ್ವಹಿಸುತ್ತಿದ್ದರು, ಆದರೆ ಕಾಲ ಬದಲಾದಂತೆ ವೃತ್ತಿ ಕೌಶಲ್ಯವೂ ಬದಲಾಗುತ್ತಿದೆ ಎಂದರು.

ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ನಾಮ ನಿರ್ದೇಶಕರಾದ ಎಚ್.ಎನ್.ಸುಬ್ರಮಣ್ಯ ಅವರು ಮಾತನಾಡಿ ವಿಶ್ವಕರ್ಮ ಸಮಾಜದ ಜನರು ಆರ್ಥಿಕವಾಗಿ ಸಬಲರಾಗಲು ಇನ್ನೂ ಹೆಚ್ಚಿನ ನೆರವು ಒದಗಿಸುವಂತಾಗಬೇಕು ಎಂದು ಅವರು ಮನವಿ ಮಾಡಿದರು.

ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್ ಅವರು ಮಾತನಾಡಿ, ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರು ತಮ್ಮ ಶಿಲ್ಪ ಕಲೆಯ ಕಾಯಕದ ಮೂಲಕ ಇಡೀ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಕುಮಾರ ಅವರು ಮಾತನಾಡಿ ಅಮರಶಿಲ್ಪಿ ಜಕಣಾಚಾರಿ ಅವರು ಅತ್ಯಂತ ನಾಜೂಕಾದ ಹಲವಾರು ದೇವಾಲಯಗಳನ್ನು ನಿರ್ಮಿಸಿ ದಂತಕಥೆಯಾದ ಶಿಲ್ಪಿ. ಜಕಣಾಚಾರಿ ಅವರು ಕಲ್ಯಾಣ ಚಾಲುಕ್ಯರ ಹಾಗೂ ಹೊಯ್ಸಳರ ಶೈಲಿಯ ದೇವಾಲಯಗಳನ್ನು ಬೇಲೂರು ಹಾಗೂ ಹಳೇಬೀಡಿನಲ್ಲಿ ನಿರ್ಮಿಸಿದ್ದಾರೆ ಎಂದು ತಿಳಿಸಿದರು.

ಕರ್ನಾಟಕದ ತುಮಕೂರಿನಿಂದ 9 ಕಿ.ಮೀ ದೂರದಲ್ಲಿರುವ ಕೈದಾಳೆಯಲ್ಲಿ ಜಕಣಾಚಾರಿ ಅವರು ಜನಿಸಿದರು. ಕೆಲವು ದಾಖಲೆಗಳ ಪ್ರಕಾರ ಈ ಊರಿನ ಮೂಲ ಹೆಸರು ಕ್ರೀಡಾಪುರ ಆಗಿದೆ ಎಂದು ಕುಮಾರ ಅವರು ತಿಳಿಸಿದರು.

ವಿವಿಧ ವೃತ್ತಿ ಕೌಶಲ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ವಿಶ್ವಕರ್ಮ ಸಮಾಜದ ಮಂಜುನಾಥ್, ಅನಿಲ್ ಬಡಿಗೇರ್, ಸುನಿಲ್, ಪಟ್ಟಣ್ಣ ಆಚಾರ್ಯ, ಮೋಹನ್ ಅವರನ್ನು ಇದೇ ಸಂದರ್ಭದಲ್ಲಿ ಶಾಲು, ಫಲ ತಾಂಬೂಲ ನೀಡಿ ಸನ್ಮಾನಿಸಲಾಯಿತು. ತಹಶೀಲ್ದಾರ್ ಪಿ.ಎಸ್.ಮಹೇಶ್, ತಾಲೂಕು ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಜಗದೀಶ್ ಆಚಾರ್ಯ, ಬಿ.ಸಿ.ಶಂಕರಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚೆನ್ನಸ್ವಾಮಿ, ಮೂಡೂರು ಮಂಜುನಾಥ್ ಇತರರು ಇದ್ದರು.

ವಿರಾಜಪೇಟೆ: ವಿಜೃಂಭಣೆಯ ಶ್ರೀ ಅಯ್ಯಪ್ಪಸ್ವಾಮಿ ಉತ್ಸವ



ವಿರಾಜಪೇಟೆ, ಜ.1– ಪಟ್ಟಣದ ಮಲೆತಿರಿಕೆ ಬೆಟ್ಟದಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವರ ಉತ್ಸವವು ಪ್ರತಿವರ್ಷದಂತೆ ಈ ವರ್ಷವೂ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ನಡೆಯಿತು.

ಉತ್ಸವದ ಅಂಗವಾಗಿ ಭಾನುವಾರ ಮುಂಜಾನೆ 5.30 ಗಂಟೆಗೆ ಗಣಪತಿ ಹೋಮ, ಶ್ರೀ ಲಕ್ಷ್ಮೀ ಮತ್ತು ಸರಸ್ವತಿ ಪೂಜೆ ಹಾಗೂ ತುಲಾಭಾರ, ಲಕ್ಷಾರ್ಚನೆ, ವಿಶೇಷ ಪೂಜೆಗಳು ನಡೆದು ಬಳಿಕ ಮಧ್ಯಾಹ್ನ 12.30ಕ್ಕೆ ದೇವರಿಗೆ ಮಹಾಪೂಜೆ ನೆರವೇರಿಸಿ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಸಂಜೆ 6.30ಕ್ಕೆ ಮಲೆತಿರಿಕೆ ಬೆಟ್ಟದಿಂದ ಮೆರವಣಿಗೆ ಹೊರಟು ತೆಲುಗರ ಬೀದಿ, ಜೈನರ ಬೀದಿ, ದೊಡ್ಡಟ್ಟಿ ಚೌಕಿ ಮೂಲಕ ಮುಖ್ಯ ರಸ್ತೆಯಲ್ಲಿ ಸಾಗಿ ಗಡಿಯಾರ ಕಂಬದ ಮಾರ್ಗವಾಗಿ ಮೀನು ಪೇಟೆಯಲ್ಲಿರುವ ಶ್ರೀ ಮುತ್ತಪ್ಪ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ಹಿಂದಿರುಗಿ ಖಾಸಗಿ ಬಸ್ ನಿಲ್ದಾಣದಿಂದ ಗೋಣಿಕೊಪ್ಪ ರಸ್ತೆ ಮಾರ್ಗವಾಗಿ ದೇವಾಲಯ ತಲುಪಿದ ಬಳಿಕ ಸುಬ್ರಮಣ್ಯ ದೇವರಿಗೆ ಪೂಜೆ ಸಲ್ಲಿಸಲಾಯಿತು.

ಮೆರವಣಿಗೆಯಲ್ಲಿ ಪುಟ್ಟ ಮಕ್ಕಳಿಂದ ದೀಪಾರತಿ, ವಿದ್ಯುತ್ ಅಲಂಕೃತ ಮಂಟಪದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿಯ ಕಥೆ ಸಾರುವ ಸ್ತಬ್ಧ ಚಿತ್ರ, ಕೇರಳದ ಚಂಡೆ ಮದ್ದಳೆ, ಮಂಗಳೂರಿನ ಚಿಲಿ-ಪಿಲಿ ಗೊಂಬೆ ಹಾಗೂ ಇತರ ಆಕರ್ಷಕ ಮನರಂಜನಾ ತಂಡಗಳು ಹಾಗೂ ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಕಳಸ ಹೊತ್ತು ಕುಣಿಯುತ್ತ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ಉತ್ಸವದ ಅಂಗವಾಗಿ ಡಿ.25ರಂದು ಸಂಜೆ ಕ್ಷೇತ್ರ ಪಾಲಕ ಗುಳಿಗನ ಪೂಜೆ, ಡಿ.26 ರಂದು ಧ್ವಜಾರೋಹಣ ನೆರವೇರಿಸಿ ಡಿ.30 ಮತ್ತು 31 ರಂದು ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆಯಿತು. ಈ ಸಂದರ್ಭ ಶ್ರೀ ಅಯ್ಯಪ್ಪ ಸೇವಾ ಸಮಿತಿ ಸದಸ್ಯರು ಹಾಜರಿದ್ದರು.

ಉತ್ಸವದಲ್ಲಿ ನಗರ ಮತ್ತು ಗ್ರಾಮೀಣ ಭಾಗದಿಂದಲು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜ.14 ರಂದು ಶಬರಿಮಲೆಯಲ್ಲಿ ಮಕರ ಜ್ಯೋತಿ ದಿನದಂದು ವಿರಾಜಪೇಟೆ ಶ್ರೀ ಅಯ್ಯಪ್ಪ ದೇವಾಲಯದಲ್ಲಿ ಸಂಜೆ 6.30ಕ್ಕೆ ಮಕರ ಜ್ಯೋತಿಯ ವಿಶೇಷ ಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜ.15ರಂದು 'ಸೇನಾ ದಿವಸ್' ಆಚರಣೆ

ಸಾಧಕ ಮಾಜಿ ಸೈನಿಕರಿಗೆ ಸನ್ಮಾನ

ಮಡಿಕೇರಿ, ಜ.1– ಕೊಡಗಿನಲ್ಲಿ ಪ್ರಥಮ ಬಾರಿಗೆ 'ಆರ್ಮಿ ಡೇ'(ಸೇನಾ ದಿವಸ್) ಆಚರಿಸಲು ನಿರ್ಧರಿಸಲಾಗಿದ್ದು, ಗೋಣಿಕೊಪ್ಪ ಕಾವೇರಿ ಕಾಲೇಜಿನ ಸಹಯೋಗದೊಂದಿಗೆ ಜ.15ರಂದು ಕಾರ್ಯಕ್ರಮ ನಡೆಯಲಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪಿ.ಸೋಮಣ್ಣ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನವರಿ 15ರಂದು ಫೀ.ಮಾ ಕೆ.ಎಂ ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರ ಪ್ರತಿಮೆಗೆ ಪುಷ್ಪಾರ್ಚನೆ ಹಾಗೂ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಗುವುದು. ಮಾಜಿ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಸೇನೆಯಿಂದ ನಿವೃತ್ತರಾದ ಬಳಿಕ ಇತರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸಾಧನೆಗೈದ ಜಿಲ್ಲೆಯ ನಾಲ್ವರು ಮಾಜಿ ಸೈನಿಕನ್ನು ಫೀ.ಮಾ.ಕೆ.ಎಂ ಕಾರ್ಯಪ್ಪ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಮಾಜಿ ಸೈನಿಕರಾದ ಹೊಸೊಕ್ಲು ಚಿಣ್ಣಪ್ಪ, ತಂಬಂಡ ನಾಣಯ್ಯ, ಕೃಷಿ ಕ್ಷೇತ್ರದಲ್ಲಿ ಗಣೇಶ್ ತಿಮ್ಮಯ್ಯ, ಸಿನಿಮಾ ಕ್ಷೇತ್ರದಲ್ಲಿ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ಅವರ ಹೆಸರನ್ನು ರಾಜ್ಯ ಸಂಘಕ್ಕೆ ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಸಂಚಾಲಕ ಸಿ.ಜಿ.ತಿಮ್ಮಯ್ಯ, ಬೊಜ್ಜಂಗಡ ಸುನೀಲ್, ವಾಸು, ಅಪ್ಪಚ್ಚಿರ ನೀಲಮ್ಮ ಉಪಸ್ಥಿತರಿದ್ದರು.

ಬಡ ಹೆಣ್ಣು ಮಕ್ಕಳ ವಿವಾಹ ದೇವರು ಮೆಚ್ಚುವ ಕಾರ್ಯ



ಕುಶಾಲನಗರ, ಜ.1– ಬಡ ಕುಟುಂಬದ ಹೆಣ್ಣು ಮಕ್ಕಳ ವಿವಾಹ ಕಾರ್ಯವು ದೇವರು ಅತ್ಯಂತ ಇಷ್ಟಪಡುವ ವಿಷಯಗಳಲ್ಲಿ ಒಂದಾಗಿದೆ ಎಂದು ಪಾಣಕ್ಕಾಡಿನ ಸಯ್ಯದ್ ಝೈನುಲ್ ಆಬಿದಿನ್ ತಂಙಳ್ ಹೇಳಿದರು.

ಕುಶಾಲನಗರದ ಅಲ್ ಇಹ್ಸಾನ್ ಅಸೋಸಿಯೇಷನ್ ವತಿಯಿಂದ 13ನೇ ವರ್ಷದ ಬಡ ಹೆಣ್ಣು ಮಕ್ಕಳ ವಿವಾಹ ವಾರ್ಷಿಕೋತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಬಡ ಹೆಣ್ಣು ಮಕ್ಕಳ ಜೀವನದ ಬಾಗಿಲನ್ನು ತೆರೆಯುವ ಕೆಲಸ ಅಲ್ ಇಹ್ಸಾನ್ ಅಸೋಸಿಯೇಷನ್ ನವರು ಮಾಡಿದ್ದಾರೆ. ಈ ಪುಣ್ಯದ ಕೆಲಸಕ್ಕೆ ಸಹಕರಿಸಿದ ಎಲ್ಲಾ ದಾನಿಗಳಿಗೆ ಹಾಗೂ ಅಸೋಸಿಯೇಶನ್ ನ ಈ ಸತ್ಕಾರ್ಯವನ್ನು ದೇವರು ಸ್ವೀಕರಿಸಲಿ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿಲಾಲ್ ಮಸೀದಿಯ ಧರ್ಮಗುರುಗಳಾದ ಜನಾಬ್ ಸೂಫಿ ದಾರಿಮಿ ಮಾತನಾಡಿ, ಅಲ್ ಇಹ್ಸಾನ್ ಅಸೋಸಿಯೇಷನ್ ನ ಈ ಪುಣ್ಯದ ಕೆಲಸಕ್ಕೆ ನಾವುಗಳು ಸಾಕ್ಷಿಯಾಗಿರುವುದು ಸಂತಸದ ವಿಷಯ ಎಂದರು.

ಕುಶಾಲನಗರ ಪುರಸಭೆ ಅಧ್ಯಕ್ಷ ಜಯವರ್ಧನ್ ಮಾತನಾಡಿ, ಸತತ 13 ವರ್ಷಗಳಿಂದ ಬಡ ಕುಟುಂಬದ ಹೆಣ್ಣು ಮಕ್ಕಳ ವಿವಾಹ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿರುವ ಅಲ್ ಇಹ್ಸಾನ್ ಅಸೋಸಿಯೇಷನ್ ಹಾಗೂ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಕುಶಾಲನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ.ಚರಣ್ ಮಾತನಾಡಿ, ಕಳೆದ 13 ವರ್ಷಗಳಿಂದ ಈ ಪುಣ್ಯದ ಕೆಲಸವನ್ನು ಸುಮಾರು 20 ಯುವಕರ ಸಂಘ ನೆರವೇರಿಸುತ್ತಾ ಬರುತ್ತಿರುವುದು ಸುಲಭದ ವಿಷಯವಲ್ಲ ಎಂದ ಅವರು, ಅಲ್ಪಸಂಖ್ಯಾತರು ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಯಾದ ದಾರುಲ್ ಉಲೂಂ ಮದ್ರಸದ ಪ್ರಾಂಶುಪಾಲರಾದ ತಮ್ಲೀಕ್ ದಾರಿಮಿ, ಕುಶಾಲನಗರದ ಹಿಲಾಲ್ ಮಸೀದಿ ಅಧ್ಯಕ್ಷ ಎಂ.ಎಂ. ಹುಸೇನ್ ಹಾಗೂ ಜಾಮಿಯಾ ಮಸೀದಿ ಅಧ್ಯಕ್ಷ ಮುಜೀಬುರ್ರಹಮಾನ್, ಮುಖ್ಯ ಅತಿಥಿಗಳಾದ ಉದ್ಯಮಿ ಶಾಹಿರ್ ಹಾಜಿ, ಕುಶಾಲನಗರ ಪುರಸಭೆ ಸದಸ್ಯ ಖಲೀಮುಲ್ಲಾ ಮಾತನಾಡಿದರು.

ಹಿಲಾಲ್ ಮಸೀದಿ ಕಾರ್ಯದರ್ಶಿ ಅಬ್ದುಲ್ ಮಜೀದ್ ಹಾಗೂ ತಾಲೂಕು ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಅಬ್ದುಲ್ ಕರೀಂ ಅವರು ಮಾತನಾಡಿ, ಅಲ್ ಇಹ್ಸಾನ್ ಅಸೋಸಿಯೇಷನ್ ಸೇವೆಯನ್ನು ಶ್ಲಾಘಿಸಿದರು.

ಪ್ರಮುಖರಾದ ಸಿ.ಎಂ.ಹಮೀದ್ ಉಸ್ತಾದ್ ಹಾಗೂ ಇಕ್ಬಾಲ್ ಮುಸ್ಲಿಯಾರ್ ಕಾರ್ಯಕ್ರಮದ ಕುರಿತು ಮಾತನಾಡಿದರು. ಪಾಣಕ್ಕಾಡ್ ಸಯ್ಯದ್ ಝೈನುಲ್ ಆಬಿದಿನ್ ತಂಙಳ್ ಅವರ ನೇತೃತ್ವದಲ್ಲಿ 4 ನವಜೋಡಿಗಳ ವಿವಾಹ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಲ್ ಇಹ್ಸಾನ್ ಅಸೋಸಿಯೇಷನ್ ಅಧ್ಯಕ್ಷ ಎಂ.ಇ.ಮುಸ್ತಫಾರವರು ವಹಿಸಿದ್ದರು. ಈ ಸಂದರ್ಭ ಅಲ್ ಇಹ್ಸಾನ್ ಅಸೋಸಿಯೇಷನ್ ಪದಾಧಿಕಾರಿಗಳು ಹಾಗೂ ಸದಸ್ಯರು ಇದ್ದರು.

ಆಟೋಗೆ ಬೆಂಕಿ ಹಚ್ಚಿದ ವ್ಯಕ್ತಿ ಕುತ್ತಿಗೆಗೆ ಇರಿತ

ಮಡಿಕೇರಿ, ಜ.1– ಕಳೆದ 2 ದಿನಗಳ ಹಿಂದೆ ನಗರದ ರಾಣಿಪೇಟೆಯಲ್ಲಿ ಮನೆ ಮುಂದೆ ನಿಲ್ಲಿಸಲಾಗಿದ್ದ ಆಟೋರಿಕ್ಷಾಗೆ ಬೆಂಕಿ ಹಚ್ಚಿದ ಆರೋಪ ಎದುರಿಸುತ್ತಿರುವ ಹ್ಯಾರಿಸ್(33) ಎಂಬಾತನ ಕುತ್ತಿಗೆಗೆ ಸ್ಟಿಕ್ಕರ್ ಕಟ್ಟಿಂಗ್ ಬ್ಲೇಡ್‌ನಿಂದ ಇರಿದು ತೀವ್ರ ಗಾಯಗೊಳಿಸಿದ ಘಟನೆ ನಡೆದಿದೆ.



ಬೆಂಕಿಯಿಂದ ಸುಟ್ಟು ಕರಕಲಾದ ಆಟೋ ಮಾಲೀಕ ಅಬ್ದುಲ್ ರೆಹಮಾನ್ ಕೃತ್ಯ ಎಸಗಿದ ಆರೋಪಿಯಾಗಿದ್ದಾನೆ. ಘಟನೆ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣ ಹಿನ್ನೆಲೆ: ಅಬ್ದುಲ್ ರೆಹಮಾನ್ ಮತ್ತು ಹ್ಯಾರಿಸ್ ಇಬ್ಬರೂ ಆಟೋ ಚಾಲಕರಾಗಿದ್ದು, ಇವರ ನಡುವೆ ಕೆಲವು ವರ್ಷಗಳಿಂದ ಕ್ಷುಲ್ಲಕ ಕಾರಣಕ್ಕೆ ವೈಮನಸ್ಸು ಇತ್ತು ಎನ್ನಲಾಗಿದೆ. ಈ ನಡುವೆ ಡಿ.29ರ ಮಧ್ಯರಾತ್ರಿ ಮನೆಯ ಮುಂದೆ ನಿಲ್ಲಿಸಿದ್ದ ಅಬ್ದುಲ್ ರೆಹಮಾನ್ ಅವರ ಆಟೋರಿಕ್ಷಾಗೆ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಲಾಗಿತ್ತು. ಈ ಘಟನೆ ಕುರಿತು ಅಬ್ದುಲ್ ರೆಹಮಾನ್ ತ್ಯಾಗರಾಜ ಕಾಲೋನಿ ನಿವಾಸಿ ಹ್ಯಾರಿಸ್ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆರೋಪಿಯನ್ನು ಬಂಧಿಸಿದ್ದ ಪೊಲೀಸರು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದರು.

ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಹ್ಯಾರಿಸ್ ಭಾನುವಾರ ಮಧ್ಯಾಹ್ನ ಮಾರುಕಟ್ಟೆ ಹಿಂಭಾಗದಲ್ಲಿದ್ದ ಅಬ್ದುಲ್ ರೆಹಮಾನ್ ಜೊತೆ ಮಾತಿನ ಚಕಮಕಿ ನಡೆಸಿದ್ದಾನೆ. ಈ ಸಂದರ್ಭ ಇಬ್ಬರೂ ಕೈಕೈ ಮಿಲಾಯಿಸಿದರು ಎನ್ನಲಾಗಿದೆ. ಇದೇ ವೇಳೆ ಅಬ್ದುಲ್ ರೆಹಮಾನ್ ತನ್ನ ಬಳಿ ಇದ್ದ ಸ್ಟಿಕ್ಕರ್ ಕಟ್ ಮಾಡುವ ಬ್ಲೇಡ್‌ನಿಂದ ಹ್ಯಾರಿಸ್‌ನ ಗಂಟಲಿನ ಭಾಗಕ್ಕೆ ಇರಿದಿದ್ದಾನೆ. ಅತೀವ ರಕ್ತಸ್ರಾವದಿಂದಾಗಿ ಹ್ಯಾರಿಸ್ ಸ್ಥಳದಲ್ಲೇ ಕುಸಿದು ಬಿದ್ದಿದ್ದು, ಇತರ ಆಟೋ ಚಾಲಕರು ಹ್ಯಾರಿಸ್‌ನನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಮಾರಣಾಂತಿಕವಾಗಿ ಗಾಯಗೊಂಡಿರುವ ಹ್ಯಾರಿಸ್‌ಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ಪೊಲೀಸರು ಸ್ಥಳ ಮಹಜರು ನಡೆಸಿದ್ದು, ಬ್ಲೇಡ್‌ನಿಂದ ಇರಿದ ಆರೋಪಿ ಅಬ್ದುಲ್ ರೆಹಮಾನ್‌ನನ್ನು ಬಂಧಿಸಿ, ಮುಂದಿನ ಕಾನೂನು ಕ್ರಮ ಜರುಗಿಸಿದ್ದಾರೆ.

ಒಕ್ಕಣೆಗೆ ಹಾಕಿದ್ದ ಹುರುಳಿ ಬಳ್ಳಿ ಸುತ್ತಿಕೊಂಡು ಹೊತ್ತಿ ಉರಿದ ಕಾರು

ಹೊಸ ವರ್ಷಾಚರಣೆಗೆ ಬಂದಿದ್ದ ಯುವಕರು ಪಾರು



ಗುಂಡ್ಲುಪೇಟೆ, ಜ.1– ರಸ್ತೆಯಲ್ಲಿ ಒಕ್ಕಣೆಗೆ ಹಾಕಿದ್ದ ಹುರುಳಿ ಬಳ್ಳಿಗಳು ಸುತ್ತಿಕೊಂಡು ಬೆಂಕಿ ಹೊತ್ತಿಕೊಂಡ ಪರಿಣಾಮ ನೂತನ ವರ್ಷಾಚರಣೆಗೆ ಬಂದಿದ್ದ ಯುವಕರ ಕಾರು ಭಸ್ಮವಾಗಿರುವ ಘಟನೆ ತಾಲೂಕಿನ ಹೊನ್ನೇಗೌಡನಹಳ್ಳಿ ಸಮೀಪ ನಡೆದಿದೆ.

ಹೊಸ ವರ್ಷಾಚರಣೆಗೆ ಬಂಡೀಪುರ ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ತೆರಳಿದ್ದ ಯುವಕರಿದ್ದ ಸ್ಕಾರ್ಪಿಯೋ ಭಾನುವಾರ ಸಂಜೆ ಕೇರಳಕ್ಕೆ ವಾಪಸಾಗುವಾಗ ಘಟನೆ ಸಂಭವಿಸಿದೆ. ಹೊನ್ನೇಗೌಡನಹಳ್ಳಿ ಸಮೀಪ ರಸ್ತೆಯಲ್ಲಿ ಹರಡಿದ್ದ ಹುರುಳಿ ಮೇಲೆ ಹಾದುಹೋಗುವಾಗ ಬಳ್ಳಿಗಳು ಸುತ್ತಿಕೊಂಡ ಪರಿಣಾಮ ಬೆಂಕಿ ಹೊತ್ತಿಕೊಂಡಿದೆ.

ಕೂಡಲೇ ಕಾರಿನಲ್ಲಿದ್ದ ಯುವಕರು ಕೆಳಗಿಳಿದು ಅಪಾಯದಿಂದ ಬಚಾವ್ ಆಗಿದ್ದಾರೆ. ಡೀಸೆಲ್ ಟ್ಯಾಂಕ್‌ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಕಾರು ಸಂಪೂರ್ಣ ಭಸ್ಮವಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸದ್ಯ ಗ್ರಾಮಾಂತರ ಪ್ರದೇಶಗಳಲ್ಲಿ ಹುರುಳಿ ಕಟಾವು ಆರಂಭವಾಗಿದ್ದು ಒಕ್ಕಣೆ ಕಣಗಳ ಕೊರತೆಯಿಂದ ರೈತರು ತಮ್ಮ ಬೆಳೆಗಳನ್ನು ರಸ್ತೆಯಲ್ಲಿಯೇ ಹರಡುತ್ತಿದ್ದಾರೆ. ಅಲ್ಲದೆ ಒಕ್ಕಣೆಯನ್ನು ರಸ್ತೆಯಲ್ಲಿಯೇ ಮಾಡುವುದರಿಂದ ಗಾಳಿಗೆ ತೂರಿಬರುವ ಧೂಳಿನ ಕಣಗಳಿಂದ ಬೈಕುಗಳ ಸವಾರರು ತೀವ್ರ ತೊಂದರೆ ಎದುರಿಸುತ್ತಿದ್ದಾರೆ.

ಬಳ್ಳಿಗಳು ಸುತ್ತಿಕೊಳ್ಳುವುದರಿಂದ ಕಾರು, ಬಸ್ಸು, ಆಟೋ ಮುಂತಾದ ವಾಹನಗಳ ಸಂಚಾರಕ್ಕೆ ತೀವ್ರ ಅಡಚಣೆಯಾಗುತ್ತಿದೆ. ಘಟನೆ ಬಗ್ಗೆ ಪಟ್ಟಣದ ಪೊಲೀಸ್ ಠಾಣೆಗೆ ಮಾಹಿತಿ ದೊರೆತಿದ್ದು, ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ವಿದ್ಯಾರ್ಥಿನಿ ಸಾವು



ಬೇಗೂರು(ಗುಂಡ್ಲುಪೇಟೆ), ಜ.1– ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ ಸಹಶಿಕ್ಷಕ ಚೆನ್ನ ಒಡೆಯ್ಯನಪುರ ಗ್ರಾಮದ ನಿವಾಸಿ ಸಿ.ಎಸ್, ಮಹದೇವಸ್ವಾಮಿ ಅವರ ಪುತ್ರಿ ಇಂಜಿನಿಯರಿಂಗ್ ವಿದ್ಯಾರ್ಥಿನಿ ವೀಕ್ಷಾ (22) ಅಪಘಾತದಲ್ಲಿ ಗಾಯಗೊಂಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೈಸೂರಿನ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. ಇವರ ಅಂತ್ಯಕ್ರಿಯೆ ಚೆನ್ನಒಡೆಯ್ಯನಪುರ ಗ್ರಾಮದಲ್ಲಿ ನಡೆಯಿತು.

ಸಾರ್ಥಕತೆ ಮೆರೆದ ಶಿಕ್ಷಕ: ಶನಿವಾರ ಮೈಸೂರಿನಲ್ಲಿ ಅಪಘಾತಕ್ಕೀಡಾದ ವೀಕ್ಷಾ ಅವರ ನೇತ್ರಗಳನ್ನು ದಾನ ಮಾಡುವ ಮೂಲಕ ಶಿಕ್ಷಕ ಮಹದೇವಸ್ವಾಮಿ ಮತ್ತು ಪತ್ನಿ ಗೀತಾ ದಂಪತಿಗಳು ದುಃಖದಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಪಾಪಮ್ಮ ನಿಧನ



ಬೇಗೂರು(ಗುಂಡ್ಲುಪೇಟೆ), ಜ.1– ಗ್ರಾಮದ ನಿವಾಸಿ ಪಾಪಮ್ಮ (80) ಅವರು ಅನಾರೋಗ್ಯ ದಿಂದ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕ್ರೈಸ್ತ ಧರ್ಮದ ಪ್ರಕಾರ ಗುಂಡ್ಲುಪೇಟೆಯಲ್ಲಿ ನೆರವೇರಿತು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು, ಜ.1– 2022–23ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆ ಅಲೆ ಮಾರಿ, ಪ್ರವರ್ಗ–1ರ ವಿದ್ಯಾರ್ಥಿಗಳಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲು ಕೋರಿ ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ ಮನವಿಯನ್ನು ಮಾಡಿಕೊಂಡಿರುವ ಪ್ರಯುಕ್ತ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಜ.20ರವರೆಗೆ ವಿಸ್ತರಿಸ ಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ https://ssp.karnataka. gov.in/ ಮತ್ತು ಮೊ.ಸಂ.: 8050770005 ಸಂಪರ್ಕಿಸಬಹುದು.

ವಿಜೃಂಭಣೆಯಿಂದ ನಡೆದ ಕಸ್ತೂರು ಬಂಡಿ ಜಾತ್ರೆ

ಚಾಮರಾಜನಗರ/ ಬದನಗುಪ್ಪೆ ಜ.1– ಹದಿನಾರು ಹಳ್ಳಿಗಳ ಬಂಡಿಗಳು ಸೇರುವ ಕಸ್ತೂರು ದೊಡ್ಡಮ್ಮತಾಯಿ ಬಂಡಿ ಜಾತ್ರೆ ಸಾವಿರಾರು ಭಕ್ತರ ಸಡಗರ, ಸಂಭ್ರಮದೊಂದಿಗೆ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ವರ್ಷಾರಂಭದ ಮೊದಲ ದಿನ ಜಾತ್ರೆ ನಡೆದ ಪರಿಣಾಮ ಎಲ್ಲೆಲ್ಲೂ ಭಕ್ತರು ನೆರೆದಿದ್ದರು. ಒಂದೊಂದಾಗಿ ಬಂಡಿಗಳು ಜಾತ್ರೆಯಂಗಳಕ್ಕೆ ಆಗಮಿಸುತ್ತಿದ್ದರೆ ಜಯಘೋಷ ಮೊಳಗಿತು. ಜಾತ್ರೆಯ ಉದ್ದಕ್ಕೂ ಎತ್ತ ನೋಡಿದರೂ ಜನಜಂಗುಳಿ. ವ್ಯಾಪಾರ, ವಹಿವಾಟು ಸಹ ಜೋರಾಗಿಯೇ ನಡೆಯಿತು.

ಜಾತ್ರೆಯಲ್ಲಿ ಒಟ್ಟು ಹದಿನಾರು ಹಳ್ಳಿಗಳ ಬಂಡಿಗಳು ಬಂದು ಸೇರುತ್ತವೆ. ಆದರೆ ಜಾತ್ರೆಯ ಸಂಭ್ರಮವು ಕಸ್ತೂರು, ಮರಿಯಾಲ, ಮರಿಯಾಲದ ಹುಂಡಿ, ಕೆಲ್ಲಂಬಳ್ಳಿ, ಭೋಗಾಪುರ, ಕಿರಗಸೂರು, ದಾಸನೂರು, ಸಪ್ಪಯ್ಯನಪುರ, ಹನಹಳ್ಳಿ, ಮೂಕಹಳ್ಳಿ, ಚಿಕ್ಕಹೊಮ್ಮ, ದೊಡ್ಡಹೊಮ್ಮ, ಅಂಕುಶರಾಯನಪುರ, ತೊರವಳ್ಳಿ, ಪುಟ್ಟಯ್ಯನಹುಂಡಿ, ಹೊನ್ನೇಗೌಡನಹುಂಡಿ, ಬಸವನಪುರ ಸೇರಿದಂತೆ 23 ಗ್ರಾಮಗಳಲ್ಲೂ ಮನೆ ಮಾಡಿತ್ತು. ಆ ಗ್ರಾಮಗಳ ಮನೆಗಳಲ್ಲಿ ನೆಂಟರಿಷ್ಟರ ಕಲರವ ಕಳೆಗಟ್ಟಿತ್ತು.

ಜಾತ್ರೆಯ ಅಂಗವಾಗಿ ಎಲ್ಲಾ 16 ಗ್ರಾಮಗಳ ಬಂಡಿಗಳಲ್ಲೂ ಬಾಳೆಹಣ್ಣು ಗೊನೆ, ಬೃಹತ್ ಗಾತ್ರದ ಹೂವಿನಹಾರಗಳನ್ನು ಕಟ್ಟಿ, ಸಿಂಗಾರ ಮಾಡಲಾಗಿತ್ತು. ಹೀಗಾಗಿ ಬಂಡಿಗಳು ಎಲ್ಲರ ಗಮನ ಸೆಳೆದವು.

ಮಧ್ಯಾಹ್ನ 12ರ ಹೊತ್ತಿಗೆ ಜಾತ್ರೆ ನಡೆಯುವ ಕಸ್ತೂರು ಗ್ರಾಮದ ಜಾತ್ರೆಯಂಗಳಕ್ಕೆ ತೆರಳಿದ ಬಂಡಿಗಳು, ದೇವಸ್ಥಾನ ಪ್ರದಕ್ಷಿಣೆ ಹಾಕಿ, ತೀರ್ಥ ಸಂಪ್ರೋಕ್ಷಣೆ ಮಾಡಿಸಿಕೊಂಡು ಗ್ರಾಮಕ್ಕೆ ತೆರಳುವ ಸಂದರ್ಭದಲ್ಲಿ ನೆರೆದಿದ್ದ ಭಕ್ತಾದಿಗಳು ಬಂಡಿಗೆ ಕಾಯಿ ಒಡೆದು ಭಕ್ತಿ ಸಮರ್ಪಿಸಿದರು.



ವ್ಯವಸ್ಥಿತ ದರ್ಶನ: ಜಾತ್ರೆ ಆಚರಣೆ ಮಾಡುವ ಗ್ರಾಮಸ್ಥರುಗಳು ಎತ್ತುಗಳ ಕೊಂಬುಗಳಿಗೆ ಬಣ್ಣತುಂಬಿ, ಕೊರಳಿಗೆ ಗೆಜ್ಜೆಹಾರವನ್ನು ಕಟ್ಟಿ ದೇವಸ್ಥಾನ ಸುತ್ತ ದೀವಟಿಗೆ ಸೇವೆ ಮಾಡಿದರು. ದೇವರ ದರ್ಶನಕ್ಕೆ ತೆರಳುವ ಭಕ್ತರಿಗೆ ಸರತಿ ಸಾಲಿನಲ್ಲಿ ನಿಲ್ಲಲು ಬ್ಯಾರಿಕೇಡ್ ಅಳವಡಿಸಿದ್ದರಿಂದ ನೂಕುನುಗ್ಗಲು ಉಂಟಾಗಲಿಲ್ಲ. ಭಕ್ತಾದಿಗಳು ವ್ಯವಸ್ಥಿತವಾಗಿ ದೇವರ ದರ್ಶನ ಪಡೆದರು. ಕೆರೆಯಂಗಳ ಸಮೀಪವೇ ಇರುವ ಮಹದೇಶ್ವರ ದೇವಸ್ಥಾನದಲ್ಲೂ ವಿಶೇಷ ಪೂಜೆ ಜರುಗಿದವು. ಈ ಬಾರಿ ಜಾತ್ರೆಯಂಗಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿತ್ತು.

ಪ್ರತ್ಯೇಕ ನಿಲ್ದಾಣ: ಜಾತ್ರೆಗೆ ಆಗಮಿಸುವ ಭಕ್ತರಿಗೆ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ದ್ವಿಚಕ್ರ ವಾಹನ ಹಾಗೂ ಬಸ್ ನಿಲುಗಡೆಗೆ ಜಾತ್ರಾವರಣ ಸಮೀಪದಲ್ಲೇ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲೆಯಲ್ಲಿ ಸಂಭ್ರಮ–ಸಡಗರದಿಂದ ಹೊಸವರ್ಷ ಆಚರಣೆ



ಚಾಮರಾಜನಗರ, ಜ.1– ಜಿಲ್ಲಾದ್ಯಂತ ಹೊಸ ವರ್ಷವನ್ನು ಸಂಭ್ರಮ, ಸಡಗರ, ಭಕ್ತಿಯಿಂದ ಜನರು ಬರ ಮಾಡಿ ಕೊಂಡರು. ಶನಿವಾರ ಮಧ್ಯರಾತ್ರಿ 12ಗಂಟೆಯಾಗುತ್ತಿದ್ದಂತೆ ಜಿಲ್ಲೆಯ ಜನರು ಪರಸ್ಪರ ಹೊಸ ವರ್ಷದ ಶುಭಾಶಯ ಗಳನ್ನು ವಿನಿಮಯ ಮಾಡಿಕೊಂಡರು. ವಿದ್ಯಾರ್ಥಿಗಳು ಮತ್ತು ಯುವಜನರು ತಮ್ಮ ಸ್ನೇಹಿತರಿಗೆ ಮತ್ತು ಆಪ್ತರಿಗೆ ಮೊಬೈಲ್‌ನಲ್ಲಿ ಮೆಸೇಜ್, ವಿಡಿಯೋ ಕಳುಹಿಸುವ ಮೂಲಕ ಶುಭ ಕೋರಿದರು.

ಇನ್ನೂ ಕೆಲವರು ಸಿಹಿ ಹಂಚಿ ಮತ್ತು ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು. ಮಹಿಳೆಯರು ಮತ್ತು ಯುವತಿಯರು ಮನೆಗಳ ಮುಂಭಾಗ ಬಣ್ಣದ ರಂಗೋಲಿ ಚಿತ್ತಾರ ಬಿಡಿಸಿ, ಹೊಸವರ್ಷವನ್ನು ಸ್ವಾಗತಿಸಿದರು.

ಹೊಸ ವರ್ಷದ ಮೊದಲ ದಿನ ಹೊಸಬಟ್ಟೆ ತೊಟ್ಟು ಸಮೀಪದ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದರು. ಇನ್ನೂ ಕೆಲವರು ಕುಟುಂಬ ಸಮೇತ ಮಲೆ ಮಹದೇಶ್ವರಸ್ವಾಮಿ ಬೆಟ್ಟ, ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟ, ಹಿಮವದ್‌ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಕುರುಬನಕಟ್ಟೆ ಕ್ಷೇತ್ರ, ಶಿವನಸಮುದ್ರದ ಸಮೂಹ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದರು.

ಕ್ರೈಸ್ತರು ಚರ್ಚ್‌ಗಳಲ್ಲಿ ಹೊಸವರ್ಷ ಆಚರಣೆ ಮಾಡಿ ಸಂಭ್ರಮಿಸಿದರು. ಯುವಜನರು ಹೋಟೇಲ್, ರೆಸಾರ್ಟ್, ಡಾಬಾಗಳಲ್ಲಿ ಪಾರ್ಟಿ ಮಾಡಿ ಸಂಭ್ರಮಿಸಿದರು. ಪಟ್ಟಣದ ಜನರು ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಗ್ರಾಮೀಣ ಜನರು ಯಡಪುರ ಸಮೀಪದ ಮಹದೇಶ್ವರಸ್ವಾಮಿ ದೇವಸ್ಥಾನ, ಹರದನಹಳ್ಳಿ ದಿವ್ಯಲಿಂಗೇಶ್ವರ, ಸಂತೇಮರಹಳ್ಳಿಯ ಮಹದೇಶ್ವರ ದೇವಾಲಯ, ಮಂಗಲ ಗ್ರಾಮದ ಶಂಕರೇಶ್ವರಸ್ವಾಮಿ ಬೆಟ್ಟ, ಕೂಡ್ಲೂರು ಗ್ರಾಮದ ಮಂಟೇಸ್ವಾಮಿ ದೇವಸ್ಥಾನ, ಕುದೇರು ಗ್ರಾಮದ ಮಲ್ಲಿಕಾರ್ಜುನಸ್ವಾಮಿ, ಚಂದಕವಾಡಿಯ ಲಕ್ಷ್ಮೀದೇವಿ ದೇಗುಲಗಳಿಗೆ ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ: ಹೊಸವರ್ಷದ ಮೊದಲ ದಿನವಾದ ಭಾನುವಾರ ಹಿಮವದ್‌ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಹುಲುಗಿನ ಮುರಡಿ ವೆಂಕಟರಮಣಸ್ವಾಮಿ ಬೆಟ್ಟ ಸೇರಿದಂತೆ ವಿವಿಧ ದೇವಸ್ಥಾನಗಳಿಗೆ ತೆರಳಿದ ಭಕ್ತರು ಪೂಜೆ ಸಲ್ಲಿಸುವುದರೊಂದಿಗೆ ನೂತನ ವರ್ಷವನ್ನು ಸ್ವಾಗತಿಸಿದರು.

ಪಟ್ಟಣದ ಶ್ರೀರಾಮೇಶ್ವರ ದೇವಸ್ಥಾನ, ವಿಜಯ ನಾರಾಯಣ, ಆಂಜನೇಯಸ್ವಾಮಿ, ಬಲಮುರಿ ಗಣಪತಿ ದೇವಸ್ಥಾನ, ಸರ್ವಶಕ್ತಿ ಸಿದ್ಧಿ ವಿನಾಯಕ ದೇವಸ್ಥಾನ, ಮಹದೇಶ್ವರಸ್ವಾಮಿ ದೇವಸ್ಥಾನ ಹಾಗೂ ಅಯ್ಯಪ್ಪಸ್ವಾಮಿ ದೇವಸ್ಥಾನ ಸೇರಿದಂತೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ತಾಳವಾಡಿ ಫಿರ್ಕಾಗೆ ಸೇರಿದ ಕೊಂಗಳ್ಳಿ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಗಳಿಗೆ ವಿವಿಧೆಡೆಯಿಂದ ಆಗಮಿಸಿ ಅಸಂಖ್ಯಾತ ಭಕ್ತರು ನೂತನ ವರ್ಷವು ತಮ್ಮ ಕುಟುಂಬಕ್ಕೆ ಹಾಗೂ ನಾಡಿಗೆ ಶುಭವನ್ನುಂಟು ಮಾಡಲಿ ಎಂದು ಪ್ರಾರ್ಥಿಸಿದರು.

ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಭಕ್ತರ ದಂಡು: ವಾರಂತ್ಯದಲ್ಲಿ ನೂತನ ವರ್ಷಾರಂಭವಾಗಿದ್ದರಿಂದ ಬಂಡೀಪುರ ಹುಲಿ ಯೋಜನೆಯ ಪರಿಸರ ಸೂಕ್ಷ್ಮ ವಲಯಕ್ಕೆ ಸೇರಿದ ಗೋಪಾಲಸ್ವಾಮಿ ಬೆಟ್ಟಕ್ಕೆ ತೆರಳುವ ಭಕ್ತರ ಸಂಖ್ಯೆ ಹೆಚ್ಚಾಗಿದ್ದರಿಂದ ಪಟ್ಟಣದ ಸಾರಿಗೆ ಡಿಪೋದಿಂದ ಹೆಚ್ಚುವರಿಯಾಗಿ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿತ್ತು ಹೊಸ ವರ್ಷಾಚರಣೆಗೆ ಊಟಿ ಪ್ರವಾಸಕ್ಕೆ ತೆರಳಿದ ಪ್ರವಾಸಿಗರು ಬಂಡೀಪುರಕ್ಕೆ ಭೇಟಿ ನೀಡಿ ಪ್ರಕೃತಿ ಸೌಂದರ್ಯ ಸವಿದರು.

ಇಂದಿನಿಂದ ಬೂತ್ ವಿಜಯ ಅಭಿಯಾನ



ಚಾಮರಾಜನಗರ, ಜ.1– ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಬಿಜೆಪಿ ಪಕ್ಷವನ್ನು ವ್ಯವಸ್ಥಿತವಾಗಿ ಸಂಘಟಿಸಲು ಜ.2ರಿಂದ ಜ.12ರವರೆಗೆ ಬೂತ್ ವಿಜಯ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್. ಸುಂದರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೆಳಗ್ಗೆ 10 ಗಂಟೆಗೆ ನಗರದ ಕರಿನಂಜನಪುರ ಸೇರಿದಂತೆ ಜಿಲ್ಲೆಯ ಎಂಟು ಮಂಡಲಗಳಲ್ಲಿಯೂ ಸಾಂಕೇತಿಕವಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಜ. 4ರಂದು ಸಂಸದ ವಿ. ಶ್ರೀನಿವಾಸ ಪ್ರಸಾದ್, ಜ. 7ರಂದು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ 980 ಬೂತ್‌ಗಳಲ್ಲಿ ಹತ್ತು ದಿನಗಳ ಕಾಲ ಕಾರ್ಯಕ್ರಮ ನಡೆಯಲಿದ್ದು, ಪ್ರತಿದಿನ ಅಂದಾಜು 25 ಮನೆಗಳನ್ನು ಸಂಪರ್ಕಿಸಿ, ಕೇಂದ್ರದ ಮೋದಿ ಸರ್ಕಾರ ಹಾಗೂ ರಾಜ್ಯ ಬಸವರಾಜ ಬೊಮ್ಮಾಯಿ ಸರ್ಕಾರದ ಸಾಧನೆಯನ್ನು ತಿಳಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಬೂತ್ ಸಮಿತಿಯನ್ನು ರಚನೆ ಮಾಡಿ, ಸ್ಥಳೀಯ ಜನಪ್ರತಿನಿಧಿಗಳು, ಕಾರ್ಯಕರ್ತರನ್ನೊಳಗೊಂಡ ಪೇಜ್‌ಪ್ರಮುಖ್ ನಿಯುಕ್ತಿಗೊಳಿಸಲಾಗುವುದು. ಅಲ್ಲದೇ ವಾಟ್ಸಾಪ್ ಗ್ರೂಪ್‌ಗಳನ್ನು ರಚಿಸಿ, ಹೆಚ್ಚಿನ ಜನರನ್ನು ಪಕ್ಷ ಸೇರ್ಪಡೆ ಮಾಡಲಾಗುವುದು. ಪ್ರತಿದಿನ 25 ಮನೆಗಳಲ್ಲಿ ಪಕ್ಷದ ಧ್ವಜಾರೋಹಣ ನೆರವೇರಿಸಲಾಗುವುದು ಎಂದು ತಿಳಿಸಿದರು.

ಮುಂದಿನ ಹಂತವಾಗಿ ಜ.21ರಿಂದ 29ರವರೆಗೆ ಮನೆ–ಮನೆಗೆ ಬಿಜೆಪಿ ಅಭಿಯಾನ ನಡೆಯಲಿದೆ. ಮತದಾರರನ್ನು ಮತಪಟ್ಟಿಯಲ್ಲಿ ಸೇರಿಸುವ ಕೆಲಸವನ್ನು ಕಾರ್ಯಕರ್ತರು ಮಾಡಲಿದ್ದಾರೆ ಎಂದರು.

ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮಾತನಾಡಿ, ನರೇಂದ್ರ ಮೋದಿ ಅವರ ಸರ್ಕಾರ ದೇಶದ ಜನರಿಗೆ ಅನುಕೂಲಕರವಾದ ಯೋಜನೆಗಳನ್ನು ಜಾರಿಗೊಳಿಸಿದೆ. ಅಲ್ಲದೇ ರಾಜ್ಯದಲ್ಲಿ ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ಜನಪರ ಯೋಜನೆಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರ ಅಭಿವೃದ್ಧಿ ಕೆಲಸಗಳು ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ಬಲ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ವೃಷಬೇಂದ್ರಪ್ಪ, ಮುಖಂಡರಾದ ಎಸ್. ಬಾಲಸುಬ್ರಮಣ್ಯ, ಮುಖಂಡರಾದ ಅಯ್ಯನಪುರ ಶಿವಕುಮಾರ್, ಎನ್. ಮಂಜುನಾಥ್, ವೇಣು ಇದ್ದರು.

ಒಂದನೇ ಪುಟದಿಂದ

ದೇವಾಲಯಗಳಲ್ಲಿ ಜನ ಸಾಗರ

ವಿವಿಧ ರಾಜ್ಯ, ಜಿಲ್ಲೆಗಳಿಂದ ಆಗಮಿಸಿದ್ದ ಪ್ರವಾಸಿಗರು, ಭಕ್ತರು ತಮ್ಮ ತಮ್ಮ ವಾಹನಗಳಲ್ಲಿ ಬೆಟ್ಟಕ್ಕೆ ಬಂದಿದ್ದರಿಂದ ಬೆಟ್ಟದಲ್ಲಿ ಜನಜಾತ್ರೆ ಉಂಟಾದಂತಾಗಿತ್ತು. ಬೆಟ್ಟದಲ್ಲಿ ಭಕ್ತರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಭಕ್ತರ ಸಂಖ್ಯೆ ಹೆಚ್ಚಾಗಿದ್ದರಿಂದ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆಯಲು ಅಪಾರ ಸಂಖ್ಯೆ ಭಕ್ತರು ಧರ್ಮ ದರ್ಶನದ ಸಾಲು ಹಾಗೂ 100 ರೂ. 30 ರೂ. ಟಿಕೆಟ್ ಪಡೆದು ವಿಶೇಷ ಸಾಲಿನಲ್ಲಿನಲ್ಲಿ ನಿಂತು ದೇವರ ದರ್ಶನ ಪಡೆಯಲು ಮುಗಿ ಬಿದ್ದವರ ಸಂಖ್ಯೆಯಲ್ಲೂ ಹೆಚ್ಚಳವಿದ್ದರಿಂದ ಸಾಕಷ್ಟು ಮಂದಿ ದೇವಾಲಯದ ಮುಂಭಾಗವೇ ಕೈ ಮುಗಿದು ವಾಪಸ್ಸಾಗುತ್ತಿದ್ದ ದೃಶ್ಯ ಕಂಡು ಬಂದಿತು.

ಲಾಡು ಹಂಚಿಕೆ: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಹೊಸ ವರ್ಷದ ಮೊದಲ ದಿನವಾದ ಇಂದು ಭಕ್ತರಿಗೆ ಲಾಡು ವಿತರಿಸಲಾಯಿತು. ಹೊಸ ವರ್ಷದ ಆರಂಭದ ಹಿನ್ನೆಲೆಯಲ್ಲಿ ವಿವಿಧೆಡೆಗಳಿಂದ ಯೋಗನರಸಿಂಹಸ್ವಾಮಿ ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದರು. ಮುಂಜಾನೆ ನಾಲ್ಕು ಗಂಟೆಯಿಂದಲೇ ಭಕ್ತರು ತಂಡೋಪ ತಂಡವಾಗಿ ಯೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಹುಣಸೂರು–ಮೈಸೂರು ಮುಖ್ಯ ರಸ್ತೆಯವರೆಗೂ ಭಕ್ತರು ಸಾಲುಗಟ್ಟಿ ನಿಂತಿದ್ದ ದೃಶ್ಯ ಬೆಳಗ್ಗೆಯೇ ಕಂಡು ಬಮದಿತು. ದೇವಾಲಯ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಹಾಗೂ ಶ್ರೀನಿವಾಸ್ ಅವರು ಭಕ್ತರಿಗೆ ಲಾಡು ವಿತರಿಸಿದರು. ವಿವಿಧ ಗಾತ್ರದ ಸುಮಾರು 2 ಲಕ್ಷ ಲಾಡುಗಳನ್ನು ಭಕ್ತರಿಗೆ ವಿತರಿಸಲು ದೇವಾಲಯದ ವತಿಯಿಂದ ತಯಾರಿಸಲಾಗಿತ್ತು. ರಾತ್ರಿ 11 ಗಂಟೆವರೆಗೂ ದೇವಾಲಯ ಭಕ್ತರು ಬಂದು ದರ್ಶನ ಪಡೆದ ಬಳಿಕ ಲಾಡು ಸ್ವೀಕರಿಸಿದರು.

ಗಣಪತಿ ಆಶ್ರಮದಲ್ಲಿ: ವಿವಿಧೆಡೆಯಿಂದ ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಗಣಪತಿ ಆಶ್ರಮಕ್ಕೆ ಬೇಟಿ ನೀಡಿ, ಅಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಾಲಯಕ್ಕೆ ನೂರಾರು ಮಂದಿ ಭಕ್ತರು ಭೇಟಿ ನೀಡಿ ದೇವರ ದರ್ಶನ ಪಡೆದರು.

ಉತ್ತನಹಳ್ಳಿ: ಚಾಮುಂಡಿಬೆಟ್ಟಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿದ್ದ ಕಾರಣ ನೂರಾರು ಮಂದಿ ಉತ್ತನಹಳ್ಳಿಯಲ್ಲಿರುವ ಶ್ರೀ ತ್ರಿಪುರಸುಂದರಿ ದೇವಿ ದೇವಾಲಯಕ್ಕೆ ಬೇಟಿ ದೇವಿಯ ದರ್ಶನ ಪಡೆದರು. ಬೆಳಗ್ಗಿನಿಂದಲೇ ಉತ್ತನಹಳ್ಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬೇಟಿ ನೀಡುವ ಮೂಲಕ ಹೊಸ ವರ್ಷವನ್ನು ಆಚರಿಸಿದರು.

ನಿಮಿಷಾಂಭದೇವಿ ದೇವಾಲಯ: ಶ್ರೀರಂಗಪಟ್ಟಣ ತಾಲೂಕಿನ ಗಂಜಾಂನಲ್ಲಿರುವ ಶ್ರೀ ನಿಮಿಷಾಂಭದೇವಿ ದೇವಾಲಯಕ್ಕೂ ಭಕ್ತರ ದಂಡು ಹೆಚ್ಚಿನ ಸಂಖ್ಯೆಯಲ್ಲಿ ಹರಿದು ಬಂತು. ಹೊಸ ವರ್ಷದ ಮೊದಲ ದಿನ ದೇವಿಯ ದರ್ಶನ ಪಡೆದ ಅಪಾರ ಸಂಖ್ಯೆಯ ಭಕ್ತರು ದೇವಿಯ ದರ್ಶನ ಪಡೆದು ಪುಳಕಿತರಾದರು.

ನಂಜನಗೂಡು: ನಂಜಂನಗೂಡಿನಲ್ಲಿರುವ ಶ್ರೀ ನಂಜುಂಡೇಶ್ವರನ ಸನ್ನಿಧಿಯಲ್ಲಿಯೂ ಸೋಮವಾರ ಅಪಾರ ಸಂಖ್ಯೆಯ ಭಕ್ತರು, ಪ್ರವಾಸಿಗರು ತೆರಳಿದ್ದರಿಂದ ದೇವರ ದರ್ಶನ ಪಡೆಯುವುದಕ್ಕೆ ಗಂಟೆಗಟ್ಟಲೇ ಸರದಿ ಸಾಲಿನಲ್ಲಿ ಕಾದು ನಿಲ್ಲುವಂತಾಯಿತು.

ಮೈಸೂರಿನ ವಿವಿಧೆಡೆ: ಈ ನಡುವೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯ, ಇಟ್ಟಿಗೆಗೂಡಿನಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಕೆಜಿ ಕೊಪ್ಪಲಿನಲ್ಲಿರುವ ಶ್ರೀ ಬಂದಂತಮ್ಮ ದೇವಿ ದೇವಾಲಯ, ಕೋಟೆ ಆಂಜನೇಯಸ್ವಾಮಿ ದೇವಾಲಯ ಸೇರಿದಂತೆ ಅನೇಕ ದೇವಾಲಯಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಗಳಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸುವ ಮೂಲಕ ಹೊಸ ವರ್ಷವನ್ನು ಸಂಭ್ರಮದಿಂದ ಭಕ್ತಿಯಿಂದ ಆಚರಿಸಿದರು.

ಸಿದ್ದೇಶ್ವರ ಶ್ರೀಗಳ ಆರೋಗ್ಯ ಸ್ಥಿತಿ ಗಂಭೀರ

ಕಳವಳ ವ್ಯಕ್ತಪಡಿಸಿದ್ದಾರೆ. ಸ್ವಾಮೀಜಿಗಳ ದರ್ಶನಕ್ಕೆ ಸಿಎಂ ಬೊಮ್ಮಾಯಿ ಅವರು ಬೆಂಗಳೂರಿನಿಂದ ವಿಜಯಪುರಕ್ಕೆ ಭೇಟಿ ನೀಡಿದ್ದು, ಶ್ರೀಗಳ ದರ್ಶನ ಪಡೆದುಕೊಂಡಿದ್ದಾರೆ.

ಶ್ರೀಗಳ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ಸಿದ್ಧೇಶ್ವರ ಸ್ವಾಮೀಜಿ ಆರೋಗ್ಯ ಕಳವಳಕಾರಿ ಆಗಿದ್ದರಿಂದ ನಾನು ಬಂದಿದ್ದೇನೆ. ಶ್ರೀಗಳ ಆರೋಗ್ಯ ವಿಚಾರವನ್ನು ನಾನು ಕಳೆದ ಒಂದು ವಾರದಿಂದ ನಿತ್ಯ ಫೋನ್‌ನಲ್ಲಿ ವಿಚಾರಿಸುತ್ತಿದ್ದೇನೆ. ಎರಡು ದಿನಗಳ ಹಿಂದೆ ಕರೆ ಮಾಡಿ ಮಾತನಾಡಿದಾಗ ಶ್ರೀಗಳು ಒಂದೆರಡು ಮಾತಾಡಿದ್ದರು. ಶ್ರೀಗಳ ಆರೋಗ್ಯ ಆಶ್ಚರ್ಯಕರ ರೀತಿಯಲ್ಲಿ ಸುಧಾರಿಸಿದೆ. ಈಗ ಪ್ರಧಾನಿಗಳು ಸಿದ್ದೇಶ್ವರ ಸ್ವಾಮೀಜಿ ಅವರ ಆರೋಗ್ಯ ಕುರಿತು ಜೋಶಿ ಅವರೊಂದಿಗೆ ಮಾತನಾಡಿದ್ದಾರೆ. ಶ್ರೀಗಳು ಆದಷ್ಟು ಬೇಗ ಗುಣ ಆಗಲಿ ಎಂದು ನರೇಂದ್ರ ಮೋದಿ ಅವರು ಹಾರೈಸಿದ್ದಾರೆ. ಶ್ರೀಗಳ ಬದುಕೇ ಮಾದರಿಯಾಗಿದೆ. ನಡೆ, ನುಡಿ ನಮ್ಮೆಲ್ಲರಿಗೂ ದಾರಿ ದೀಪವಾಗಿದೆ ಎಂದು ಹೇಳಿದರು. ಅವರ ಎಲ್ಲಾ ವೈದ್ಯಕೀಯ ವರದಿಗಳು ಸಾಮಾನ್ಯವಾಗಿವೆ. ಅವರು ಇನ್ನಷ್ಟು ದಿನ ಬದುಕಿ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುವಂತಾಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಸಿದ್ದೇಶ್ವರ ಸ್ವಾಮೀಜಿ ಧರ್ಮದ ಚೌಕಟ್ಟನ್ನು ಮೀರಿ ತತ್ವಗಳ ಮೇಲೆ ನಿಂತವರು, ಸಮಾಜದಲ್ಲಿ ಮೌಲ್ಯಗಳನ್ನು ಜೀವಂತವಾಗಿಡಲು ಶ್ರೀಗಳ ಅವಶ್ಯಕತೆ ಇದೆ ಎಂದರು.

ಪ್ರಲ್ಹಾದ್ ಜೋಶಿ ಅವರು ಮಾತನಾಡಿ, ವೈರಾಗ್ಯ ಮೂರ್ತಿ ನಡೆದಾಡುವ ದೇವರು ನಮ್ಮೆಲ್ಲರಿಗೂ ಒಂದಲ್ಲಾ ಒಂದು ರೀತಿ ಮಾರ್ಗದರ್ಶನ ಮಾಡಿ ಪ್ರೇರಣೆ ನೀಡಿದವರು ಸಿದ್ದೇಶ್ವರ ಸ್ವಾಮೀಜಿ. ಸಾರ್ವಜನಿಕ ಬದುಕಿನ ಬಗ್ಗೆ ಸಾರ್ವಜನಿಕ ಬದುಕಿನ ಮೌಲ್ಯಗಳನ್ನು ಕಲಿಸಿದ ಗುರುಗಳು. ನಡೆದಂತೆ ನುಡಿದು ಇತರರಿಗೆ ಆದರ್ಶ ಪ್ರಾಯವಾದಂತಹ ಜೀವನವನ್ನು ನಡೆಸುತ್ತಿದ್ದಾರೆ. ಅವರ ಆರೋಗ್ಯ ಕಳವಳಕಾರಿಯಾಗಿದೆ ಎಂದು ಕೆಲ ದಿನಗಳಿಂದ ನಮಗೆ ಗೊತ್ತಾಗಿದೆ. ಸ್ವಾಮೀಜಿಗಳ ಆಕ್ಸಿಜನ್ ರೇಟ್ ಕಡಿಮೆಯಾಗಿದೆ ಎಂದು ವೈದ್ಯರು ಮಾಹಿತಿ ನೀಡಿದ ಕಾರಣ ನಾವು ಧಾವಿಸಿ ಬಂದಿದ್ದೇವೆ. ಶ್ರೀಗಳ ಆರೋಗ್ಯದ ಬಗ್ಗೆ ಪ್ರಧಾನಿ ಮೋದಿ ಅವರು ವಿಚಾರಿಸಿದ್ದಾರೆ ಎಂದು ಹೇಳಿದರು.

ಗುಂಡು ಹಾರಿಸಿಕೊಂಡು ವ್ಯಕ್ತಿ ಆತ್ಮಹತ್ಯೆ

ಹೆಸರನ್ನು ಉಲ್ಲೇಖಿಸಿ ಪ್ರದೀಪ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾಜಿ ಸಚಿವ ಅರವಿಂದ ಲಿಂಬಾವಳಿ, ಜಿ.ರಮೇಶ್ ರೆಡ್ಡಿ, ಕೆ.ಗೋಪಿ, ಜಯರಾಮ್ ರೆಡ್ಡಿ, ರಾಘವ ಭಟ್, ಸೋಮಯ್ಯ ಹೆಸರು ಉಲ್ಲೇಖಿಸಿ 6 ಜನರ ಮೇಲೆ ಕ್ರಮ ಜರುಗಿಸಿ ನನ್ನ ಸಾವಿಗೆ ನ್ಯಾಯ ಒದಗಿಸಿ ಎಂದು ಪ್ರದೀಪ್ ಡೆತ್‌ನೋಟ್‌ನಲ್ಲಿ ಮನವಿ ಮಾಡಿದ್ದಾರೆ. ಹೆಸರಿನ ಮುಂದೆ ಮೊಬೈಲ್ ನಂಬರ್ ಬರೆದು ಪ್ರದೀಪ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಣಕಾಸಿನ ವ್ಯವಹಾರದಲ್ಲಿ ವಂಚನೆ ಸಂಬಂಧ ಪ್ರದೀಪ್ ಆತ್ಮಹತ್ಯೆ ಮಾಡಿಕೊಂಡಿದ್ದು, ಕೆ.ಗೋಪಿ ಮತ್ತು ಸೋಮಯ್ಯ ಅವರಿಗೆ ಅರವಿಂದ ಲಿಂಬಾವಳಿ ಅವರು ಬೆಂಬಲ ನೀಡಿದ್ದಾರೆ ಎಂದು ಪ್ರದೀಪ್ ಹೇಳಿದ್ದಾರೆ.

'ಯುವ ಮಿತ್ರ' ಯೋಜನೆ ಜಾರಿ

ರೂಪದಲ್ಲಿ ಮಾಹಿತಿ ಒದಗಿಸಲಾಗುತ್ತದೆ. ಇದರಿಂದ ಮಕ್ಕಳಲ್ಲಿ ಪರಿಸರ ಶಿಕ್ಷಣ, ವನ್ಯಜೀವಿ ಸಂರಕ್ಷಣೆಯ ಮಹತ್ವದ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಮಕ್ಕಳಿಗೆ ಕಿರುಹೊತ್ತಿಗೆ, ಕರಪತ್ರವನ್ನು ನೀಡಿ, ಶೈಕ್ಷಣಿಕ ಬೆಳವಣಿಗೆಗೆ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು, ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬಂಡೀಪುರ ಅಭಯಾರಣ್ಯ 1,02,700,000 ಹೆಕ್ಟೇರ್ ಪ್ರದೇಶದಲ್ಲಿ ಚಾಚಿಕೊಂಡಿದೆ. ಕಿಲೋ ಮೀಟರ್‌ನಲ್ಲಿ ಬಂಡೀಪುರದ ವಿಸ್ತೀರ್ಣ 1020 ಚದರ ಕಿಮಿ ವ್ಯಾಪಿಸಿದೆ. ಅದರಲ್ಲಿ 872.24 ಚದರ ಕಿಮಿ ದಟ್ಟವಾದ ಕಾಡಿನ ಪ್ರದೇಶವಾಗಿದ್ದು, ಇದರಲ್ಲಿ ಶೇ.10ರಷ್ಟು ಅರಣ್ಯ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕಾಗಿ ಸಫಾರಿಗೆ ಬಳಸಲಾಗುತ್ತಿದೆ. ಮೂರು ಉಪ ವಿಭಾಗಳಾಗಿ ವಿಂಗಡಿಸಿರುವ ಬಂಡೀಪುರ ಅರಣ್ಯ ಪ್ರದೇಶದಲ್ಲಿ 13 ರೇಂಜ್‌ಗಳಿವೆ. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಆನೆಗಳು, 175ಕ್ಕೂ ಹೆಚ್ಚು ಹುಲಿಗಳು, ನೂರಾರು ಚಿರತೆಗಳು, ಎಂಟು ಕಪ್ಪು ಚಿರತೆಗಳು, ನೂರಾರು ಕಾಡೆಮ್ಮೆಗಳು, ತೋಳಗಳು, ಕಾಡುನಾಯಿಗಳು, ಸಾಂಬಾರ್, ಕೃಷ್ಣಮೃಗ, ಜಿಂಕೆಗಳು, ಮೌಸ್ ಡೀರ್, ಸಿವೆಟ್ ಕ್ಯಾಟ್, ಕಾಡುಬೆಕ್ಕು, ಚಿರತೆ ಬೆಕ್ಕು, ಹೆಬ್ಬಾವು, ನಾಗರಹಾವು ಸೇರಿದಂತೆ ಅನೇಕ ಬಗೆಯ ಪ್ರಾಣಿ, ಪಕ್ಷಿಗಳನ್ನು ತನ್ನೊಡಲ್ಲಿಟ್ಟುಕೊಂಡು ಸಲಹುತಿದೆ.

ನೆರವಾದ ಸೋಲಾರ್ ಬೋರ್‌ವೆಲ್: ಬಂಡೀಪುರದಲ್ಲಿ 375ಕ್ಕೂ ಹೆಚ್ಚು ಕೆರೆಗಳಿದ್ದು, ಬೇಸಿಗೆ ವೇಳೆ ಪ್ರಾಣಿಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ನೋಡಿಕೊಳ್ಳುವುದಕ್ಕಾಗಿ ವಿವಿಧ ರೇಂಜ್‌ನಲ್ಲಿರುವ 25 ಕೆರೆಗಳಿಗೆ ಸೋಲಾರ್ ಶಕ್ತಿಯಿಂದ ಕಾರ್ಯನಿರ್ವಹಿಸುವ ಬೋರ್‌ವೆಲ್ ತೋಡಿಸಿ ಕೆರೆಗಳಿಗೆ ನೀರುಣಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದರು. ಇದರಿಂದ ಪ್ರಾಣಿ–ಪಕ್ಷಿಗಳಿಗೆ ಎದುರಾಗಿದ್ದ ನೀರಿನ ಭವಣೆ ಸ್ವಲ್ಪಮಟ್ಟಿಗೆ ನಿವಾರಣೆಯಾದಂತಾಗಿತ್ತು. ಸೋಲಾರ್ ಬೋರ್‌ವೆಲ್‌ಗಳು ನೆರವಾದ ಹಿನ್ನೆಲೆಯಲ್ಲಿ ನೀರಿನ ಸಮಸ್ಯೆ ನೀಗಿದಂತಾಗಿದ್ದರಿಂದ ಪ್ರಾಣಿಗಳು ನೀರನ್ನು ಅರಸಿ ಗ್ರಾಮಗಳತ್ತ ಬರುವುದನ್ನು ತಡೆದಂತಾಯಿತು.

ಕಾಡಾನೆ ದಾಳಿಗೆ ವಾಚರ್ ಬಲಿ

ಮಹದೇವಸ್ವಾಮಿ ಪಾರಾಗಲು ಸಾಧ್ಯವಾಗಿಲ್ಲ. ರೊಚ್ಚಿಗೆದ್ದ ಆನೆ ಮಹದೇವಸ್ವಾಮಿ ಮೇಲೆ ದಾಳಿ ನಡೆಸಿ ತುಳಿದಿದ್ದರಿಂದ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದಾಳಿ ನಡೆಸಿದ ಬಳಿಕ ಕಾಡಾನೆ ಕಾಡಿನತ್ತ ಓಡಿದೆ. ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಗೆ ಮೃತದೇಹವನ್ನು ಕೊಂಡೊಯ್ದು ಭಾನುವಾರ ಮಧ್ಯಾಹ್ನ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ತಾಲೂಕು ದಂಡಾದಿಕಾರ ರತ್ನಾಂಭಿಕ, ಮೇಟಿಕುಪ್ಪೆ ಉಪ ವಿಭಾಗದ ಎಸಿಎಫ್ ಕೆ.ಎನ್.ರಂಗಸ್ವಾಮಿ ಹಾಗೂ ಇನ್ನಿತರರು ಮೃತರ ಪತ್ನಿಗೆ ತಾತ್ಕಾಲಿಕವಾಗಿ 5 ಲಕ್ಷ ರೂ. ಪರಿಹಾರದ ಚೆಕ್ ವಿತರಿಸಿದರು. ಅವಘಡಗಳಲ್ಲಿ ಅರಣ್ಯ ಸಿಬ್ಬಂದಿಗಳು (ಗುತ್ತಿಗೆ ನೌಕರರು ಒಳಗೊಂಡಂತೆ) ಆಕಸ್ಮಿಕವಾಗಿ ಮೃತಪಟ್ಟರೆ ಘೋಷಿಸಿದರು ಮೊತ್ತವನ್ನು ಶೀಘ್ರದಲ್ಲೇ ಕೊಡಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಆರ್‌ಎಫ್‌ಓಗಳಾದ ಎನ್.ಹರ್ಷಿತ್, ಸಿದ್ದರಾಜು, ಕೆ.ಎಲ್.ಮಧು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

'ನಂದಿನಿ' ಕನ್ನಡಿಗರ ಜೀವನಾಡಿ, ಅದರ ತಂಟೆಗೆ ಬಂದರೆ ಬಿಜೆಪಿ ಭಸ್ಮವಾಗುತ್ತೆ



ಹೆಚ್‌ಡಿಕೆ ಎಚ್ಚರಿಕೆ

ಬೆಂಗಳೂರು, ಜ.1– 'ನಂದಿನಿ' ಕನ್ನಡಿಗರ ಜೀವನಾಡಿ. ಅದರ ತಂಟೆಗೆ ಬಂದರೆ ಬಿಜೆಪಿ ಭಸ್ಮವಾಗುತ್ತದೆ. ಕರ್ನಾಟಕವನ್ನು ಆಕ್ರಮಣ ಮಾಡಿಕೊಳ್ಳುವ ಹಾಗೂ ಆರ್ಥಿಕ, ಕೈಗಾರಿಕಾ ಕ್ಷೇತ್ರಗಳಲ್ಲಿ ರಾಜ್ಯವನ್ನು ಹತ್ತಿಕ್ಕುವ ಹುನ್ನಾರ ಯಶಸ್ಸು ಕಾಣದು ಎಂದು ಮಾಜಿ ಸಿಎಂ ಹೆಚ್.ಡಿ ಕುಮಾರ ಸ್ವಾಮಿ ಎಚ್ಚರಿಕೆ ನೀಡಿದ್ದಾರೆ.



ಗುಜರಾತ್‌ನ 'ಅಮೂಲ್' ಜತೆ ಕರ್ನಾಟಕದ 'ನಂದಿನಿ' ಯನ್ನು ಒಂದುಗೂಡಿಸಲು ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ವಿರುದ್ಧ ಸರಣಿ ಟ್ವೀಟ್ಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಟ್ವೀಟ್‌ನಲ್ಲಿ ಏನಿದೆ: ನೆಲ, ಜಲ, ನುಡಿಯ ಬಗ್ಗೆ ಕನ್ನಡ ಮತ್ತು ಕರ್ನಾಟಕದ ಮೇಲೆ ಸದಾ ಪ್ರಹಾರ ನಡೆಸುತ್ತಿರುವ ಬಿಜೆಪಿ ಕನ್ನಡಿಗರ ವಿರುದ್ಧ ತನ್ನ ರಕ್ಕಸ ನೀತಿಗಳನ್ನು ಮುಂದುವರಿಸಿದೆ. ಈಗ ಕರ್ನಾಟಕದ ಹಾಲಿನಲ್ಲೂ ಗುಜರಾತಿನ ಹುಳಿ ಹಿಂಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೊರಟಿದ್ದಾರೆ.

ಮಣ್ಣಿನ ಮಕ್ಕಳ ಜೀವನಾಡಿ ಕರ್ನಾಟಕ ಹಾಲು ಮಹಾ ಮಂಡಳಿ (ಕೆಎಂಎಫ್–ನಂದಿನಿ)ಯನ್ನು ಗುಜರಾತಿನ ಅಮುಲ್‌ನಲ್ಲಿ ವಿಲೀನ ಮಾಡುವ ಹೇಳಿಕೆ ನೀಡಿರುವುದು ಕನ್ನಡಿಗರಿಗೆ ಮಾಡಲು ಹೊರಟಿರುವ ಘೋರ ಅನ್ಯಾಯ. ಕರ್ನಾಟಕ ರಾಜ್ಯವನ್ನು ಗುಜರಾತ್ ಮಾಡುವ ಧೂರ್ತ ಹುನ್ನಾರ ಇದು. ಅಷ್ಟೇ ಅಲ್ಲ, ಗುಜರಾತ್ ಗೆ ಕರ್ನಾಟಕವೇ ಪ್ರತಿಸ್ಪರ್ಧಿ ಎನ್ನುವ ಕಾರಣಕ್ಕೆ ಅಭಿವೃದ್ಧಿಯಲ್ಲಿ ಕರ್ನಾಟಕವನ್ನು ಮುಗಿಸೇಬಿಡಬೇಕು ಎನ್ನುವ ದುರಾಲೋಚನೆ ಅಮಿತ್ ಶಾ ಅವರಿಗೆ ಸ್ಪಷ್ಟವಾಗಿ ಇದ್ದಂತಿದೆ.


ದೇಶದ ಬೇರಾವ ರಾಜ್ಯದ ಮೇಲೆಯೂ ಇಲ್ಲದ ಅಸಹನೆ, ಅಸೂಯೆ, ವೈಷಮ್ಯ ಕರ್ನಾಟಕದ ಮೇಲೇಕೆ ಅಮಿತ್ ಶಾ ಅವರೇ ಎಂದು ನಾನು ಕೇಳುತ್ತಿದ್ದೇನೆ. ಕನ್ನಡಿಗರನ್ನು ಶತ್ರುಗಳಂತೆ ನೋಡುತ್ತಿದ್ದಾರೆ. ಕನ್ನಡಿಗರನ್ನು ಗುಜರಾತಿನ ಗುಲಾಮರನ್ನಾಗಿ ಮಾಡಲು ಶಾ ಅವರು ಷಡ್ಯಂತ್ರರೂಪಿಸಿದ್ದಾರೆ ಎನ್ನುವುದು ನನ್ನ ಅನುಮಾನ.

ನಂದಿನಿ ಕನ್ನಡಿಗರ ಜೀವನಾಡಿ. ಅದರ ತಂಟೆಗೆ ಬಂದರೆ ಬಿಜೆಪಿ ಭಸ್ಮವಾಗುತ್ತದೆ. ಇಡೀ ದೇಶವನ್ನೇ ಆಳಿದ ಕನ್ನಡಿಗರು ಯಾರೊಬ್ಬರ ಗುಲಾಮರಲ್ಲ. ಕರ್ನಾಟಕ ವನ್ನು ಆಕ್ರಮಣ ಮಾಡಿಕೊಳ್ಳುವ ಹಾಗೂ ಆರ್ಥಿಕ, ಕೈಗಾರಿಕೆ ಕ್ಷೇತ್ರಗಳಲ್ಲಿ ರಾಜ್ಯವನ್ನು ಹತ್ತಿಕ್ಕುವ ಹುನ್ನಾರ ಯಶಸ್ಸು ಕಾಣದು. ಬಿಜೆಪಿಯ ಬ್ರಹ್ಮರಾಕ್ಷಸ ರೂಪ ಕನ್ನಡಿಗರಿಗೆ ಈಗ ಅರಿವಾಗುತ್ತಿದೆ.

ಅಮುಲ್ ಜತೆ ನಂದಿನಿ ವಿಲೀನ ಸಾಧ್ಯವಿಲ್ಲ. ನಮ್ಮ ರೈತರ ಅನ್ನ ಕಸಿಯುವ ಕೆಲಸವನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಕೆಎಂಎಫ್ ಕನ್ನಡಿಗರ ಜೀವನಾಡಿ ಮಾತ್ರವಲ್ಲ, ಸಮಸ್ತ ಕನ್ನಡಿಗರ ಆಸ್ತಿ ಮತ್ತು ಅಸ್ಮಿತೆ. ಅಮಿತ್ ಶಾ ಅವರು ಇದೆಲ್ಲವನ್ನು ಅರ್ಥ ಮಾಡಿಕೊಂಡರೆ ಒಳ್ಳೆಯದು ಎಂದು ಎಚ್ಚರಿಕೆ ನೀಡಿದ್ದಾರೆ.

ಅಮೂಲ್ ಜೊತೆ ನಂದಿನಿ ವಿಲೀನ ಇಲ್ಲ


ಬೆಂಗಳೂರು, ಜ.1– ಕರ್ನಾಟಕ ಹಾಲು ಮಹಾಮಂಡಳದ ಉತ್ಪನ್ನ ನಂದಿನಿಯನ್ನು ಗುಜರಾತ್‌ನ ಅಮೂಲ್ ಜೊತೆಗೆ ವಿಲೀನ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟ ಪಡಿಸಿದ್ದಾರೆ. ನಗರದಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಅಮೂಲ್ ಜೊತೆ ನಂದಿನಿ ವಿಲೀನವಾಗಲಿದೆ ಎಂದು ಯಾರೂ ಊಹೆ ಮಾಡಿ ಟೀಕೆ ಮಾಡಬಾರದು. ನಂದಿನಿ ತನ್ನ ಸ್ವಂತ ಅಸ್ತಿತ್ವ ಉಳಿಸಿಕೊಳ್ಳಲಿದೆ. ಅಮುಲ್ ನೊಂದಿಗೆ ವಿಲೀನ ಮಾಡುತ್ತಾರೆ ಎನ್ನುವುದು ತಪ್ಪು ಕಲ್ಪನೆ. ಕೇಂದ್ರ ಗೃಹ ಮತ್ತು ಸಹಕಾರ ಸಚಿವರು ಮಾತನಾಡಿರುವುದು ಸ್ಪಷ್ಟವಾಗಿದೆ. ನಂದಿನಿ ಮತ್ತು ಅಮುಲ್ ತಾಂತ್ರಿಕವಾಗಿ, ಮಾರುಕಟ್ಟೆಯಲ್ಲಿ ಸಹಕಾರ ಮಾಡಬೇಕು. ಇವೆರಡೂ ದೊಡ್ಡ ಸಂಸ್ಥೆಗಳು. ಪೂರಕವಾಗಿ ಕೆಲಸ ಮಾಡಬೇಕು. ಅದರರ್ಥ ವಿಲೀನಗೊಳಿಸುವುದು ಎಂದಲ್ಲ ಎಂದರು.



ಒಟ್ಟಾಗಿ ಕೆಲಸ ಮಾಡಿದರೆ ಲಾಭ: ಕೆಲವು ವಲಯಗಳಲ್ಲಿ ಇಬ್ಬರೂ ಒಟ್ಟಿಗೆ ಕೆಲಸ ಮಾಡಿದರೆ ಲಾಭವಿದೆ. ನಂದಿನಿ ಅಥವಾ ಅಮುಲ್ ತಾಂತ್ರಿಕವಾಗಿ ಮುಂದಿದ್ದರೆ ವಿನಿಯಮ ಮಾಡಿಕೊಳ್ಳಬಹುದು. ಆಡಳಿತಾತ್ಮಕ ಕ್ರಮಗಳನ್ನು ವಿನಿಮಯ ಮಾಡಿಕೊಳ್ಳಿ, ಅದರ ಬಗ್ಗೆ ತಪ್ಪು ಅರ್ಥ ಕಲ್ಪಿಸುವ ಅಥವಾ ರಾಜಕಾರಣ ಮಾಡುವ ಅವಶ್ಯಕತೆ ಇಲ್ಲ ನಾನು ಮುಖ್ಯಮಂತ್ರಿಯಾಗಿ ಹೇಳುವುದು, ನಂದಿನಿ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಸದಾ ಕಾಯ್ದುಕೊಳ್ಳಲಿದೆ ಎಂದರು.

ಕೆಎಂಎಫ್, ಅಮೂಲ್ ವಿಲೀನ ಬಗ್ಗೆ ಅಮಿತ್ ಶಾ ಹೇಳಿಲ್ಲ

ಬೆಂಗಳೂರು, ಜ.1– ಕೆಎಂಎಫ್ ಮತ್ತು ಅಮೂಲ್ ವಿಲೀನ ಆಗಲಿದೆ ಎಂಬ ಸುದ್ದಿಯನ್ನು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಅಲ್ಲಗಳೆದಿದ್ದಾರೆ. ಕೆಎಂಎಫ್ ಮತ್ತು ಅಮುಲ್ ವಿಲೀನ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಲ್ಲೂ ಹೇಳಿಲ್ಲ. ಕೆಎಂಎಫ್ ಒಂದು ಬಲಿಷ್ಠವಾದ ಸಂಸ್ಥೆ. ಗುಜರಾತ್ ಅಮೂಲ್ ಜೊತೆ ನಮ್ಮ ಕೆಎಂಎಫ್ ವಿಲೀನ ಮಾಡುವ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದು ಸ್ಪಷ್ಟನೆ ನೀಡಿದರು.



ಗುಜರಾತ್‌ನಲ್ಲಿ ಡೈರಿ ಮೊದಲ ಸ್ಥಾನದಲ್ಲಿ ಇದೆ, ಇಲ್ಲಿ (ಕರ್ನಾಟಕ) ಕೂಡ ಬಲಿಷ್ಠ ಇದೆ ಅಂದಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಯವರು ಕೂಡ ಸ್ಪಷ್ಟನೆ ನೀಡಿದ್ದಾರೆ. ಆದರೆ ಯಾಕೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಈ ಪ್ರಶ್ನೆ ಹುಟ್ಟಿಕೊಳ್ಳುತ್ತದೆಯೋ ಗೊತ್ತಿಲ್ಲ ಎಂದರು. ಅಲ್ಲದೆ, ಸೊಸೈಟಿ ಅಭಿವೃದ್ಧಿ ಬಗ್ಗೆ ಮಾತಾಡಿದ್ದಾರೆ. ಆದರೆ ಎರಡು ಕಂಪನಿಗಳನ್ನು ವಿಲೀನ ಮಾಡುವ ಬಗ್ಗೆ ಎಲ್ಲಿಯೂ ಚರ್ಚೆ ಆಗಿಲ್ಲ. ಕರ್ನಾಟಕಕ್ಕೆ ಅನ್ಯಾಯ ಆಗುವ ರೀತಿ ಅವರು ಹೇಳಿಲ್ಲ. ವಿರೋಧ ಪಕ್ಷಗಳು ಚುನಾವಣೆ ಗಿಮಿಕ್‌ಗಾಗಿ ಹಾಗೆ ಹೇಳುತ್ತಿದ್ದಾರೆ ಅಷ್ಟೇ ಎಂದರು.

ಅಮೂಲ್ ಮತ್ತು ಕೆಎಂಎಫ್ ವಿಲೀನ ಬಗ್ಗೆ ಅಮಿತ್ ಶಾ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮೊದಲು ಅಮಿತ್ ಶಾ ಏನು ಹೇಳಿಕೆ ಕೊಟ್ಟಿದ್ದಾರೆ ಸರಿಯಾಗಿ ನೋಡಿ. ಒಟ್ಟಿಗೆ ಮಾರುಕಟ್ಟೆ ಮಾಡಿದರೆ ನಿಮ್ಮ ವ್ಯಾಪ್ತಿ ದೊಡ್ಡದಾಗುತ್ತದೆ ಎಂದಿದ್ದಾರೆ. ನಿಮ್ಮ ಬ್ರ್ಯಾಂಡ್ ವಿಲೀನ ಮಾಡಬೇಕು ಅಂತಾ ಎಲ್ಲೂ ಹೇಳಿಲ್ಲ ಎಂದರು. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಕೆಎಂಎಫ್ ಅಥವಾ ನಂದಿನಿ ಅತ್ಯಂತ ಗಟ್ಟಿಮುಟ್ಟಾಗಿ ಮುಂದುವರಿಯುತ್ತದೆ ಎಂದರು.

ಸಾಂಬಶಿವ ಪ್ರಹಸನ ನಾಟಕದಲ್ಲಿ ಸಿದ್ದರಾಮಯ್ಯ, ಡಿಕೆಶಿಗೆ ಅವಮಾನ ಆರೋಪ

ಪ್ರದೇಶ ಕುರುಬರ ಸಂಘದಿಂದ ಪೊಲೀಸರಿಗೆ ದೂರು

ಮೈಸೂರು, ಜ.1– ರಂಗಾಯಣದಲ್ಲಿ ಶನಿವಾರ ಪ್ರದರ್ಶನವಾದ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಪಮಾನಿಸಲಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಮಣ್ಯ, ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ರಂಗಾಯಣದ ಭೂಮಿಗೀತ ವೇದಿಕೆಯಲ್ಲಿ ಶನಿವಾರ ಸಂಜೆ ಕಾರ್ತಿಕ್ ಉಪಮನ್ಯು ನಿರ್ದೇಶನದಲ್ಲಿ ಪದ್ಮಶ್ರೀ ನಾಗರತ್ನಮ್ಮ ರಂಗ ಕಾರ್ಯಾಗಾರದ ಶಿಬಿರಾರ್ಥಿಗಳು ಅಭಿನಯಿಸಿದ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಸಿದ್ದರಾಮಯ್ಯನವರನ್ನು ವ್ಯಂಗ್ಯ ಮಾಡಲಾಗಿದೆ ಎಂದು ವೀಕ್ಷಕರೊಬ್ಬರು ಆಕ್ಷೇಪಿಸಿದ್ದರು. ನಂತರ ಸಿದ್ದರಾಮಯ್ಯನವರ ಅಭಿಮಾನಿಗಳು ಜಮಾಯಿಸಿ, ಕಾರ್ತಿಕ್ ಉಪಮನ್ಯು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ವಿಷಯ ತಿಳಿದ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಮಣ್ಯ, ರಂಗಾಯಣದ ಉಪನಿರ್ದೇಶರನ್ನು ಭೇಟಿ ಮಾಡಿ, ಬೇಸರ ವ್ಯಕ್ತಪಡಿಸಿ ದರಲ್ಲದೆ, ತಡರಾತ್ರಿಯೇ ಜಯಲಕ್ಷ್ಮಿಪುರಂ ಠಾಣೆಗೆ ನಾಟಕ ನಿರ್ದೇಶಕ ಹಾಗೂ ಕಲಾವಿದರ ವಿರುದ್ಧ ದೂರು ನೀಡಿ, ಕ್ರಮಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಸಾಂಬಶಿವ ಪ್ರಹಸನ ನಾಟಕದಲ್ಲಿ ಸೇವಕನೊಬ್ಬ ರಾಜನನ್ನು ಉದ್ದೇಶಿಸಿ 'ನೀವು ಅನ್ನಭಾಗ್ಯ, ಆ ಭಾಗ್ಯ, ಈ ಭಾಗ್ಯ ಕೊಟ್ಟು ಜನರನ್ನು ಸೋಮಾರಿ ಮಾಡಿದ್ದೀರಿ' ಎಂದು ಹೇಳಿಸುವ ಮೂಲಕ ಸಿದ್ದರಾಮಯ್ಯನವರ ಮಹತ್ವದ ಅನ್ನಭಾಗ್ಯ ಯೋಜನೆಯನ್ನು ಟೀಕಿಸಿದ್ದಾರೆ. ಅಲ್ಲದೆ ಮಂತ್ರಿ ಪಾತ್ರದಾರಿಗೆ ಕೆ.ಡಿ ಅಂಕಲ್ ಎಂಬ ಹೆಸರಿಟ್ಟು ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸಿದ್ದಾರೆ. ಆದಿಚುಂಚನಗಿರಿ ಶ್ರೀಗಳು, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಡೆ ಅವರು ಪ್ರಶಂಸಿರುವ ಅನ್ನಭಾಗ್ಯ ಯೋಜನೆ ಬಗ್ಗೆ ಈ ನಾಟಕದ ನಿರ್ದೇಶನಿಗೆ ಅರಿವಿಲ್ಲ ಎಂದೆನಿಸುತ್ತದೆ ರಂಗಾಯಣದಲ್ಲಿ ರಾಜಕೀಯ ಸುಳಿಯಬಾರದು. ಆದರೆ ಇತ್ತೀಚಿನ ಬೆಳವಣಿಗೆ ಗಮನಿಸಿದರೆ ಒಂದು ಪಕ್ಷವನ್ನು ಗುರಿಯಾಗಿಸಿಕೊಂಡು ನಾಟಕ ಪ್ರಯೋಗ ಮಾಡಲಾಗುತ್ತಿದೆ ನಾನು ನೀಡಿರುವ ದೂರಿನ ಆಧಾರದಲ್ಲಿ ಪೊಲೀಸರು ಕ್ರಮ ಕೈಗೊಳ್ಳದಿದ್ದರೆ ಜಾತ್ಯಾತೀತ, ಪಕ್ಷಾತೀತವಾಗಿ ಸಮುದಾಯದ ಮುಖಂಡರ ಸಭೆ ನಡೆಸಿ ಮುಂದಿನ ಹೋರಾಟ ರೂಪಿಸಲಾಗುವುದು ಎಂದು ತಿಳಿಸಿದರು.

ಶ್ರವಣೂರಲ್ಲಿ ರಾಯಣ್ಣನ ಪ್ರತಿಮೆ ಅನಾವರಣ

ಹಾಸನ, ಜ.1– ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಶವಣೂರು ಗ್ರಾಮದಲ್ಲಿ ಭಾನುವಾರ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ಅನಾವರಣ ಮಾಡಲಾಯಿತು. ಈ ವೇಳೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



ನಂತರ ಮಾತನಾಡಿದ ಅವರು, ಕೆಲ ದಿನಗಳ ಹಿಂದೆ ಸಂಗೊಳ್ಳಿ ರಾಯಣ್ಣನವರ ಚೌಕಿ ಅನ್ನು ಜಿಲ್ಲಾಡಳಿತ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತೆರವುಗೊಳಿಸಿದ್ದನ್ನು ಸ್ಮರಿಸಬಹುದು. ಗ್ರಾಮದಲ್ಲಿ ಎಲ್ಲಾ ಜನಾಂಗದವರು, ಮುಖಂಡರುಗಳು ಸೇರಿಕೊಂಡು ದೇಶಭಕ್ತ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ಸ್ಥಾಪಿಸಿರುವುದು ಸಂತೋಷ ತಂದಿದೆ. ಮುಂದಿನ ದಿನಗಳಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘವು ತಮ್ಮೊಂದಿಗೆ ಜೊತೆಯಲ್ಲಿ ಇರುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶೇಷೇಗೌಡ, ಕೆ.ಆರ್.ಪೇಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷರಾದ ಪುರುಷೋತ್ತಮ್, ಚಂದ್ರೇಗೌಡ, ಮಹೇಶ್, ಹೇಮಂತ್, ರವಿ, ಮಂಜು, ಗಣೇಶ್, ವಿಜಯಕುಮಾರ್ ಮತ್ತು ರಾಯಣ್ಣನ ಅಭಿಮಾನಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಅಚ್ಚ ಕನ್ನಡದ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಜ.1(ಆರ್‌ಕೆಬಿ)– ಕನ್ನಡ ಸಂಖ್ಯೆಗಳುಳ್ಳ ಅಚ್ಚ ಕನ್ನಡದ 2023ರ ದಿನದರ್ಶಿಕೆಯನ್ನು ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಭಾನುವಾರ ದೇವಸ್ಥಾನದ ಆವರಣದಲ್ಲಿ ಬಿಡುಗಡೆ ಮಾಡಿದರು.



ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ, ಕರ್ನಾಟಕದಲ್ಲಿ ಕನ್ನಡವೇ ಸತ್ಯ ಕನ್ನಡವೇ ಸಾರ್ವಭೌಮ ಭಾಷೆ, ತನು ಕನ್ನಡ ಮನ ಕನ್ನಡ ನುಡಿ ಕನ್ನಡ, ಕನ್ನಡ ಪುಸ್ತಕ ಮತ್ತು ಪತ್ರಿಕೆಗಳನ್ನು ಓದುವ ಸಂಸ್ಕೃತಿ ನಮ್ಮದಾಗಲಿ ಎಂಬ ಕನ್ನಡದ ನುಡಿ ವಾಕ್ಯಗಳೊಂದಿಗೆ ದಿನದರ್ಶಿಕೆ ಮುದ್ರಣವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಡಾ.ಭಾಷ್ಯಂ ಸ್ವಾಮೀಜಿ, ಇಂಗ್ಲಿಷ್ ಕ್ಯಾಲೆಂಡರ್‌ಗಳ ನಡುವೆ ಕನ್ನಡದ ಕ್ಯಾಲೆಂಡರ್ ಗಮನ ಸೆಳೆಯಲಿದೆ. ಮಕ್ಕಳ ಕನ್ನಡ ಕಲಿಕೆಗೂ ಇದು ಉಪಯೋಗವಾಗಲಿದೆ. ಪ್ರತೀ ವರ್ಷ ಕನ್ನಡ ಕ್ಯಾಲೆಂಡರ್ ಬಿಡುಗಡೆ ಮಾಡುತ್ತಿರುವುದು ನಾವೆಲ್ಲರೂ ಹೆಮ್ಮೆಪಡಬೇಕಾದ ವಿಷಯ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷಡಾ.ವೈ.ಡಿ. ರಾಜಣ್ಣ ಉದ್ಯಮಿ ಪೋತರಾಜು, ರಾಜಶೇಖರ ಕದಂಬ, ಚಿಂತಕ ಡಾ.ರಘುರಾಂ ವಾಜಪೇಯಿ, ಮುಖಂಡರಾದ ಎ.ಮಧುಕರ್, ಎಂ.ಮಂಜುನಾಥ್, ಕನ್ನಡ ಚಳವಳಿಯ ಮೂಗೂರು ನಂಜುಂಡ ಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಪುಣ್ಯಾಮೃತಗೆ ಮಿಸ್ ಟೀನ್ ಸೌತ್ ಇಂಡಿಯಾ ಪಟ್ಟ

ಮೈಸೂರು, ಜ.1– ನಗರದಲ್ಲಿ ಇತ್ತೀಚೆಗೆ ನಡೆದ ಯಶ್ ಇಂಟರ್‌ನ್ಯಾಷನಲ್ ಫ್ಯಾಷನ್ ವೀಕ್ ಸೌಂದರ್ಯ ಸ್ಪರ್ಧೆಯಲ್ಲಿ ಮೈಸೂರಿನ ಬಿ.ಎಸ್.ಪುಣ್ಯಾಮೃತಗೆ ಮಿಸ್ ಟೀನ್ ಸೌತ್ ಇಂಡಿಯಾ–2022 ಪಟ್ಟ ದೊರೆತಿದೆ



ಒಟ್ಟು 9 ಸ್ಪರ್ಧಿಗಳು ಈ ಸ್ಪರ್ಧೆಗೆ ಆಯ್ಕೆಯಾಗಿದ್ದರು. ಈ ಪೈಕಿ ಕೇವಲ ಕಳೆದೊಂದು ವರ್ಷದಿಂದ ಮಾಡೆಲಿಂಗ್‌ನಲ್ಲಿ ತೊಡಗಿರುವ, 5.8 ಅಡಿ ಎತ್ತರ ಇರುವ ಪುಣ್ಯಾಮೃತ ಎಲ್ಲಾ ಸುತ್ತಿನಲ್ಲೂ ಉತ್ತಮ ಪ್ರದರ್ಶನ ನೀಡಿ, ತೀರ್ಪುಗಾರರ ಮೆಚ್ಚುಗೆಗೆ ಪಾತ್ರರಾಗಿ ಪಟ್ಟ ತಮ್ಮದಾಗಿಸಿಕೊಂಡಿದ್ದಾರೆ. ಈ ಸೌಂದರ್ಯ ಸ್ಪರ್ಧೆಯಲ್ಲಿ ವಿಜೇತರಾಗುವ ಮುನ್ನ ಪುಣ್ಯಾಮೃತ ಮಿಸ್ ಟೀನ್ ಮೈಸೂರು ಮತ್ತು ಮಿಸ್ ಟೀನ್ ಇಂಡಿಯಾ–2022 ಸೇರಿದಂತೆ ಎರಡು ಸ್ಪರ್ಧೆಗಳಲ್ಲಿ ರನ್ನರ್ ಅಪ್ ಆಗಿ ಹಾಗೂ ಎರಡು ಸ್ಪರ್ಧೆಗಳಲ್ಲಿ ವಿಜೇತರಾಗಿ ಹೊರಹೊಮ್ಮಿದ್ದರು.

ತಮ್ಮ ಗೆಲುವಿನ ಬಗ್ಗೆ ಮಾತನಾಡಿದ ಪುಣ್ಯಾಮೃತ, ನನ್ನ ಹೆಸರು ಘೋಷಣೆಯಾದಾಗ ಒಂದು ಕ್ಷಣ ನನಗೆ ಏನೂ ತೋಚಲಿಲ್ಲ. ಇದು ಕಠಿಣ ಸ್ಪರ್ಧೆ. ಏಕೆಂದರೆ ನನ್ನೊಂದಿಗೆ ಸ್ಪರ್ಧಿಸಿದ್ದ ಎಲ್ಲರೂ ಈಗಾಗಲೇ ರಾಷ್ಟ್ರಮಟ್ಟದ ವಿವಿಧ ಸೌಂದರ್ಯ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದವರು. ಎಲ್ಲರೂ ಪ್ರತಿಭಾವಂತರು ಎಂದು ತಮ್ಮ ಅನುಭವ ಹಂಚಿಕೊಂಡರು.

ಇನ್ನೂ ಉತ್ತಮ ಅವಕಾಶಗಳಿಗಾಗಿ ನಾನು ಎದುರು ನೋಡುತ್ತಿದ್ದೇನೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವುದು ನನ್ನ ಆಸೆ. ಅದರೊಂದಿಗೆ ನನಗೆ ಎಂಬಿಎ ವ್ಯಾಸಂಗ ಮಾಡುವ ಆಸೆಯೂ ಇದೆ, ನಟನೆ ಮಾಡುವ ಆಸೆ ಸಹ ಇದೆ ಎಂದು ಪುಣ್ಯಾಮೃತ ತಿಳಿಸಿದರು. ಪ್ರಸ್ತುತ ಅವರು ಶೇಷಾದ್ರಿಪುರಂ ಕಾಲೇಜಿನಲ್ಲಿ ಬಿಕಾಂ ಮೊದಲ ವರ್ಷ ವ್ಯಾಸಂಗ ಮಾಡುತ್ತಿದ್ದಾರೆ. ಈಕೆ ಕೆ.ಶೇಖರ್ ಹಾಗೂ ಕೆ.ರತ್ನಾ ದಂಪತಿ ಪುತ್ರಿ.

ಭಾರತ–ಪಾಕಿಸ್ತಾನ ಪರಮಾಣು ಸ್ಥಾವರಗಳ ಪಟ್ಟಿ ವಿನಿಮಯ

ನವದೆಹಲಿ, ಜ.1– ಭಾರತ ಮತ್ತು ಪಾಕಿಸ್ತಾನ ಭಾನುವಾರ ದ್ವಿಪಕ್ಷೀಯ ಒಪ್ಪಂದಡಿ ತಮ್ಮ ರಾಷ್ಟ್ರಗಳಲ್ಲಿರುವ ಪರಣಾಮ ಸ್ಥಾವರಗಳ ಪಟ್ಟಿಯನ್ನು ವಿನಿಮಯ ಮಾಡಿಕೊಂಡಿದ್ದಾರೆ. ಈ ಪದ್ಧತಿ 32 ವರ್ಷಗಳಿಂದ ನಡೆದುಕೊಂಡು ಬಂದಿದೆ. ಪರಣಾಮ ಸ್ಥಾವರಗಳ ಮೇಲಿನ ದಾಳಿ ನಿಷೇಧ ಒಪ್ಪಂದದ ವಿನಾಯಿತಿಯಡಿ ಈ ವಿನಿಮಯ ಮಾಡಿಕೊಳ್ಳಲಾಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ. ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಏಕಕಾಲದಲ್ಲಿ ರಾಯಭಾರಿಗಳ ಮೂಲಕ ಇದು ನಡೆದಿದೆ.

ಪ್ರತಿ ವರ್ಷ ಜನವರಿಯಲ್ಲಿ ಭಾರತ–ಪಾಕಿಸ್ತಾನ ಪರಸ್ಪರ ಪರಮಾಣು ಸ್ಥಾವರಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದು ಕಡ್ಡಾಯವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಗಾಣಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಗಾಣಸಿರಿ ಧ್ವನಿ ಸುರಳಿ ಬಿಡುಗಡೆ

ಮೈಸೂರು, ಜ.1 (ಆರ್‌ಕೆಬಿ)– ಗಾಣಿಗ ಮಹಾಸಭಾ, ಕರ್ನಾಟಕ ರಾಜ್ಯ ಗಾಣಿಗ ಗೆಳೆಯರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಭಾನುವಾರ ಮೈಸೂರಿನಲ್ಲಿ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ 2020–21ನೇ ಸಾಲಿನ ಪ್ರತಿಭಾ ಪುರಸ್ಕಾರ ಹಾಗೂ 'ಗಾಣಸಿರಿ' ಧ್ವನಿ ಸುರಳಿ ಬಿಡುಗಡೆ ಮಾಡಲಾಯಿತು.



ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಗಾಣಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು. ಬಳಿಕ ಗಾಣಸಿರಿ ಧ್ವನಿ ಸುರಳಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಶ್ರಮಿಕ ಸಮಾಜವಾದ ಗಾಣಿಗ ಜನಾಂಗವು ಪರಿಶುದ್ಧವಾದ ಗಾಣದ ಎಣ್ಣೆ ತೆಗೆದು ನೀಡುತ್ತಾ ಬಂದಿತ್ತು. ಆದರೆ ಇಂದು ಗಾಣಗಳು ನಶಿಸುತ್ತಿದ್ದು, ಈ ಸಮುದಾಯ ಕುಲ ಕಸುಬಿನಿಂದ ದೂರವಾಗುತ್ತಿದೆ. ಹೀಗಾಗಿ ಇಂದು ಪರಿಶುದ್ಧ ಎಣ್ಣೆ ಸಿಗದೆ ಕಳಪೆ ಎಣ್ಣೆ ಬರುತ್ತಿದೆ. ಗಾಣಿಗರ ಕುಲಕಸುಬು ಮಾಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಣಗಳಾಗಿ ವಿಂಗಡಣೆಯಾಗಿರುವ ಸಣ್ಣ ಸಣ್ಣ ಸಮಾಜಗಳು ಸಂಕಷ್ಟಕ್ಕೆ ಸಿಲುಕಿದ್ದು, ಅಭಿವೃದ್ಧಿಗೆ ಅವಕಾಶವೇ ಇಲ್ಲದೇ ಆರ್ಥಿಕ ಹೊಡೆತಕ್ಕೂ ಸಿಲುಕಿವೆ. ಈ ಸಮುದಾಯ ಒಗ್ಗೂಡಿ, ಸಂಘಟಿತರಾಗಬೇಕು. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸಮುದಾಯ ತನ್ನ ಅಭಿವೃದ್ಧಿಗೆ ಅವಕಾಶ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಾಜಿ ಮೇಯರ್ ಅನಂತು ಪ್ರಾಸ್ತಾವಿಕವಾಗಿ ಮಾತನಾಡಿ, ಗಾಣಿಗ ಸಮಾಜವು ಕುಲ ಕಸುಬಾದ ಗಾಣವನ್ನೇ ನಂಬಿ ಜೀವನ ನಡೆಸುತ್ತಿತ್ತು. ಆದರೆ ಇಂದು ಗಾಣ ನಶಿಸುತ್ತಿದೆ. ಮುಂದೆ ಈ ಸಮುದಾಯದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದರೆ ಸಮುದಾಯ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಗಾಣಿಗ ಸಮುದಾಯದವರು ವೈದ್ಯರು, ಇಂಜಿನಿಯರ್, ಪೊಲೀಸ್ ಹೀಗೆ ಯಾವುದೇ ಒಳ್ಳೆಯ ಉದ್ಯೋಗದಲ್ಲೂ ಇಲ್ಲ. ಆದರೆ ಈ ಜನಾಂಗದ ಹೆಣ್ಣು ಮಕ್ಕಳು ಇತ್ತೀಚೆಗೆ ಇಂಜಿನಿಯರಿಂಗ್ ವ್ಯಾಸಾಂಗದಲ್ಲಿ ತೊಡಗಿದ್ದು, ಇದಕ್ಕೆ ಪೋಷಕರು ಪ್ರೋತ್ಸಾಹ ನೀಡಬೇಕು. ಅವರು ಉನ್ನತ ಉದ್ಯೋಗಕ್ಕೆ ಹೋಗಲು ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಾಣಿಗ ಸಮಾಜದ ಅಭಿವೃದ್ಧಿ ಪ್ರಾಧಿಕಾರ ಮಾಡಿ, ಅದಕ್ಕೆ ಆರ್ಥಿಕ ನೆರವು ನೀಡಬೇಕೆನ್ನುವಷ್ಟರಲ್ಲಿ ಸರ್ಕಾರ ಬದಲಾಯಿತು. ಆದರೆ, ನಂತರದ ಸರ್ಕಾರ ಗಾಣಿಗ ಸಮಾಜವನ್ನು ಸಂಪೂರ್ಣ ಕಡೆಗಣಿಸಿದೆ ಎಂದು ಆರೋಪಿಸಿದರು.

ಈ ಸಮಾಜ ಮೀಸಲಾತಿಗಾಗಿ ಹೋರಾಟ ಮಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಅವರು, ಗಾಣಿಗ ಜನಾಂಗಕ್ಕೆ 2ಎ ಇದ್ದರೂ ಏನೂ ಸಿಗುತ್ತಿಲ್ಲ. ಹಾಗಾಗಿ ಮೀಸಲಾತಿಗಾಗಿ ಹೋರಾಟ ಅನಿವಾರ್ಯವಾಗಿದೆ ಎಂದರು. ಸಾಹಿತಿ ಬನ್ನೂರು ರಾಜು ಮುಖ್ಯ ಭಾಷಣ ಮಾಡಿದರು. ಗಾಣಿಗ ಮಹಾಸಭಾ ಅಧ್ಯಕ್ಷ ಡಾ.ಕೆ.ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಕೆ.ಆರ್.ವಿಭಾಗದ ಎಸಿಪಿ ಎಸ್.ಸಿ.ಗಂಗಾಧರಸ್ವಾಮಿ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಗಾಣಿಗ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಮಹದೇವ ಗಾಣಿಗ, ಕಾರ್ಯದಶಿ ಸುರೇಶ್, ಖಜಾಂಚಿ ಕಮಲಾಕ್ಷಿ, ಗ್ರಾಪಂ ಸದಸ್ಯ ಬ್ಯಾತಹಳ್ಳಿ ಶಿವಣ್ಣ, ಚಲನಚಿತ್ರ ನಿರ್ದೇಶಕ ಎ.ಸಿ.ಪೂರ್ಣಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 2 ಜನವರಿ 2023

ಕ್ಷೇತ್ರದಲ್ಲಿ ಆತ್ಮಸಾಕ್ಷಿ ಒಪ್ಪುವಂತೆ ಕೆಲಸ ಮಾಡಿದ್ದೇನೆ

'ಕೈ' ತೊರೆದ ಕುರುಬ ಸಮುದಾಯದ ಮುಖಂಡರನ್ನು ಜೆಡಿಎಸ್‌ಗೆ ಬರಮಾಡಿಕೊಂಡ ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ, ಜ.1– ರಾಜ್ಯದಲ್ಲಿ ಜೆಡಿಎಸ್ ಅಧಿಕಾರದಲ್ಲಿ ಇಲ್ಲದಿದ್ದರೂ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದಲ್ಲಿ ಆತ್ಮಸಾಕ್ಷಿ ಒಪ್ಪುವಂತೆ ಕೆಲಸ ಮಾಡಿದ್ದೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಹೊರಳಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡ 30ಕ್ಕೂ ಹೆಚ್ಚು ಕುರುಬ ಜನಾಂಗದ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಕ್ಷೇತ್ರಕ್ಕೆ ನಾನ್ಯಾರು ಎಂದು ಗೊತ್ತಿಲ್ಲದ ವೇಳೆ ಹೊಸ ಮುಖಬೇಕೆಂದು ಜಿಪಂ ಸದಸ್ಯನಾಗಿದ್ದ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ನನ್ನ ಮೇಲೆ ವಿಶ್ವಾಸವಿಟ್ಟು ಶಾಸಕನಾಗಿ ಆಯ್ಕೆ ಮಾಡಿದ ನಿಮ್ಮ ಗೌರವಕ್ಕೆ ಚ್ಯುತಿ ಬರದಂತೆ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡುತ್ತಾ ಬಂದಿದ್ದೇನೆ. ಆ ಮೂಲಕ ಕ್ಷೇತ್ರದ ಗೌರವ ಕಾಪಾಡಿಕೊಂಡಿದ್ದು, ಕೋವಿಡ್, ಪ್ರವಾಹ ಸಂದರ್ಭ ನಮ್ಮ ಸರ್ಕಾರ ಇಲ್ಲದಿದ್ದರೂ ಅತಿ ಹೆಚ್ಚಿನ ಅನುದಾನದೊಂದಿಗೆ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇನೆ. ಎಲ್ಲ ಜಾತಿ, ಜನಾಂಗದವರ ವಿಶ್ವಾಸ ಪಡೆದು ಯಾರಿಗೂ ನೋವಾಗದಂತೆ ಆತ್ಮಸಾಕ್ಷಿಗೆ ಒಪ್ಪುವಂತೆ ಕೆಲಸ ಮಾಡಿದ್ದೇನೆ ಎಂದರು.

ವಿವಿಧ ಪಕ್ಷಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾಗುತ್ತಿರುವುದು ಸಂತಸ ತಂದಿದ್ದು, ರೈತರ ಪರ ಕೆಲಸ ಮಾಡುವ ಏಕೈಕ ಪಕ್ಷ ಜೆಡಿಎಸ್‌ಗೆ ಕ್ಷೇತ್ರದಲ್ಲಿ ಜನಮತ ಹೆಚ್ಚುತ್ತಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ನೊಂದಿಗೆ ಜೆಡಿಎಸ್ ಪಕ್ಷವನ್ನು ಹೋಲಿಸಿದಾಗ ಬಡವರು, ದೀನ ದಲಿತರು, ಹಿಂದುಳಿದ ವರ್ಗಗಳ ಪರ ಕೆಲಸ ಮಾಡಿದ ಪಕ್ಷಗಳ ಸಾಲಿನಲ್ಲಿ ಜೆಡಿಎಸ್ ಪಕ್ಷ ಮುಂಚೂಣಿಯಲ್ಲಿ ನಿಲ್ಲುತ್ತದೆ ಎಂದರು.

ಮಹದೇವಪ್ಪ ಆರೋಪಕ್ಕೆ ತಿರುಗೇಟು!: ಕ್ಷೇತ್ರದ ಜನತೆ ಶಾಸಕನಾಗಿ ಆಯ್ಕೆ ಮಾಡಿರುವುದು ಕ್ಷೇತ್ರದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲಷ್ಟೇ. ಹಾಗಾಗಿ ಜನಸೇವೆಗಷ್ಟೇ ನನ್ನ ಆದ್ಯತೆ. ಎಲ್ಲೋ ಕುಳಿತು ಏನೋ ಮಾತನಾಡುವ ಜಾಯಮಾನ ನನ್ನದಲ್ಲ. ಜನರೊಂದಿಗೆ ಬೆರೆತು, ಜನರಲ್ಲೇ ಒಬ್ಬನಾಗಿರುವ ಶಾಸಕ ನಾನು ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಆರೋಪಗಳಿಗೆ ತಿರುಗೇಟು ನೀಡಿದರು.

ಮುಖಂಡರು ಕಟ್ಟಿ ಹಾಕಿಲ್ಲ: ಪಕ್ಷದ ಮುಖಂಡರು ಅಭಿವೃದ್ಧಿ ಕೆಲಸಗಳಿಗೆ ತೊಂದರೆ ನೀಡುತ್ತಿಲ್ಲ. ಇಂತಹದ್ದೇ ಕೆಲಸ ಮಾಡಬೇಕೆಂದು ಲಕ್ಷ್ಮಣ ರೇಖೆ ಹಾಕಿಲ್ಲ. ಕ್ಷೇತ್ರದಾದ್ಯಂತ ಓಡಾಟ ಮಾಡಿ ಯಾರಿಗೂ ಅಸಮಾಧಾನ ಉಂಟಾಗದ ರೀತಿ ಅಭಿವೃದ್ಧಿ ಕಾರ್ಯ ಮಾಡುತ್ತಿದ್ದೇನೆ. ಇದಕ್ಕೆ ಎಲ್ಲಾ ಸಮುದಾಯದ ಮುಖಂಡರು ಸಹಕಾರ ನೀಡುತ್ತಿದ್ದಾರೆ. ಕ್ಷೇತ್ರದ ಜನತೆಗೆ ನನ್ನ ಮೇಲೆ ಸಂಪೂರ್ಣ ವಿಶ್ವಾಸವಿದ್ದು, ಕ್ಷೇತ್ರದ ಜನತೆ ಮೇಲೆ ನನಗೂ ಸಂಪೂರ್ಣ ನಂಬಿಕೆ ಇದೆ. ಪಕ್ಷದ ಕಾರ್ಯಕರ್ತರು, ಮುಖಂಡರು ಹೆಚ್ಚಿನ ಕೆಲಸ ಮಾಡಲು ಪ್ರೋತ್ಸಾಹ ನೀಡುತ್ತಿದ್ದು, ಗ್ರಾಮಗಳ ಅಭಿವೃದ್ಧಿ ಕಡೆ ಚಿಂತಿಸೋಣ ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಮನಸ್ತಾಪ ಬೇಡ: ಕ್ಷೇತ್ರದಲ್ಲಿ ಜೆಡಿಎಸ್ ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿದ್ದು, ಮನಸ್ತಾಪ ಮಾಡಿಕೊಳ್ಳಬೇಡಿ. ಅಕಸ್ಮಾತ್ ಇದ್ದಲ್ಲಿ ನನ್ನ ಗಮನಕ್ಕೆ ತನ್ನಿ, ನಾವೇ ಮನಸ್ತಾಪ ಬಗೆಹರಿಸಿಕೊಳ್ಳುತ್ತೇವೆಂದು ಗೊಂದಲ ಮಾಡಿಕೊಳ್ಳಬೇಡಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಎಪಿಎಂಸಿ ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಮಹದೇವಯ್ಯ, ಕುರುಬ ಸಮುದಾಯದ ಹಿರಿಯ ಮುಖಂಡ ಮೂಗೂರು ಶಿವಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಉಕ್ಕಲಗೆರೆ ಅಡುಗೆ ಕುಮಾರ್, ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಗುರುರಾಜ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಶಿವಲಿಂಗಯ್ಯ, ಯಜಮಾನ್ ಮಹದೇವಯ್ಯ, ಡ್ರಾಮಾ ಮಾಸ್ಟರ್ ನಿಂಗರಾಜು, ಪಶು ಸಂಗೋಪನಾ ಇಲಾಖೆಯ ನಂಜಯ್ಯ, ಮಹದೇವಯ್ಯ, ಗ್ರಾಪಂ ಸದಸ್ಯ ಶಿವು, ಭಾಗ್ಯ, ಕಸಬಾ ಪಿಎಸಿಎಸ್ ಮಾಜಿ ಅಧ್ಯಕ್ಷ ಮಾದಯ್ಯ, ಉಪ್ಪಾರ ಮಹಾಸಭಾ ಅಧ್ಯಕ್ಷ ರಾವಣ್‌ಶೆಟ್ಟಿ, ಮೂಗೂರು ಎಂ.ಕೆ. ಸಿದ್ದರಾಜು, ಧರ್ಮ ರತ್ನಕುಮಾರ, ಆಪ್ತ ಸಹಾಯಕ ನಾಗರಾಜ್. ಬೇವಿನಹಳ್ಳಿ ಸತೀಶ್. ಮತ್ತಿತರರಿದ್ದರು.

6 ಎಲ್ಲಾ ಸಮುದಾಯವನ್ನು ಒಂದೇ ರೀತಿ ನೋಡುವ ಮೂಲಕ ಶಾಸಕರು ಮಾದರಿಯಾಗಿದ್ದಾರೆ. ನಿಜಕ್ಕೂ ಇಂತಹ ಶಾಸಕರನ್ನು ಪಡೆದಿರುವುದಕ್ಕೆ ಕ್ಷೇತ್ರದ ಜನರು ಹೆಮ್ಮೆ ಪಡಬೇಕು. ಹಿಂದೆ ಇದ್ದ ಶಾಸಕರನ್ನು ಭೇಟಿಯಾಗಲು ಪ್ರಭಾವಿ ಕಾಂಗ್ರೆಸ್ ಮುಖಂಡರನ್ನು ಕರೆದೊಯ್ಯುವ ಪರಿಸ್ಥಿತಿ ಇತ್ತು. ಆದರೀಗ ನಮ್ಮ ಶಾಸಕರು ಸಾಮಾನ್ಯ ಕಾರ್ಯಕರ್ತನ ಕೈಗೆಟಕುವ ಶಾಸಕರಾಗಿದ್ದಾರೆ. ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷಕ್ಕೆ ಹೆಚ್ಚಿನ ಕಾರ್ಯಕರ್ತರು ಸೇರ್ಪಡೆಯಾಗುತ್ತಿದ್ದು, ಕಳೆದ ಬಾರಿ 28 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದ ಅಶ್ವಿನ್ ಕುಮಾರ್ ಗೆಲುವಿನ ಅಂತರ ಈ ಬಾರಿ ಇನ್ನೂ ಹೆಚ್ಚಲಿದೆ.

–ಸಿ.ಬಿ.ಹುಂಡಿ ಚಿನ್ನಸ್ವಾಮಿ, ಕ್ಷೇತ್ರ ಜೆಡಿಎಸ್ ಅಧ್ಯಕ್ಷರು.

ಶೈಕ್ಷಣಿಕ, ಸಾಮಾಜಿಕವಾಗಿ ನಾಯಕ ಸಮುದಾಯ ಹಿಂದುಳಿದಿದೆ

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಬೇಸರ



ನಂಜನಗೂಡು, ಜ.1– ನಾಡು ಕಟ್ಟಿದ ಹಕ್ಕ–ಬುಕ್ಕ, ಮದಕರಿ ನಾಯಕ, ಭಕ್ತಿಗಾಗಿ ಕಣ್ಣುಕೊಟ್ಟ ಬೇಡರ ಕಣ್ಣಪ್ಪ, ಗುರು ಭಕ್ತಿಗಾಗಿ ಬೆರಳು ಕೊಟ್ಟ ಏಕಲವ್ಯ, ರಾಮಾಯಣ ಬರೆದ ಮಹರ್ಷಿ ವಾಲ್ಮೀಕಿಯಂತಹ ಅನೇಕ ಐತಿಹಾಸಿಕ ಪುರುಷರು ನಾಯಕ ಸಮಾಜದಲ್ಲಿ ಜನ್ಮ ತಾಳಿದರೂ ಶೈಕ್ಷಣಿಕ, ಸಾಮಾಜಿಕವಾಗಿ ಸಮುದಾಯ ಹಿಂದುಳಿದಿದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಬೇಸರ ವ್ಯಕ್ತಪಡಿಸಿದರು.

ನಗರದ ವಾಲ್ಮೀಕಿ ಭವನದಲ್ಲಿ ನಾಯಕ ನೌಕರರ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ನಿವೃತ್ತ ನೌಕರರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಯಾರೂ ಉತ್ತಮರೂ ಅಲ್ಲ ಕನಿಷ್ಠರೂ ಅಲ್ಲ, ಪ್ರತಿಭೆ ಎಲ್ಲರಲ್ಲೂ ಅಡಗಿರುತ್ತದೆ. ಪ್ರತಿಭೆ ಅನಾವರಣಗೊಳಿಸಲು ವೇದಿಕೆ ಸೃಷ್ಟಿಯಾಗಬೇಕು. ಸಂಘ ಸಂಸ್ಥೆಗಳು ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು ಉತ್ತೇಜಿಸುವಂತಹ ಕಾರ್ಯಕ್ರಮ ರೂಪಿಸಿದಾಗ ಮಾತ್ರ ಆ ಸಮಾಜ ಶೈಕ್ಷಣಿಕವಾಗಿ ಮುಂದುವರೆಯಲು ಸಾಧ್ಯ. ಈ ನಿಟ್ಟಿನಲ್ಲಿ ನಾಯಕ ನೌಕರರ ಸಂಘದವರು ಪ್ರತಿಭಾವಂತರನ್ನು ಪುರಸ್ಕರಿಸುತ್ತಿರುವುದು ಉತ್ತಮವಾಗಿದೆ ಎಂದರು.

ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ ಮಾತನಾಡಿದರು. ಇದೇ ವೇಳೆ ಸಮಾರಂಭದಲ್ಲಿ ಐಸಿಎಆರ್ ನಡೆಸಿದ ಪಿಎಚ್‌ಡಿ ಪದವಿ ಪ್ರವೇಶ ಪರೀಕ್ಷೆಯಲ್ಲಿ ಎಸ್ಟಿ ವಿಭಾಗದಲ್ಲಿ 2ನೇ ಸ್ಥಾನ ಮತ್ತು ಸಾಮಾನ್ಯ ವಿಭಾಗದಲ್ಲಿ 4ನೇ ಸ್ಥಾನ ಪಡೆದ ತಾಲೂಕಿನ ಬೊಕ್ಕಹಳ್ಳಿ ಗ್ರಾಮದ ಅರ್ಪಿತಾ ನಾಯಕ್ ಅವರನ್ನು ಮತ್ತು ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಬಂಗಾರಸ್ವಾಮಿ, ಹನುಮಂತನಾಯಕ, ದೇವನಾಯಕ, ಮಂಜುನಾಥ, ಹೊಣಕಾರ ನಾಯಕ, ಸಿದ್ದರಾಜು, ಮಹೇಶ, ಜಯರಾಂ, ಸೇರಿದಂತೆ ಹಲವರಿದ್ದರು.




ಕೆ.ಆರ್.ನಗರ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ವೈದ್ಯೆ ಡಾ.ಸುಷ್ಮಿತ ಪಿ. ಬಳೆ ಅವರನ್ನು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಸನ್ಮಾನಿಸಿದರು. ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಕಾಂತರಾಜು, ಡಾ.ಚಂದ್ರಕಲಾ, ಸುಷ್ಮಿತ ತಂದೆ ಪ್ರಭುಶಂಕರ್, ಹೆಬ್ಬಾಳು ಗ್ರಾಪಂ ಮಾಜಿ ಅಧ್ಯಕ್ಷ ಮಾದೇಗೌಡ, ಮಂಜುನಾಥ್, ಪರಮೇಶ್, ವೈದ್ಯಾಧಿಕಾರಿಗಳಾದ ಡಾ.ನಾಗೇಂದ್ರ ಕುಮಾರ್, ಡಾ.ಭವಾನಿ, ಜಗದೀಶ್, ಸಂತೋಷ್‌ಗೌಡ, ನೌಕರರ ಸಂಘದ ಅಧ್ಯಕ್ಷ ಅರುಣ್‌ಕುಮಾರ್, ಕೃಷ್ಣಶೆಟ್ಟಿ, ಹೋಟೆಲ್ ಮಹದೇವ, ಪ್ರತಾಪ್ ರೆಡ್ಡಿ, ಮುಖಂಡ ಮಹದೇವು ಇತರರಿದ್ದರು.



ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಗೆ ಆಯ್ಕೆಯಾದ ನಂಜನಗೂಡು ತಾಲೂಕಿನ ಕಣೇನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿ ಜಯಸೂರ್ಯನನ್ನು ಕೃಷಿ ಟ್ರಾಕ್ಟರ್ ಮಾಲೀಕರು ಹಾಗೂ ರೈತ ಸಂಘದಿಂದ ಸನ್ಮಾನಿಸಲಾಯಿತು. ಈ ವೇಳೆ ಶಿವನಾಗಪ್ಪ, ಮೂರ್ತಿ, ಮಹದೇವಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಜೆಡಿಎಸ್‌ನಿಂದ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯ

ಪಿ.ಪಟ್ಟಣ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ



ಬೈಲಕುಪ್ಪೆ, ಜ.1– ಪ್ರಾದೇಶಿಕ ಪಕ್ಷ ಜೆಡಿಎಸ್‌ನಿಂದ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯ ಎಂದು ಪಿರಿಯಾಪಟ್ಟಣ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ ತಿಳಿಸಿದರು.

ಇಲ್ಲಿಗೆ ಸಮೀಪದ ಚಿಕ್ಕನೇರಳೆ ಹಾಗೂ ನಿಲವಾಡಿ ಗ್ರಾಮದಲ್ಲಿ ಶಾಸಕರೊಂದಿಗೆ 40 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಶಾಸಕ ಕೆ.ಮಹದೇವ್ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇಲ್ಲದಿದ್ದರೂ ಕೋಟ್ಯಾಂತರ ರೂ. ಅನುದಾನ ತಂದು ತಾಲೂಕಿನ 400 ಹಳ್ಳಿಗಳಿಗೂ ಹಂಚಿಕೆ ಮಾಡಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಗಲಿರುಳು ದುಡಿಯುತ್ತಿದ್ದಾರೆ. ಅವರ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ಪರಿಚಯಿಸುವ ಜೊತೆಗೆ ತಾಲೂಕಿನಲ್ಲಿ ಪಕ್ಷವನ್ನು ಇನ್ನಷ್ಟು ಬಲಪಡಿಸಲು ಜೆಡಿಎಸ್ ಕಾರ್ಯಕರ್ತರು, ಯುವಕರು, ಸಹಕರಿಸಬೇಕು ಎಂದರು.

ಶಾಸಕ ಕೆ.ಮಹದೇವ್ ಮಾತನಾಡಿ, ಸಿಕ್ಕ ಅವಕಾಶವನ್ನು ಕ್ಷೇತ್ರದ ಜನರ ಅಭಿವೃದ್ಧಿಗಾಗಿ ಸದುಪಯೋಗಪಡಿಸಿಕೊಂಡ ತೃಪ್ತಿ ನನಗಿದೆ. ಈ ಬಾರಿಯೂ ಮತದಾರರು ಆಶೀರ್ವಾದ ಮಾಡುವ ನಿರೀಕ್ಷೆ ಇದೆ. ಕ್ಷೇತ್ರದ ಜನರು ಮತ್ತೊಮ್ಮೆ ಆಶೀರ್ವಾದ ಮಾಡಿದರೆ ದುಪ್ಪಟ್ಟು ಅಭಿವೃದ್ಧಿ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಎಇಇ ನವೀನ್ ಎನ್.ಕೆ, ಗ್ರಾಪಂ ಅಧ್ಯಕ್ಷ ಗಣೇಶ್, ಚಂದ್ರಕಲಾ, ಮುಖಂಡರಾದ ಅಣ್ಣೇಗೌಡ, ನಂದೀಶ್, ಗ್ರಾಮಸ್ಥರು ಹಾಜರಿದ್ದರು.

ವಾಲಿಬಾಲ್ ಟೂರ್ನಿ

ಬೆಟ್ಟದಪುರ, ಜ.1– ಬೆಟ್ಟದಪುರ ಹೋಬಳಿ ಹಲಗನಹಳ್ಳಿ ಗ್ರಾಮದಲ್ಲಿ ಹೊನಲು ಬೆಳಕಿನ ಸಿದ್ದು ಕಪ್ ವಾಲಿಬಾಲ್ ಟೂರ್ನಿಯನ್ನು ಗ್ರಾಮದ ಯುವ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದೆ. ಜ.7, 8ರಂದು ಪಂದ್ಯಾವಳಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ರೈತರು ಹೈನುಗಾರಿಕೆ ಮೂಲಕ ಆರ್ಥಿಕವಾಗಿ ಸದೃಢರಾಗಿ

ಪಶು ಸಂಗೋಪನಾ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಡಾ.ಷಡಕ್ಷರಮೂರ್ತಿ ಸಲಹೆ



ತಿ.ನರಸೀಪುರ, ಜ.1– ರೈತರು ಹೈನುಗಾರಿಕೆ ಮೂಲಕ ಆರ್ಥಿಕವಾಗಿ ಸದೃಢರಾಗಿ ನೆಮ್ಮದಿ ಜೀವನ ನಡೆಸುವಂತೆ ಪಶು ಸಂಗೋಪನಾ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಡಾ.ಬಿ.ಎನ್.ಷಡಕ್ಷರಮೂರ್ತಿ ಸಲಹೆ ನೀಡಿದರು.

ತಾಲೂಕಿನ ತಲಕಾಡು ಗ್ರಾಮದ ನಾಯಕ ಜನಾಂಗದ ಸಮುದಾಯ ಭವನದಲ್ಲಿ ಮೈಸೂರಿನ ಶ್ರೀಗಂಗಾ ಚಾರಿಟಬಲ್ ಟ್ರಸ್ಟ್, ಕರ್ನಾಟಕ ಕುರಿ ಮತ್ತು ಉಣ್ಣೆ ನಿಗಮ ನಿಯಮಿತ, ಪಟ್ಟಣದ ಪಶು ಸಂಗೋಪನಾ ಇಲಾಖೆ ಹಾಗೂ ಕುರಿ ಮತ್ತು ಮೇಕೆ ರೈತ ಉತ್ಪಾದಕ ಕಂಪನಿ ನಿಯಮಿತ ಸಂಯುಕ್ತಾಶ್ರಯದಲ್ಲಿ ನಡೆದ ಕುರಿ, ಮೇಕೆ ಮತ್ತು ಹಸು ಸಾಕಾಣಿಕೆ ಬಗ್ಗೆ ಒಂದು ದಿನದ ಉಚಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಪಶು ಸಂಗೋಪನೆ ಲಾಭದಾಯಕ ಕಸುಬಾಗಿದೆ. ರೈತರು ಆರ್ಥಿಕವಾಗಿ ಬಲಾಢ್ಯರಾಗಲು ಪಶು ಸಂಗೋಪನೆ ಸಹಕಾರಿಯಾಗಿದೆ. ಹೆಚ್ಚಾಗಿ ಕುರಿ, ಮೇಕೆ ಮತ್ತು ಹಸು ಸಾಕಾಣಿಕೆ ಮಾಡಿದಲ್ಲಿ ಅದಕ್ಕೆ ಉತ್ತಮ ಮಾರುಕಟ್ಟೆಯನ್ನು ಸರ್ಕಾರ ಕಲ್ಪಿಸಲಿದೆ. ಪಶು ಸಂಗೋಪನೆಯಿಂದ ಲಾಭವೇ ಹೊರತು ನಷ್ಟವಾಗಲು ಸಾಧ್ಯವಿಲ್ಲ. ಹಾಗಾಗಿ ಗಂಗಾ ಚಾರಿಟಬಲ್ ಟ್ರಸ್ಟ್ ಏರ್ಪಡಿಸಿರುವ ಉಚಿತ ತರಬೇತಿ ಕಾರ್ಯಕ್ರಮದ ಸದುಪಯೋಗಕ್ಕೆ ರೈತರು ಮುಂದಾಗಬೇಕು. ರೈತರು ತಮ್ಮ ಹೆಸರನ್ನು ನೋಂದಣಿ ಮಾಡಿ ಹೆಚ್ಚಿನ ಮಾಹಿತಿ ಪಡೆದು ಆರ್ಥಿಕವಾಗಿ ಸಬಲರಾಗಬೇಕೆಂದು ಕರೆ ನೀಡಿದರು.

ಶ್ರೀಗಂಗಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಜ್‌ಕಾಮಯ್ಯ ಮಾತನಾಡಿ, ತಲಕಾಡಿನಲ್ಲಿ ನಡೆಯುತ್ತಿರುವ 27ನೇ ಕಾರ್ಯಕ್ರಮ ಇದಾಗಿದ್ದು, ಕುರಿ ಸಾಕಾಣಿಕೆ ಹಾಗೂ ವ್ಯಾಕ್ಸಿನೇಷನ್ ಬಗ್ಗೆ ತರಬೇತಿ ನೀಡುವ ಜೊತೆಗೆ ಬ್ಯಾಂಕ್‌ನಿಂದ ಸಾಲ ಪಡೆದು ಸ್ವಾವಲಂಬಿಗಳಾಗಿ ಬದುಕಲು ಬೇಕಾದ ಸಹಾಯವನ್ನು ಟ್ರಸ್ಟ್ ಮಾಡುತ್ತದೆ. ನಬಾರ್ಡ್‌ನಿಂದ ಉದ್ದೇಶಿತ ಕಾರ್ಯಕ್ಕೆ ಸಬ್ಸಿಡಿ ದೊರಕಲಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಡಾ.ಡಿ.ಎನ್. ನಾಗರಾಜು, ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಲಿಂಗರಾಜು, ತಲಕಾಡು ಪಶು ಸಂಗೋಪನಾ ಇಲಾಖೆ ಎಸ್‌ವಿಓ ಡಾ.ನಿಶಾಂತ್, ಕುರಿ ಮತ್ತು ಮೇಕೆ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಉಮಾ ಶಂಕರ್, ಗಂಗಾ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ದಿವ್ಯಶ್ರೀ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.35ಕ್ಕೆ, ವೇದ (ಕ): ಮ.1ಕ್ಕೆ, ಸಂ.6.55ಕ್ಕೆ, ರಾ.9.55ಕ್ಕೆ, ಕಾಂತಾರ (ಕ): ಸಂ.4ಕ್ಕೆ.

ಸ್ಕ್ರೀನ್ 2 ಮೇಡ್ ಇನ್ ಬೆಂಗಳೂರು (ಕ): ಬೆ.10.40ಕ್ಕೆ, ಡ್ರೈವರ್ ಜಮುನಾ (ತ): ಮ.2.05ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಸಂ.4.30ಕ್ಕೆ, ಲಕ್ಕಿ ಲಕ್ಷ್ಮಣ್ (ತೆ): ರಾ.7ಕ್ಕೆ, ಓ ಮೈ ಗೋಸ್ಟ್ (ತ): ರಾ.9.55ಕ್ಕೆ.

ಸ್ಕ್ರೀನ್ 3 ಸರ್ಕಸ್ (ಹಿಂ): ಬೆ.11.05ಕ್ಕೆ, ಪದವಿ ಪೂರ್ವ (ಕ): ಮ.1.55ಕ್ಕೆ, ನಾನು ಅದು ಮತ್ತು ಸರೋಜ (ಕ): ಸಂ.4.30ಕ್ಕೆ, ರಾಂಗಿ (ತ): ರಾ.7.10ಕ್ಕೆ, ಟಾಪ್ ಗೇರ್ (ತೆ): ರಾ.10.15ಕ್ಕೆ.

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.50ಕ್ಕೆ, ಮ.2.30ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಬೆ.10.05ಕ್ಕೆ, ವೇದ (ಕ): ಮ.12.40ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.10ಕ್ಕೆ,

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,

ಸ್ಕ್ರೀನ್ 3 ವೇದ (ಕ): ಬೆ.9.50ಕ್ಕೆ, ಆಲ್ಫಾ (ಕ): ಮ.3.05ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.40ಕ್ಕೆ, ರಾ.9.30ಕ್ಕೆ,

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10ಕ್ಕೆ, ನಾನು ಅದು ಮತ್ತು ಸರೋಜ (ಕ): ಮ.1.40ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.4.20ಕ್ಕೆ, ಲವ್ ಸ್ಟೋರಿ 1998 (ಕ): ರಾ.7.55ಕ್ಕೆ, ಸೆಂಬಿ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.9ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಸರ್ಕಸ್ (ಹಿಂ): ಬೆ.9.55ಕ್ಕೆ, ಮ.12.20ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ, ಧಮಾಕ (ತೆ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, 18 ಪೇಜಸ್ (ತೆ): ಮ.1ಕ್ಕೆ, ರಾ.7ಕ್ಕೆ, ವಿಶಾಲ್ ಇನ್ ಲಾಠಿಚಾರ್ಜ್ (ತ): ಬೆ.10.22ಕ್ಕೆ, ಸಂ.4.20ಕ್ಕೆ, ರಾ.9.45ಕ್ಕೆ, ಕನೆಕ್ಟ್ (ತ): ರಾ.7.25ಕ್ಕೆ, ಕಾಪ (ಮ): ಮ.1.25ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಂಗ್‌ಡಂ ಆಫ್ ದಿ ಡೈನೋಸರಸ್ (ಇಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲವ್ ಸ್ಟೋರಿ 1998 (ಕ)	4 ಪ್ರದರ್ಶನಗಳು
ಸಂಗಂ	
ಜಮಾಲಿಗುಡ್ಡ (ಕ)	4 ಪ್ರದರ್ಶನಗಳು
ಲಿಡೋ	
ನಾನು ಅದು ಮತ್ತು ಸರೋಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು



ತಿ.ನರಸೀಪುರದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಅಮರಶಿಲ್ಪಿ ಜಕಣಾಚಾರಿ ಜಯಂತಿ ಆಚರಿಸಲಾಯಿತು. ವಿಶ್ವಕರ್ಮ ಸಮಾಜದ ಅಧ್ಯಕ್ಷ ಬನ್ನೂರು ಪ್ರಭಾಕರ್, ಸಮಾಜ ಮುಖಂಡರಾದ ಹುಣಸೂರು ಶಿವಕುಮಾರಚಾರ್, ಸಿದ್ದಪ್ಪಾಜಿ, ಸಿದ್ದು, ಬೀಡನಹಳ್ಳಿ ಬಸವರಾಜು, ಕುಮಾರ್, ಮಹೇಶ್, ದ್ವಿತೀಯ ದರ್ಜೆ ಸಹಾಯಕ ನಿತಿನ್, ಅರವಿಂದ್, ಸಮಾಜ ಕಲ್ಯಾಣ ಇಲಾಖೆ ಮಹದೇವಮೂರ್ತಿ ಮತ್ತಿತರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ವಡ್ಡರಪಾಳ್ಯದಲ್ಲಿ ಶ್ರೀವೆಂಕಟೇಶ್ವರ ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಗೋವಿಂದರಾಜು, ಕಟ್ಟಡ ಕಾರ್ಮಿಕ ನಿರೀಕ್ಷಕ ಶಶಿಧರ್, ನಿವೃತ್ತ ವೃತ್ತ ನಿರೀಕ್ಷಕ ಬಸವರಾಜು, ಜೀವಿಕ ಸಂಚಾಲಕ ಚಂದ್ರಶೇಖರ್, ಬೋವಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಮ್, ಕರ್ನಾಟಕ ಜೀತದಾಳು ಹಾಗೂ ಕಾರ್ಮಿಕ ಒಕ್ಕೂಟ ಸಂಘದ ಅಧ್ಯಕ್ಷ ಮಹದೇವು, ಕಟ್ಟಡ ಕಾರ್ಮಿಕರ ಸಂಘದ ಉಪಾಧ್ಯಕ್ಷ ಶ್ರೀನಿವಾಸ್, ಖಜಾಂಚಿ ಗೋಪಾಲ್, ಗೌರವಾಧ್ಯಕ್ಷ ಶ್ರೀನಿವಾಸ, ಸಹ ಕಾರ್ಯದರ್ಶಿ ಮಲ್ಲಯ್ಯ, ಸಂಘಟನಾ ಕಾರ್ಯದರ್ಶಿ ಮಲ್ಲೇಶ, ನಿರ್ದೇಶಕರಾದ ಮಲ್ಲೇಶ, ಕೇಶವ, ಸುರೇಶ, ಮಾದೇವ, ಗ್ರಾಪಂ ಸದಸ್ಯ ಮುರಳೀಗೌಡ, ಶ್ರೀನಿವಾಸ್ ಸೇರಿದಂತೆ ಇನ್ನಿತರರಿದ್ದರು.


ಶಿವಮ್ಮ ನಿಧನ



ನಂಜನಗೂಡು, ಜ.1– ತಾಲೂಕಿನ ಮರಸೇ ಗ್ರಾಮದ ನಿವಾಸಿ ಶಿವಮ್ಮ(45) ಭಾನುವಾರ ನಿಧನರಾದರು. ಮೃತರು ಪತಿ, ಗ್ರಾಪಂ ಸದಸ್ಯ ಸಿದ್ದಪ್ಪ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈ ಬಾರಿ ಶಾಸಕನಾಗಿ ಆಯ್ಕೆಮಾಡಿ ಆಶೀರ್ವದಿಸಿ

ಸ್ವಾಗತ ಆರ್ಚ್‌ಗೆ ಗುದ್ದಲಿ ಪೂಜೆ ನೆರವೇರಿಸಿ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮನವಿ



ಭೇರ್ಯ, ಜ.1– ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಹೀಗಾಗಿ ಈ ಬಾರಿ ನನಗೆ ಸಂಪೂರ್ಣ ಬೆಂಬಲ ನೀಡುವ ಮೂಲಕ ಶಾಸಕನಾಗಿ ಆಯ್ಕೆ ಮಾಡಿ ಆಶೀರ್ವದಿಸುವಂತೆ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮನವಿ ಮಾಡಿದರು.

ಭೇರ್ಯ ಗ್ರಾಮದ ಆದಿಜಾಂಬವ ಬಡಾವಣೆಯಲ್ಲಿ ಸ್ವಾಗತ ಆರ್ಚ್‌ಗೆ ಗುದ್ದಲಿ ಪೂಜೆ ನೆರವೇರಿಸಿ, ಜೆಡಿಎಸ್ ಮುಖಂಡರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ಈ ಬಾರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ಕಾಂಗ್ರೆಸ್ ಸಂಪೂರ್ಣ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು.

ರಾಜ್ಯದಲ್ಲಿ 5 ವರ್ಷ ಮಾಜಿ ಸಿಎಂ ಡಿ. ದೇವರಾಜ ಅರಸು ಆಡಳಿತ ನೀಡಿದ್ದು ಬಿಟ್ಟರೆ ನಮ್ಮ ನಾಯಕರಾದ ಮಾಜಿ ಸಿಎಂ ಸಿದ್ದರಾಮಯ್ಯನವರು ಆಡಳಿತ ನಡೆಸಿದರು. ಈ ವೇಳೆ ಕ್ಷೇತ್ರದ ಸಮುದಾಯ ಭವನಗಳಿಗೆ ಹಾಗೂ ರಸ್ತೆ ಅಭಿವೃದ್ಧಿಗೆ ಸಾಕಷ್ಟು ಅನುದಾನ ತರಲಾಯಿತು ಎಂದರು.

ಮಿರ್ಲೆ ಜಿಪಂ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಮುಖಂಡ ಸಿ.ಪಿ.ರಮೇಶ್ ಕುಮಾರ್ ನನ್ನ ಪರವಾಗಿ ಜನಪರ ಕಾರ್ಯದ ಜೊತೆಗೆ ನೊಂದವರಿಗೆ ಸಹಾಯ ಮಾಡುತ್ತಾ ಬಂದಿದ್ದಾರೆ. ಈ ಭಾಗದಲ್ಲಿ ಕಾಂಗ್ರೆಸ್ ಬಲವರ್ಧನೆಗೆ ಸಾಕಷ್ಟು ದುಡಿದಿದ್ದಾರೆ. ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ಹಲವು ಸಮಸ್ಯೆಗಳಿಗೆ ಸಿ.ಪಿ.ರಮೇಶ್ ಅಥವಾ ನನ್ನನ್ನು ಸಂಪರ್ಕಿಸುವಂತೆ ತಿಳಿಸಿದರು.

ಇದೇ ಸಂದರ್ಭ ಗ್ರಾಪಂ ಸದಸ್ಯ ಬಿ.ಬಿ. ಶಿವಣ್ಣ, ಆದಿಜಾಂಬವ ಸಮುದಾಯದ ಯುವಕರಾದ ಚರಣ್‌ರಾಜ್, ಪ್ರಸನ್ನ, ಅಶೋಕ, ಮಂಜು, ಚಿನ್ನಪ್ಪ, ದುರ್ಗಾ ಪ್ರಸಾದ್, ಸಂಜು, ಮನೋಜ್, ಯತೀಶ್, ಅವಿನಾಶ್, ಮಹೇಶ್ ಕುಮಾರ್, ದರ್ಶನ್ ಮಂಜು, ಸುದೀಪ, ಶಂಕ್ರ, ವಿಜಯೇಂದ್ರ, ರಾಜು, ಅಪ್ಪು ಮಾದೇಶ, ವರ್ಷಿತ್, ಚೇತನ್, ಸಂಜು, ಗಿರೀಶ, ನಟರಾಜು, ಮಂಜುನಾಥ್, ಮನು ಸೇರಿದಂತೆ 35 ಮಂದಿ ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಎಲ್ಲಾ ಯುವಕರನ್ನು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಪಕ್ಷದ ಶಾಲು ಹೊದಿಸಿ ಸ್ವಾಗತಿಸಿ ಬರ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯ್ ಶಂಕರ್, ಮಾಜಿ ಅಧ್ಯಕ್ಷ ಡಿ.ತಮ್ಮಯ್ಯ, ಕಾಂಗ್ರೆಸ್ ಜಿಲ್ಲಾ ಅಲ್ಪಸಂಖ್ಯಾತ ಉಪಾಧ್ಯಕ್ಷ ಖಾಲೀದ್, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್ ಕಾಂಗ್ರೆಸ್ ಮುಖಂಡರಾದ ಪ್ರಶಾಂತ್ ಜೈನ್, ಬಿ.ಎಂ.ಸುದರ್ಶನ, ಬಿ.ಎಂ.ಕೃಷ್ಣೇಗೌಡ, ಅಶ್ವಥ್ ನಾರಾಯಣ್, ಗ್ರಾಪಂ ಮಾಜಿ ಸದಸ್ಯ ಸ್ವಾಮಿ, ಕಾಂಗ್ರೆಸ್ ಯುವ ಮುಖಂಡ ಬಿ.ಟಿ.ಮೋಹನ್, ಕೆ.ದಿನೇಶ್, ಬ್ಯಾಟಪ್ಪ, ರಾಘವೇಂದ್ರ, ಮಂಜುನಾಥ್, ಸಾಮಾಜಿಕ ಜಾಲತಾಣದ ಸಚಿನ್, ಪ್ರಕಾಶನಾಯಕ ಸೇರಿದಂತೆ ಅನೇಕರಿದ್ದರು.



ಕೊಡಗಿನ ಸಿರಿನಾಡು ವಿರಾಜಪೇಟೆಯಲ್ಲಿ ಬಿಜೆಪಿಗೆ ಬ್ರೇಕ್ ಹಾಕಲು ಕಾಂಗ್ರೆಸ್ ಶತಪ್ರಯತ್ನ

ಜೆಡಿಎಸ್‌ನದು ಮರಳಿ ಪ್ರಯತ್ನವ ಮಾಡು...

ವಿರಾಜಪೇಟೆಯ ಶಾಸಕರ ಪರಂಪರೆ

1957	ಸಿ.ಎಂ. ಪೂಣಚ್ಚ	ಕಾಂಗ್ರೆಸ್
1962	ಎ.ಪಿ. ಅಪ್ಪಣ್ಣ	ಕಾಂಗ್ರೆಸ್
1967	ಎನ್.ಎಲ್. ನಾಯಕ್	ಬಿಜೆಎಸ್
1972	ಜಿ.ಕೆ ಸುಬ್ಬಯ್ಯ	ಕಾಂಗ್ರೆಸ್
1978	ಜಿ.ಕೆ. ಸುಬ್ಬಯ್ಯ	ಕಾಂಗ್ರೆಸ್
1983	ಜಿ.ಕೆ. ಸುಬ್ಬಯ್ಯ	ಕಾಂಗ್ರೆಸ್
1985	ಸುಮಾ ವಸಂತ್	ಕಾಂಗ್ರೆಸ್
1989	ಸುಮಾ ವಸಂತ್	ಕಾಂಗ್ರೆಸ್
1994	ಹೆಚ್.ಡಿ. ಬಸವರಾಜ್	ಬಿಜೆಪಿ
1999	ಸುಮಾವಸಂತ್	ಕಾಂಗ್ರೆಸ್
2004	ಹೆಚ್.ಡಿ. ಬಸವರಾಜ್	ಬಿಜೆಪಿ
2008	ಕೆ.ಜಿ. ಬೋಪಯ್ಯ	ಬಿಜೆಪಿ
2013	ಕೆ.ಜಿ. ಬೋಪಯ್ಯ	ಬಿಜೆಪಿ
2018	ಕೆ.ಜಿ. ಬೋಪಯ್ಯ	ಬಿಜೆಪಿ


ಕೆ.ಜಿ.ಬೋಪಯ್ಯ


ಎ.ಎಸ್.ಪೊನ್ನಣ್ಣ


ವೀಣಾ ಅಚ್ಚಯ್ಯ


ಮನು ಮುತ್ತಪ್ಪ


ರವಿ ಕುಶಾಲಪ್ಪ


ನೆಲ್ಲೀರ ಚಲನ್


ರಾಬಿನ್ ದೇವಯ್ಯ


ರೀನಾ ಪ್ರಕಾಶ್


ಯೂಸೂಫ್ ಕೊಂಡಂಗೇರಿ


ಮನ್ಸೂರ್ ಅಲಿ



ವಿರಾಜಪೇಟೆ, ಜ.2–ಕೇರಳ ಗಡಿಗೆ ಹೊಂದಿಕೊಂಡಿರುವ ವಿರಾಜಪೇಟೆ ವಿಧಾನಸಭಾ ಕ್ಷೇತ್ರವು ಹೆಚ್ಚು ಗುಡ್ಡಗಾಡು ಹಾಗೂ ಅರಣ್ಯ ಪ್ರದೇಶವಾಗಿದೆ. ಈ ಕ್ಷೇತ್ರವು 1957ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 2008ರಲ್ಲಿ ಕ್ಷೇತ್ರ ಪುನರ್ವಿಂಗಡಣೆಯಾಗುವವರೆಗೆ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರವಾಗಿತ್ತು. ಆಗ ನಡೆದ 11 ಚುನಾವಣೆಗಳ ಪೈಕಿ 8ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದು, ಬಿಜೆಪಿ 2 ಬಾರಿ ಗೆದ್ದಿದೆ. ವಿಶೇಷವೆಂದರೆ ದೇಶಾದ್ಯಂತ ಕಾಂಗ್ರೆಸ್ ಅಲೆ ಇದ್ದಂತಹ 1967ರಲ್ಲೇ ಭಾರತೀಯ ಜನಸಂಘದ ಅಭ್ಯರ್ಥಿ ಎನ್.ಎಲ್. ನಾಯಕ್ ಅವರು ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು. ಕ್ಷೇತ್ರ ಪುನರ್ವಿಂಗಡಣೆ ನಂತರ ನಡೆದ ಎಲ್ಲಾ 3 ಚುನಾವಣೆಗಳಲ್ಲೂ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಮಾಜಿ ವಿಧಾನಸಭಾ ಅಧ್ಯಕ್ಷ ಕೆ.ಜಿ. ಬೋಪಯ್ಯ ಗೆಲುವು ಸಾಧಿಸಿದ್ದಾರೆ.

ಬೋಪಯ್ಯ ಅವರು ಒಟ್ಟಾರೆ 4 ಬಾರಿ ಶಾಸಕರಾಗಿದ್ದು, ವಿರಾಜಪೇಟೆ ಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದಾಗ 2004ರ ಚುನಾವಣೆಯಲ್ಲಿ ಮಡಿಕೇರಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. 2008ರಲ್ಲಿ ವಿರಾಜಪೇಟೆ ಸಾಮಾನ್ಯ ಕ್ಷೇತ್ರವಾಗಿ ಮಾರ್ಪಟ್ಟ ನಂತರ ಇಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

ಈ ಕ್ಷೇತ್ರದಿಂದ 3 ಬಾರಿ ಗೆಲುವು ಸಾಧಿಸಿದ್ದ ಸುಮಾ ವಸಂತ್ ಸಚಿವರಾಗಿದ್ದರು. ಕೆ.ಜಿ. ಬೋಪಯ್ಯ ಸಚಿವರಾಗದಿದ್ದರೂ ವಿಧಾನಸಭಾಧ್ಯಕ್ಷರ ಪೀಠ ಅಲಂಕರಿಸಿದ್ದರು. ಈ ಕ್ಷೇತ್ರದಲ್ಲಿ ಬೋಪಯ್ಯ ಹೊರತುಪಡಿಸಿದರೆ, ಹೆಚ್.ಡಿ. ಬಸವರಾಜು ಅವರು 2 ಬಾರಿ ಬಿಜೆಪಿಯಿಂದ ಸ್ಪರ್ಧಿಸಿ ಶಾಸಕರಾಗಿದ್ದರು. 1972ರಿಂದ 83ರವರೆಗಿನ 3 ಚುನಾವಣೆಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಿ.ಕೆ.ಸುಬ್ಬಯ್ಯ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರು. ವಿರಾಜಪೇಟೆ ಕ್ಷೇತ್ರ ಪುನರ್ವಿಂಗಡಣೆ ನಂತರ ಸೋಲಿಲ್ಲದ ಸರದಾರರಾಗಿ ಕೆ.ಜಿ. ಬೋಪಯ್ಯ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರೂ ಈ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆಯಲು ಪಕ್ಷದ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿ ಕುಶಾಲಪ್ಪ, ಹಿರಿಯ ಮುಖಂಡ ಮನು ಮುತ್ತಪ್ಪ, ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರೂ ಆದ ಎಪಿಎಂಸಿ ಅಧ್ಯಕ್ಷ ನೆಲ್ಲೀರ ಚಲನ್, ಬಿಜೆಪಿ ರಾಜ್ಯ ಸಮಿತಿ ಸದಸ್ಯೆ ರೀನಾ ಪ್ರಕಾಶ್ ಅವರುಗಳು ಪ್ರಯತ್ನಿಸುತ್ತಿದ್ದಾರೆ. ಮೂಲವೊಂದರ ಪ್ರಕಾರ ಕೆ.ಜಿ. ಬೋಪಯ್ಯ ಮುಂದಿನ ಚುನಾವಣೆಯಲ್ಲಿ ಮಡಿಕೇರಿ ಕ್ಷೇತ್ರದಿಂದ ಸ್ಪರ್ಧಿಸಬಹುದು. ಹಾಗೇ ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್ ವಿರಾಜಪೇಟೆಯಿಂದ ಕಣಕ್ಕಿಳಿಯಬಹುದು ಎಂದು ಹೇಳಲಾಗುತ್ತಿದೆಯಾದರೂ, ಅದು ಖಚಿತಪಟ್ಟಿಲ್ಲ.

ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಮಾಜಿ ಶಾಸಕ ದಿವಂಗತ ಎ.ಕೆ. ಸುಬ್ಬಯ್ಯ ಪುತ್ರರಾಗಿರುವ ಕೆಪಿಸಿಸಿ ಕಾನೂನು ವಿಭಾಗದ ಅಧ್ಯಕ್ಷರೂ ಆದ ಹೈಕೋರ್ಟ್ ವಕೀಲ ಎ.ಎಸ್. ಪೊನ್ನಣ್ಣ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಕಳೆದ ಕೆಲ ವರ್ಷಗಳಿಂದಲೇ ಅವರು ವಿರಾಜಪೇಟೆ ಕ್ಷೇತ್ರದಲ್ಲಿ ತಮ್ಮ ಕುಟುಂಬದ ಟ್ರಸ್ಟ್ ಮೂಲಕ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕ್ಷೇತ್ರದ ಜನರ ಸಂಪರ್ಕ ಹೊಂದಿದ್ದಾರೆ. ಕೊರೊನಾ ಸಾಂಕ್ರಾಮಿಕ ಸಮಯದಲ್ಲೂ ಜನರ ನೆರವಿಗೆ ಅವರು ನಿಂತಿದ್ದರು. ಎ.ಎಸ್. ಪೊನ್ನಣ್ಣ ಕಾಂಗ್ರೆಸ್‌ನಿಂದ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ ಎಂಬ ಮಾತುಗಳು ಕ್ಷೇತ್ರಾದ್ಯಂತ ವ್ಯಾಪಕವಾಗಿ ಕೇಳಿಬರುತ್ತಿದೆ. ಈ ಮಧ್ಯೆ ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಕೂಡ ವಿರಾಜಪೇಟೆ ಕ್ಷೇತ್ರದ ಟಿಕೆಟ್‌ಗಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಸಂಕೇತ್ ಪೂವಯ್ಯ ಕೆಲಕಾಲ ರಾಜಕಾರಣದಿಂದ ದೂರವಿದ್ದು ಸಮಾಜಸೇವೆಯಲ್ಲಿ ತೊಡಗಿದ್ದರು. ಇತ್ತೀಚೆಗೆ ಅವರ ಕುಟುಂಬದ ಕಾರ್ಯಕ್ರಮವೊಂದಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಗಮಿಸಿದ ನಂತರ ಸಂಕೇತ್ ಪೂವಯ್ಯ ಮತ್ತೇ ರಾಜಕೀಯ ರಂಗಕ್ಕೆ ಮರಳಿದರಾದರೂ, ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿಯನ್ನು ಹೊಂದಿಲ್ಲ. ಇನ್ನು ಮನ್ಸೂರ್ ಅಹಮದ್ ಅಲಿ ಮತ್ತು ಯೂಸೂಫ್ ಕೊಂಡಂಗೇರಿ ಅವರು ಜೆಡಿಎಸ್‌ನಿಂದ ವಿರಾಜಪೇಟೆ ಕ್ಷೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್‌ಗಾಗಿ ತೀವ್ರ ಪ್ರಯತ್ನಿಸುತ್ತಿದ್ದಾರೆ.

ವಸತಿ ಶಾಲೆಗಳ ದಾಖಲಾತಿಗೆ ಪ್ರವೇಶ ಪರೀಕ್ಷೆ

ಮೈಸೂರು, ಜ.2– 2022–23ನೇ ಸಾಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ, ಮಾದರಿ, ಅಟಲ್ ಬಿಹಾರಿ ವಾಜಪೇಯಿ, ಡಾ.ಬಿ.ಆರ್.ಅಂಬೇಡ್ಕರ್, ಇಂದಿರಾ ಗಾಂಧಿ ವಸತಿ ಶಾಲೆಗಳಿಗೆ 6ನೇ ತರಗತಿಗೆ ದಾಖಲಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಜ.5 ರಿಂದ 22 ರವರೆಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ವಸತಿ ಶಾಲೆಯಲ್ಲಿ ಸಲ್ಲಿಸಬೇಕಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗದ ವಿದ್ಯಾರ್ಥಿಗಳಿಗೆ 2.5 ಲಕ್ಷ ರೂ.ಗಳು, ಹಿಂದುಳಿದ ವರ್ಗ–1 ವಿದ್ಯಾರ್ಥಿಗಳಿಗೆ 2.5 ಲಕ್ಷ ರೂ.ಗಳು, ಹಿಂದುಳಿದ ವರ್ಗ 2ಎ, 2ಬಿ, 3ಎ, ಹಾಗೂ 3ಬಿ ವಿದ್ಯಾರ್ಥಿಗಳಿಗೆ 1 ಲಕ್ಷ ರೂ ಗಳ ವಾರ್ಷಿಕ ಆದಾಯದ ಮಿತಿ ಇರುತ್ತದೆ. ಸಫಾಯಿ ಕರ್ಮಚಾರಿ ನೌಕರರ ಮಕ್ಕಳಿಗೆ ಶೇಕಡ 5% ರಷ್ಟು ಸ್ಥಾನಗಳನ್ನು ವಿಶೇಷ ವರ್ಗದಡಿ ಹಂಚಿಕೆ ಮಾಡಲಾಗಿರುತ್ತದೆ. ಸದರಿ ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿ ಕಡ್ಡಾಯವಾಗಿ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕೆಂದು ತಿಳಿಸಲಾಗಿರುತ್ತದೆ. ಫೆ.12 ರಿಂದ ಪ್ರವೇಶ ಪತ್ರವನ್ನು http://kreis.kar.nic.in ಹಾಗೂ http://kea.kar.nic.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರವೇಶ ಪರೀಕ್ಷೆಯು 2022ರ ಮಾರ್ಚ್ 12 ಭಾನುವಾರ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಜ.2– ರಾಜ್ಯ ಸರ್ಕಾರವು ಮಹಿಳೆಯರ ಅಭಿವೃದ್ಧಿ ಕ್ಷೇತ್ರದಲ್ಲಿ ಕಳೆದ 5 ವರ್ಷಗಳಿಂದ ಶ್ರಮಿಸುತ್ತಿರುವ ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ, ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆತ್ಮ ಸ್ಥೈರ್ಯದಿಂದ ಹೋರಾಡಿ ಜೀವನೋಪಾಯದಿಂದ ಪಾರು ಮಾಡಿದಂತಹ ಅರ್ಹ ಮಹಿಳೆಯರಿಗೆ ವೀರ ಮಹಿಳೆ ಎಂದು ಗುರುತಿಸಿ, ಪ್ರತಿ ವರ್ಷ ಮಾರ್ಚ್ 08 ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಂದು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೂ ವೀರ ಮಹಿಳೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ಅರ್ಹ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಹಾಗೂ ವೀರ ಮಹಿಳೆ ಪ್ರಶಸ್ತಿಯನ್ನು ಅರ್ಹ ಮಹಿಳೆಗೆ ನೀಡಿ ಗೌರವಿಸುವ ಸಲುವಾಗಿ 2022–23ನೇ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು 2023 ರ ಜನವರಿ 10 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀ ಶಕ್ತಿ ಭವನ, ಕೃಷ್ಣದೇವರಾಯ ಸರ್ಕಲ್, ವಿಜಯನಗರ 2 ನೇ ಹಂತ, ಮೈಸೂರು–17 ಅನ್ನು ಸಂಪರ್ಕಿಸಬಹುದಾಗಿದೆ.


ಮೈಸೂರಿನ ಚಾಮರಾಜ ಕ್ಷೇತ್ರದ ವ್ಯಾಪ್ತಿಗೊಳಪಟ್ಟ ಮಂಜುನಾಥಪುರದಲ್ಲಿ ಮಾಜಿ ಕಾರ್ಪೋರೇಟರ್ ನಂದೀಶ್ ಪ್ರೀತಂ ಅವರು ಕಟ್ಟಡ ಕಾರ್ಮಿಕರು ಹಾಗೂ ಅಲ್ಲಿನ ನಿವಾಸಿಗಳ ಕುಂದು ಕೊರತೆಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಅಸಂಘಟಿತ ಕಾರ್ಮಿಕ ಪ್ರಕೋಷ್ಠ ರಾಜ್ಯ ಸಂಚಾಲಕ ಉಮೇಶ್, ವಕೀಲ ಶಿವರಾಜು ಹೆಚ್.ಎಂ.ಕೃಷ್ಣ ಹೂಟಗಳ್ಳಿ ಇನ್ನಿತರರಿದ್ದರು.

ಕಾಲ ಕಾಲಕ್ಕೆ ಪೌರಕಾರ್ಮಿಕರ ಆರೋಗ್ಯ ತಪಾಸಣೆ

ಮೈಸೂರು,ಜ.2– ಪೌರಕಾರ್ಮಿಕರಿಗೆ ಹಾಗೂ ಸಫಾಯಿ ಕರ್ಮಚಾರಿಗಳಿಗೆ ಗ್ಲೌಸ್, ಶೂಗಳು ಮತ್ತು ಮಾಸ್‌ಗಳನ್ನು ನೀಡಬೇಕು. ಕಾಲ ಕಾಲಕ್ಕೆ ಅವರ ಆರೋಗ್ಯ ತಪಾಸಣೆಯಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಮ್ಯಾನುವಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯ್ದೆ ಸೆಕ್ಷನ್ 24ರಡಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪೌರಕಾರ್ಮಿಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಇದರಿಂದ ಪೌರಕಾರ್ಮಿಕರಿಗೆ ಇರುವ ಕೆಲಸದ ಒತ್ತಡವನ್ನು ಕಡಿಮೆ ಮಾಡಬಹುದು. ಪೌರಕಾರ್ಮಿಕರು ಮರಣ ಹೊಂದಿದರೆ ಕುಟುಂಬದವರಿಗೆ ಅನುಕಂಪ ನೌಕರಿ ನೀಡಬೇಕು. ಮುಂದಿನ ಶೈಕ್ಷಣಿಕ ವರ್ಷ ದಿಂದ ಪ್ರತಿಷ್ಠಿತ ಶಾಲೆಗಳಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಅಗತ್ಯ ದಾಖಲಾತಿಗಳನ್ನು ಮಾಡಿಸುವಂತೆ ಡಿಡಿಪಿಐ ಅವರಿಗೆ ಸೂಚಿಸಿದರು. ನೇರ ಪಾವತಿ ಪೌರಕಾರ್ಮಿಕರ ಬೇಡಿಕೆಗಳನ್ನು ಸರ್ಕಾರಕ್ಕೆ ಕಳುಹಿಸಲಾಗುವುದು. ಜಿಲ್ಲೆಯಲ್ಲಿರುವ ಒಟ್ಟು ಪೌರ ಕಾರ್ಮಿಕರು ಮತ್ತು ಸಫಾಯಿ ಕರ್ಮ ಚಾರಿಗಳ ವಿವರ, ನೇರ ನೇಮಕಾತಿ ಪೌರ ಕಾರ್ಮಿಕರು, ನೇರ ಪಾವತಿ ಪೌರ ಕಾರ್ಮಿಕರು, ಖಾಲಿ ಇರುವ ಹುದ್ದೆಗಳು ಮತ್ತು ಅವರಿಗಿರುವ ಯೋಜನೆಗಳು ಮತ್ತು ಸೌಲಭ್ಯಗಳ ಸಂಪೂರ್ಣ ವಿವರ ವನ್ನು ಮುಂದಿನ ಸಭೆ ಯೊಳಗೆ ನೀಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚಿಸಿದರು.



ಸಮಿತಿಯ ಸದಸ್ಯ ರಾಚಯ್ಯ ಮಾತನಾಡಿ, ಖಾಯಂ ಹಾಗೂ ನೇರ ಪಾವತಿ ಪೌರಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕು. ಈ ಕುರಿತು ಪಾಲಿಸಿ ಲೆವೆಲ್‌ನಲ್ಲೂ ಬದಲಾವಣೆಯಾಗಬೇಕು. ನೇರಪಾವತಿ ಪೌರ ಕಾರ್ಮಿಕರು ಮರಣ ಹೊಂದಿದರೆ ಅವರ ಕುಟುಂಬದವರಿಗೆ ಅನುಕಂಪ ನೌಕರಿ ನೀಡಬೇಕು. ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಬೇಕು. ಪ್ರತಿಷ್ಠಿತ ಶಾಲೆಗಳಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಮೀಸಲಾತಿ ಬೇಕು ಎಂದು ಮನವಿ ಮಾಡಿದರು. ಸಮಿತಿಯ ಸದಸ್ಯ ನಂಜಪ್ಪ ಬಸವನಗುಡಿ ಮಾತನಾಡಿ, ಮನುಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೌರಕಾರ್ಮಿಕರಿಗೆ ಸರ್ಕಾರಿ ಜಾಗದಲ್ಲಿ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದು, ಇವರಿಗೆ ಹಕ್ಕು ಪತ್ರಗಳನ್ನು ನೀಡಬೇಕು. ಸಫಾಯಿ ಕರ್ಮಚಾರಿಗಳ ಆದಿ ದ್ರಾವಿಡ ಸಮುದಾಯಕ್ಕೆ ಸರ್ಕಾರ ಗುರುತಿಸಿ ಮೀಸಲಿರಿಸಿದ್ದ ಹೆಬ್ಬಾಳು ಕಾಲೋನಿಯ ಸರ್ವೇ ನಂ.141 ರಲ್ಲಿ ಎರಡು ಎಕರೆ ಜಾಗವನ್ನು ಆಶ್ರಯ ಸಮಿತಿಗೆ ಸೇರಿಸಿ ರುವುದನ್ನು ವಾಪಸ್ಸು ಸಫಾಯಿ ಕರ್ಮ ಚಾರಿಗಳ ಆದಿ ದ್ರಾವಿಡ ಸಮುದಾಯಕ್ಕೆ ಕೊಡಿಸಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಮೈಸೂರು ಮಹಾ ನಗರ ಪಾಲಿಕೆಯ ಆಯುಕ್ತ ಜಿ.ಲಕ್ಷ್ಮೀ ಕಾಂತ ರೆಡ್ಡಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಾಲತಿರವರನ್ನು ಒಳಗೊಂಡಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.


ಹುಟ್ಟುಹಬ್ಬದ ಶುಭಾಶಯಗಳು
ಡಾಬ ಸ್ವಾಮಣ್ಣ ಸಿದ್ದಲಿಂಗಪುರ
ಶುಭಕೋರುವವರು: ವಿಜಿಕುಮಾರ್, ಸೌಮ್ಯಶ್ರೀ, ಮನುಕುಮಾರ್, ಲಕ್ಷ್ಮಿ, ಚೈತನ್ಯ, ಭೂಮಿಕಗೌಡ, ಗೌರವ್‌ಗೌಡ, ಪಾಲಹಳ್ಳಿ ಸೋಮಣ್ಣ

ರಂಗ ಶಿಬಿರಗಳಿಂದ ಉತ್ತಮ ವ್ಯಕ್ತಿತ್ವ

ಮೈಸೂರು, ಜ.2(ಎಸ್‌ಪಿಎನ್)–ಕಾಲೇಜು ವಿದ್ಯಾರ್ಥಿಗಳು ರಂಗಶಿಬಿರಗಳಿಂದ ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳಲು ಸಾಧ್ಯವಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಅಭಿಪ್ರಾಯಪಟ್ಟರು. ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ದೇಶೀರಂಗ ಸಾಂಸ್ಕೃತಿಕ ಸಂಸ್ಥೆ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಹಕಾರದೊಂದಿಗೆ ನಡೆದ ರಂಗೆ ನೃತ್ಯೋತ್ಸವ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶೀರಂಗ ಸಂಸ್ಥೆಯ ಕೃಷ್ಣಜನಮನ ಮತ್ತು ಬಿ.ಎಸ್. ದಿನಮಣಿ ದಂಪತಿ ಕಳೆದ 18 ವರ್ಷಗಳಿಂದ ಕಾಲೇಜು ವಿದ್ಯಾರ್ಥಿಗಳಿಗೆ ರಂಗಶಿಬಿರಗಳ ಮೂಲಕ ಜಾನಪದ ನೃತ್ಯಗಳಾದ ಡೊಳ್ಳುಕುಣಿತ, ಜನಪದ ಹಾಡು, ಪೂಜಾಕುಣಿತ, ಕಂಸಾಳೆ, ಕೋಲಾಟ, ಮಾರಿಕುಣಿತ ನೃತ್ಯಗಳನ್ನು ವಿದ್ಯಾರ್ಥಿಗಳು ಕಲಿತು ಇಂದಿನ ವೇದಿಕೆಯಲ್ಲಿ ಪ್ರದರ್ಶಿಸುತ್ತಿದ್ದಾರೆ. ಪ್ರತಿ ವರ್ಷ 30ರಿಂದ 50 ವಿದ್ಯಾರ್ಥಿಗಳಂತೆ ಇಲ್ಲಿಯವರೆಗೆ ಅಂದಾಜು 3500 ವಿದ್ಯಾರ್ಥಿಗಳು ರಂಗಶಿಬಿರದ ಪ್ರಯೋಜನ ಪಡೆದಿದ್ದಾರೆ. ಅದರಲ್ಲಿ ಕೆಲವರು ಸರ್ಕಾರಿ ಹುದ್ದೆಗಳನ್ನು ಪಡೆದಿದ್ದು, ದೇಶಿರಂಗ ಸಂಸ್ಥೆ ಕಾರ್ಯ ಶ್ಲಾಘನೀಯ ಎಂದರು. ಈ ಶಿಬಿರದಲ್ಲಿ ಯೋಗ, ಜಾನಪದ ಕುರುತು ಉಪನ್ಯಾಸ, ಬದುಕು ರೂಪಿಸಿಕೊಳ್ಳುವ ಬಗ್ಗೆ ತಜ್ಞರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗುತ್ತಿದೆ. ಇದರಿಂದ ಶಿಬಿರದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರು ಉತ್ತಮ ವ್ಯಕ್ತಿತ್ವ ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಎಂದರು. ಈ ವೇಳೆ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಸೇರಿದಂತೆ ಇತರೆ ಕಲಾವಿದರು ಉಪಸ್ಥಿತರಿದ್ದರು.

NAVI NIVAS
Rs.1999/-Sqft (above 25 square)
Plan Approval + Architectural Elevation + Construction + Interior +Furniture + Landscaping
Call: 7676768868

ನಾಟ್ಯಾಚಾರ್ಯ ವಿಷ್ಣುದಾಸ್ ಸಂಸ್ಮರಣಾ ನೃತ್ಯೋತ್ಸವ

ಮೈಸೂರು, ಜ.2– ಭರತ ನಾಟ್ಯ ಕಲೆಯನ್ನು ಮಕ್ಕಳಿಗೆ ಕಲಿಸಿ, ಉಳಿಸಿ ಬೆಳೆಸಬೇಕು ಎಂದು ಮೇಲುಕೋಟೆ ಉಪ ತಹಶೀಲ್ದಾರರಾದ ರಾಜೇಶ್ ಕರೆ ನೀಡಿದರು

ಮೈಸೂರಿನ ಕುವೆಂಪುನಗರದಲ್ಲಿರುವ ಗಾನ ಭಾರತಿ ವೀಣೆ ಶೇಷಣ್ಣ ಭವನದಲ್ಲಿ ಭಾರತೀಯ ನೃತ್ಯ ಕಲಾಪರಿಷತ್ ಆಯೋಜಿಸಿದ ನಾಟ್ಯಾಚಾರ್ಯ ಎಂ. ವಿಷ್ಣುದಾಸ್ ಸಂಸ್ಮರಣಾ 32ನೇ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ನೃತ್ಯ ಸೇವಾ ಸಿಂಧು 2022ರ ಪ್ರಶಸ್ತಿಯನ್ನು ಶ್ರೀಮತಿ ಗೀತಾ ನಾರಾಯಣ್, ನೃತ್ಯ ಕಲಾ ಸಿಂಧು 2022ರ ಪ್ರಶಸ್ತಿ ವಿದುಷಿ ಗೀತಾ ಸರಳಾಯ ಹಾಗೂ ವಿದುಷಿ ವಾರಿಜ ನಲಿಗೆ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದ ಅವರು, ಪಾಶ್ಚಿಮಾತ್ಯ ಕಲೆ, ಸಂಸ್ಕೃತಿಯನ್ನು ತಿರಸ್ಕರಿಸಿ, ಪ್ರಪಂಚದಲ್ಲೇ ಗೌರವ–ಘನತೆ ತಂದುಕೊಟ್ಟಿರುವ ಭಾರತೀಯ ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸುವ ಭರತ ನಾಟ್ಯ ಕಲೆಯನ್ನು ತಮ್ಮ ಮಕ್ಕಳಿಗೆ ಕಲಿಸಿ, ಉಳಿಸಿ ಬೆಳೆಸಲು ಪೋಷಕರು ಮತ್ತು ಸಂಘ ಸಂಸ್ಥೆಗಳು ಮುಂದಾಗಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಾರತೀಯ ನೃತ್ಯ ಕಲಾ ಪರಿಷತ್ ಗೌರವ ಕಾರ್ಯದರ್ಶಿ ವಿದುಷಿ ಡಾಕ್ಟರ್ ಕುಮದೀನಿ ಅಚ್ಚಿ ವಹಿಸಿದ್ದರು.



ಇದೇ ಸಂದರ್ಭದಲ್ಲಿ ಭರತನಾಟ್ಯ ಪ್ರದೇಶಿಸಿದ ವಿದುಷಿ ಗೀತಾ ಸರಳಾಯ ಮತ್ತು ವಿದುಷಿ ರಶ್ಮಿ ಚಿದಾನಂದ್‌ರವರು ನಡೆಸಿಕೊಟ್ಟರು ಆನಂತರ ಶ್ರೀ ಕೃಷ್ಣ ಲೀಲಾಮೃತ ನೃತ್ಯ ನಾಟಕ ಪ್ರದರ್ಶನವನ್ನು ಕಲಾರ್ಪಣಂ ನೃತ್ಯ ತಂಡ, ನೆರವೇರಿಸಿದರು. ಸಭೆಯಲ್ಲಿ ಪರಿಷತ್ತಿನ ಪದಾಧಿಕಾರಿಗಳಾದ ವಿದುಷಿ ಅನಿತಾ ಸಿ.ಎನ್, ವಿದುಷಿ ಭಾವನ, ವಿದುಷಿ ದಿಶಾ ಮಾರಿಗೋಳಿ, ಕು. ಸುಶ್ಮಿತಾ ಹಾಜರಿದ್ದರು.

ಪ್ರೊ.ಭಾಷ್ಯಂ ಸ್ವಾಮೀಜಿಗೆ ಕದಂಬ ಸೇವಾರತ್ನ ಪ್ರಶಸ್ತಿ ಪ್ರದಾನ

ಮೈಸೂರು, ಜ.2– ಕನ್ನಡ ನಾಡಿನ ಜ್ಞಾನ ಕಳಸದಂತಿರುವ ವಿದ್ವತ್ತಿನ ಮಹಾನದಿ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಅವರು ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಸದಾ ಹರಿಯುವ ಸೇವಾ ನದಿಯಂತಿದ್ದು ಸೇವೆ ಎಂಬುದಕ್ಕೆ ಹೊಸ ಭಾಷ್ಯ ಬರೆದಿದ್ದಾರೆ ಎಂದು ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

ಮಂಡ್ಯದ ಮಣ್ಣಿನ ಕದಂಬ ಸೈನ್ಯ ಕನ್ನಡ ಸಂಘಟನೆಯು ಮೈಸೂರು ನಗರದ ರೋಟರಿ ಭವನದಲ್ಲಿ ಏರ್ಪಡಿಸಿದ್ದ ಕನ್ನಡ ಕುಲ ದೇವತೆ ಶ್ರೀ ಭುವನೇಶ್ವರಿ ಪ್ರಶಸ್ತಿ ಮತ್ತು ನಾಡ ಕವಿ ಹುಯಿಲಗೋಳ ನಾರಾಯಣರಾವ್ ಪ್ರಶಸ್ತಿ ಹಾಗೂ ಕದಂಬ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕನ್ನಡ ಕುಲದೇವತೆ ಶ್ರೀ ಭುವನೇಶ್ವರಿ ಪ್ರಶಸ್ತಿ ಪುರಸ್ಕೃತ ಪ್ರೊ.ಭಾಷ್ಯಂ ಸ್ವಾಮೀಜಿ ಅವರನ್ನು ಕುರಿತು ಅಭಿನಂದನಾ ಭಾಷಣ ಮಾಡಿದ ಅವರು, ಭಾಷ್ಯಂ ಸ್ವಾಮೀಜಿಯವರು ತಮ್ಮ ಜ್ಞಾನ ಕೋಶದ ಮೂಲಕ ಸರ್ವ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದು ಸಾವಿರಾರು ಶಿಷ್ಯಕೋಟಿಯನ್ನು ಸೃಷ್ಟಿಸಿರುವ ಸಮಾಜಮುಖಿ ಸಂತರೆಂದರು.



ಪ್ರಶಸ್ತಿ ಸ್ವೀಕರಿಸಿ ಮಾತ ನಾಡಿದ ಭಾಷ್ಯಂ ಸ್ವಾಮೀಜಿ ಅವರು, ತನ್ನ ಒಂದು ಕಣ್ಣಲ್ಲಿ ಮಂದಿರ ಮತ್ತೊಂದು ಕಣ್ಣಲ್ಲಿ ಮಸೀದಿ ಎಂದು ಟಿಪ್ಪು ಸುಲ್ತಾನ್ ಹೇಳುತ್ತಿದ್ದ. ಹಾಗೆಯೇ ನನ್ನ ಕಣ್ಣುಗಳಲ್ಲಿ ಕೂಡ ಮಂದಿರ, ಮಸೀದಿ, ಚರ್ಚ್‌ಗಳೆಲ್ಲವೂ ಒಂದೇ ಆಗಿವೆ. ಎಲ್ಲಾ ಧರ್ಮಗಳು ಸಾರುವುದು ಮಾನವೀಯತೆಯನ್ನೇ. ಹಾಗಾಗಿ ನಾವೆಲ್ಲರೂ ಒಂದೇ ಎಂಬ ಸದ್ಭಾವನೆಯಲ್ಲಿ ಮನುಷ್ಯರಾಗಿ ಬದುಕೋಣ ಎಂದರು.

ನಂತರ ಕದಂಬ ಸಾಮ್ರಾಜ್ಯದ ರಾಜಧಾನಿ ಬನವಾಸಿಯ ಸಿದ್ದಾಪುರದ ಸಾಹಿತಿ ಗಂಗಾಧರ ಕೊಳಗಿ ಅವರಿಗೆ ನಾಡ ಕವಿ ಹುಯಿಲಗೋಳ ನಾರಾಯಣ ರಾವ್ ಪ್ರಶಸ್ತಿಯನ್ನೂ, ಮಂಡ್ಯದ ಥಾಮಸ್ ಬೆಂಜಮಿನ್ ಉಕಿಟ್ಟಿ ಎ.ಜ್ಯೆ ಕುಮಾರಿ ಹಾಗೂ ದೇವನಹಳ್ಳಿ ದೇವರಾಜು ಅವರಿಗೆ ಕದಂಬ ದಂಪತಿ ಪ್ರಶಸ್ತಿಯನ್ನೂ, ಖ್ಯಾತ ವಿದುಷಿ ರಾಜಲಕ್ಷ್ಮಿ ಶ್ರೀಧರ್, ಮುರುಗೇಶ್ ಬಸ್ತಿಕೊಪ್ಪ, ಚಂದ್ರಶೇಖರ ಆರಾಧ್ಯ, ಭಾಗ್ಯಲಕ್ಷ್ಮಿ ಶಿವನಂಜಯ್ಯ ಗೌರಮ್ಮಗೋವಿಂದರಾಜು, ಗಂಜಾಂ ಪಾರ್ವತಮ್ಮ, ಮಹಮ್ಮದ್ ಶಫಿಉಲ್ಲಾ, ಇ.ಶಿವಸ್ವಾಮಿ, ಎಂ. ಪುಟ್ಟಸ್ವಾಮಿ, ಆಟೋ ಚಾಲಕರಾದ ನಂಜುಂಡಸ್ವಾಮಿ, ಮಂಚಣ್ಣ, ಪುಟ್ಟರಾಜು ಹಾಗು ಬಸವರಾಜು ಅವರುಗಳಿಗೆ ಕದಂಬ ಸೇವಾರತ್ನ ಪ್ರಶಸ್ತಿಯನ್ನೂ, ಭಾಷ್ಯಂ ಸ್ವಾಮೀಜಿ ಅವರು ಪ್ರದಾನಿಸಿ ಸನ್ಮಾನಿಸಿದರು.

ಕದಂಬ ಸೈನ್ಯದ ಸಂಸ್ಥಾಪಕ ರಾಜ್ಯಾಧ್ಯಕ್ಷ ಬೇಕರಿ ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಶ್ರೀರಂಗಪಟ್ಟಣ ತಾಲ್ಲೂಕು ಕಸಾಪ ಅಧ್ಯಕ್ಷೆ ಸರಸ್ವತಮ್ಮ ಬಸವರಾಜು, ಲೆಕ್ಕ ಪರಿಶೋಧಕ ಟಿ.ನಾರಾಯಣಸ್ವಾಮಿ, ಕನ್ನಡ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ, ಎಸ್.ಬಾಲಕೃಷ್ಣ, ಸಿ. ಶಿವಪ್ಪ, ಎಸ್.ಶಿವಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ


ಕರ್ನಾಟಕ ಸೇನಾ ಪಡೆಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಭಾನುವಾರ ಬಿಡುಗಡೆ ಮಾಡಿದರು. ದೇವಸ್ಥಾನದ ಸಂಸ್ಥಾಪಕ ಶ್ರೀ ಭಾಷ್ಯಂ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ದೇವಸ್ಥಾನದ ಮುಖ್ಯಸ್ಥ ಶ್ರೀನಿವಾಸ್, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ರಾಮು, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಚಿಂತಕ ಕೆ.ರಘುರಾಂ ವಾಜಪೇಯಿ, ಸೇವಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಎಂ.ಎನ್.ದೊರೆಸ್ವಾಮಿ, ಲಕ್ಷ್ಮಿನಾರಾಯಣ ಶೆಣೈ, ಸುರೇಶ್ ಗೋಲ್ಡ್, ಡಾ.ಸಿ.ಜಿ.ರಾಮಚಂದ್ರ, ರಾಘವೇಂದ್ರ ಶೇಠ್, ಡಾ.ಶಾಂತರಾಜೇ ಅರಸ್, ಸಿ.ಹೆಚ್.ಕೃಷ್ಣಯ್ಯ, ಪ್ರಭುಶಂಕರ, ವೈ.ಕೆ.ನಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

11ನೇ ವರ್ಷದ ಪುಣ್ಯಸ್ಮರಣೆ

ಡಾ॥ ಎಂ.ಎಸ್.ಚೆಲುವೇಗೌಡ
ಬೃಂದಾವನ ಬಡಾವಣೆ, ಮೈಸೂರು
ನಿಧನ : 2.1.2012
ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖಿತಪ್ತರು : ಪತ್ನಿ ಲಕ್ಷ್ಮಮ್ಮ, ಮಗಳು M.C.ಮಮತ, B.S.ಜಗದೀಶ್, ಹಾಗೂ ಕುಟುಂಬ ವರ್ಗದವರು.

ವೈಕುಂಠ ಸಮಾರಾಧನೆ

ಇವರು ದಿ:21–12–22ರ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧ ವೈಕುಂಠ ಸಮಾರಾಧನಾ ಕಾರ್ಯವನ್ನು ದಿ: 2–1–2023ರ ಸೋಮವಾರ ಮಧ್ಯಾಹ್ನ 12.30ಕ್ಕೆ ಹುಣಸೂರು ತಾಲೂಕು ರತ್ನಪುರಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಖಿತಪ್ತರು: ಪತ್ನಿ, ಮಕ್ಕಳು, ಕುಟುಂಬವರ್ಗ ಮತ್ತು ಬಂಧು ಮಿತ್ರರು ಹಾಗೂ ಗ್ರಾಮಸ್ಥರು, ರತ್ನಪುರಿ.
ಆರ್.ಸತ್ಯನಾರಾಯಣರಾವ್ ಖಿರಾಡೆ

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು